## ಅಧ್ಯಾಯ – ೧೬

# ಇತರ ಸಮಾಜ ಸೇವಾ ಸೌಲಭ್ಯಗಳು

ವ್ಯವಸಾಯ, ಶಿಕ್ಷಣ, ವೈದ್ಯಕೀಯ ಮುಂತಾದ ಮೂಲಭೂತ ಸೇವೆಗಳೇ ಅಲ್ಲದೆ ಇನ್ನೂ ಅನೇಕ ಸಮಾಜ ಸೇವಾ ಸೌಲಭ್ಯಗಳನ್ನು ಪ್ರಜೆಗಳಿಗೆ ಒದಗಿಸುವ ಉದ್ದೇಶದಿಂದ ಹಲವಾರು ಕಾರ್ಯಕ್ರಮಗಳನ್ನು ಸರ್ಕಾರವು ಕೈಗೊಳ್ಳುತ್ತಿದೆ. ರಾಜ್ಯದ ಜನತೆಯ ಸಾಮಾಜಿಕ, ಆರ್ಥಿಕ ಹಾಗೂ ಶೈಕ್ಷಣಿಕ ಸ್ಥಾನಮಾನಗಳನ್ನು ಅಭಿವೃದ್ಧಿಪಡಿಸುವುದು ಸರ್ಕಾರದ ಮುಖ್ಯ ಧ್ಯೇಯವಾಗಿದೆ. ಸರ್ಕಾರವೇ ಅಲ್ಲದೇ ಇತರ ಹಲವಾರು ಸ್ವಯಂ ಸೇವಾ ಮತ್ತು ಖಾಸಗಿ ಸೇವಾ ಸಂಸ್ಥೆಗಳೂ, ಇಂತಹ ಕಾರ್ಯ ಚಟುವಟಿಕೆಗಳನ್ನು ನಡೆಸುತ್ತವೆ. ಸಮಾಜದ ಕಾರ್ಮಿಕ ವರ್ಗ, ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗ, ಹಿಂದುಳಿದ ವರ್ಗ ಮತ್ತು ಅಲ್ಪಸಂಖ್ಯಾತರ ವರ್ಗ, ಮಹಿಳೆಯರು ಮತ್ತು ಮಕ್ಕಳು, ಹಾಗೂ ಅಂಗವಿಕಲರುಗಳ ಕಲ್ಯಾಣಕ್ಕಾಗಿ ಕಾರ್ಯ ನಿರ್ವಹಿಸುತ್ತಿರುವ ವಿವಿಧ ಇಲಾಖೆ ಹಾಗೂ ಸ್ವಯಂ ಸೇವಾ ಸಂಸ್ಥೆಗಳ ಚಟುವಟಿಕೆಗಳಿಗೆ ಸಂಬಂಧಿಸಿದ ಅಂಶಗಳನ್ನು ಈ ಅಧ್ಯಾಯದಲ್ಲಿ ಸಂಕ್ಷಿಪ್ತವಾಗಿ ವಿವರಿಸಲಾಗಿದೆ.

### ಕಾರ್ಮಿಕರ ಕಲ್ಯಾಣ

ಕಾರ್ಮಿಕರ ಅಭಿವೃದ್ಧಿಗೋಸ್ಕರ ಸರ್ಕಾರ, ಉದ್ದಿಮೆದಾರರು ಮತ್ತು ಕಾರ್ಮಿಕ ಸಂಘಗಳು ಕೈಗೊಳ್ಳುವ ಕಾನೂನುಬದ್ಧವಾದ ಹಾಗೂ ಸ್ವಯಂಪ್ರೇರಿತ ಕಾರ್ಯಕ್ರಮಗಳನ್ನು ಕಾರ್ಮಿಕ ಕಲ್ಯಾಣವು ಒಳಗೊಂಡಿರುತ್ತದೆ. ಈ ಕಾರ್ಯಕ್ರಮಗಳು ಕಾರ್ಮಿಕರ ಕಾರ್ಯದಕ್ಷತೆ ಮತ್ತು ಅವರ ಸ್ಥಿತಿಗತಿಗಳನ್ನು ಉತ್ತಮಗೊಳಿಸುವ ಕ್ರಮಗಳಷ್ಟೇ ಆಗಿರದೆ, ಅವರಿಗೆ ಸಾಮಾಜಿಕ ಭದ್ರತೆ, ಶೈಕ್ಷಣಿಕ, ಸಾಂಸ್ಕೃತಿಕ ಮತ್ತು ವಸತಿ ಸೌಕರ್ಯಗಳನ್ನೂ ಒದಗಿಸಿ ಕೊಡುವ ಕಾರ್ಯಕ್ರಮಗಳಾಗಿರುತ್ತವೆ.

ಕರ್ನಾಟಕದಲ್ಲಿ ಎರಡನೇ ಮಹಾಯುದ್ಧಕ್ಕೆ ಪೂರ್ವದಲ್ಲಿಯೇ ಕೆಲವು ಪ್ರಗತಿಪರ ಹಾಗೂ ವಿವೇಕಿ ಉದ್ದಿಮೆದಾರರು ಸ್ವಪ್ರೇರಣೆಯಿಂದಲೇ ತಮ್ಮ ಕಾರ್ಖಾನೆಗಳಲ್ಲಿನ ಕಾರ್ಮಿಕರಿಗಾಗಿ ಕೆಲವು ಕಾರ್ಮಿಕ ಕಲ್ಯಾಣ ಸೌಲಭ್ಯಗಳನ್ನು ಒದಗಿಸಿದ್ದರು. ಆದರೆ ಈ ಸೌಲಭ್ಯಗಳು ಸಾಕಷ್ಟು ವ್ಯಾಪಕವಾಗಿಲ್ಲದಿದ್ದುದರಿಂದ ಹಾಗೂ ಕಾರ್ಮಿಕ

ಸಂಘಗಳು ಅವುಗಳನ್ನು ನಡೆಸಲು ಅಗತ್ಯ ಸಾಮರ್ಥ್ಯ ಹೊಂದಿರಲಿಲ್ಲವಾದ್ದರಿಂದ ಸರ್ಕಾರದ ಮಧ್ಯ ಪ್ರವೇಶ ಅಗತ್ಯವಾಯಿತು. ಅದರಂತೆ ಕೇಂದ್ರ ಸರ್ಕಾರದ ೧೯೪೮ರ ಕಾರ್ಖಾನೆಯ ಕಾನೂನಿನನ್ವಯ ರಾಜ್ಯದಲ್ಲಿ ೧೯೫೦ರಿಂದ ಪ್ರತಿಯೊಬ್ಬ ಉದ್ದಿಮೆದಾರನೂ ತನ್ನ ಕಾರ್ಖಾನೆಯಲ್ಲಿ ನೇಮಕವಾಗಿರುವ ಕಾರ್ಮಿಕರಿಗೆ ಕುಡಿಯಲು ತಂಪಾದ ಹಾಗೂ ಶುದ್ಧವಾದ ನೀರು, ಶೌಚಗೃಹ, ೨೫೦ ಕ್ಕೂ ಹೆಚ್ಚು ಕಾರ್ಮಿಕರಿರುವ ಕಾರ್ಖಾನೆಗಳಲ್ಲಿ ಉಪಹಾರ ಮಂದಿರ, ೫೦ ಕ್ಕೂ ಹೆಚ್ಚು ಮಹಿಳಾ ಕಾರ್ಮಿಕರಿರುವ ಪ್ರತಿಯೊಂದು ಕಾರ್ಖಾನೆಯಲ್ಲೂ ಶಿಶುವಿಹಾರ, ವಿಶ್ರಾಂತಿ ಗೃಹ, ೧೫೦ ಕ್ಕೂ ಹೆಚ್ಚು ಕಾರ್ಮಿಕರಿರುವ ಪ್ರತಿ ಕಾರ್ಖಾನೆಯಲ್ಲೂ ಉಪಹಾರ ಕೋಣೆ, ಮುಂತಾದ ಸೌಲಭ್ಯಗಳನ್ನು ಕಡ್ಡಾಯವಾಗಿ ಒದಗಿಸಬೇಕಾಯಿತು. ಕಾರ್ಮಿಕರ ಸುರಕ್ಷತೆ ಮತ್ತು ಆರೋಗ್ಯದ ದೃಷ್ಟಿಯಿಂದ ಎಲ್ಲಾ ದೊಡ್ಡ ಕಾರ್ಖಾನೆಗಳಲ್ಲೂ ಆವಿ, ಹೊಗೆ, ಧೂಳು, ಇತ್ಯಾದಿ ಕಲ್ಮಶಗಳು ಹೊರಗೆ ಹೋಗಲು ಸೂಕ್ತ ವ್ಯವಸ್ಥೆ, ಆಕಸ್ಮಿಕಗಳನ್ನು ತಡೆಗಟ್ಟುವ ದೃಷ್ಟಿಯಿಂದ ಯಂತ್ರಗಳಿಗೆ ಬೇಲಿ ಅಥವಾ ಕಟಕಟೆಯನ್ನು ಒದಗಿಸುವುದು, ಕಾರ್ಮಿಕರಿಗೆ ಸುರಕ್ಷತಾ ವಸ್ತ್ರ, ಪಾದರಕ್ಷೆ ಹಾಗೂ ಕನ್ನಡಕಗಳನ್ನು ಒದಗಿಸುವುದೇ ಮುಂತಾದ ಸೌಲಭ್ಯಗಳು ಕಡ್ಡಾಯವಾಗಿ ಜಾರಿಗೆ ಬಂದವು. ಜಿಲ್ಲೆಗಳಲ್ಲಿ ಕೆಲವು ಬೃಹತ್ ಕಾರ್ಖಾನೆಗಳು, ತಮ್ಮ ಕಾರ್ಮಿಕರ ಕಾಲೋನಿಗಳಲ್ಲಿ, ಆರೋಗ್ಯ ಮತ್ತು ನೈರ್ಮಲ್ಯಗಳ ಕಡೆ ಹೆಚ್ಚು ಗಮನ ಕೊಟ್ಟವು. ಉಪಹಾರ ಕೇಂದ್ರ, ಶಿಶು ವಿಹಾರ (ಕ್ರೆಚಸ್), ಹಾಗೂ ವಿಶ್ರಾಂತಿಕೋಣೆಗಳನ್ನು ಕೆಲಸ ಮಾಡುವ ಸ್ಥಳದಲ್ಲಿ ಒದಗಿಸಲಾಯಿತು. ಸಾಮಾನ್ಯ ಭವಿಷ್ಯ ನಿಧಿ ಸೌಕರ್ಯ, ಕಾರ್ಮಿಕ ಪರಿಹಾರ, ವೇತನ ಸಹಿತ ರಜಾ ಸೌಲಭ್ಯಗಳೇ ಮುಂತಾದ ಕಾನೂನುಬದ್ಧವಾದ ಸೌಲಭ್ಯಗಳಲ್ಲದೆ, ವಾಚನಾಲಯ, ಗ್ರಂಥಾಲಯ, ವೈದ್ಯಕೀಯ, ಶೈಕ್ಷಣಿಕ ಮತ್ತು ಕ್ರೀಡಾ ಸೌಕರ್ಯಗಳನ್ನೂ ಕೆಲವು ಅಭಿವೃದ್ಧಿ ಹೊಂದಿದ ಕಾರ್ಖಾನೆಗಳಲ್ಲಿ ಒದಗಿಸಲಾಯಿತು. ಮಂಡ್ಯದ ಮೈಸೂರು ಶುಗರ್ ಕಂಪನಿ, ಪಾಂಡವಪುರದ ಸಹಕಾರ ಸಕ್ಕರೆ ಕಾರ್ಖಾನೆ ಮತ್ತು ಬೆಳಗೊಳದ ಮಂಡ್ಯ ನ್ಯಾಶನಲ್ ಪೇಪರ್ ಮಿಲ್ಸ್‌ಗಳು ಇಂತಹ ಸೌಲಭ್ಯಗಳನ್ನು ೧೯೬೫–೬೬ರ ವೇಳೆಗೇ ಒದಗಿಸಿದ್ದವು.

ಸ್ವಾತಂತ್ರ್ಯ ಪೂರ್ವದ ದಿನಗಳಲ್ಲಿ ಜಿಲ್ಲೆಯಲ್ಲಿ ಕೈಗಾರಿಕಾ ಅಭಿವೃದ್ಧಿ ಸೀಮಿತವಾಗಿದ್ದುದರಿಂದ ಕಾರ್ಮಿಕ ಸಂಘಟನೆಯು ಸಹ ಸೀಮಿತವಾಗಿತ್ತು. ಕಾರ್ಮಿಕರ ಸೇವಾ ಭದ್ರತೆ, ಸೇವಾ ನಿಯಮಗಳ ರಕ್ಷಣೆ, ಸುಧಾರಣೆ, ಶಾಂತಿಪಾಲನೆ, ಹಾಗೂ ಮನರಂಜನಾ ಚಟುವಟಿಕೆಗಳೇ ಮುಂತಾದವುಗಳಿಗೆ ಸಂಬಂಧಿಸಿದಂತೆ ಕಾರ್ಮಿಕರು ಸಂಘಟಿತರಾಗುವುದು ಅಗತ್ಯವಾಗಿತ್ತು. ಮಂಡ್ಯದ ಮೈಸೂರು ಸಕ್ಕರೆ ಕಾರ್ಖಾನೆಯಲ್ಲಿ ೧೯೪೯ರ ವೇಳೆಗೆ ೪೦೦ ಜನ ಮಹಿಳೆಯರೂ ಸೇರಿದಂತೆ ಒಟ್ಟು ೪,೨೦೦ ಕಾರ್ಮಿಕರು ದುಡಿಯುತ್ತಿದ್ದರು. ಅವರಲ್ಲಿ ದಿನಗೂಲಿ ನೌಕರರೂ, ಫಾರಂನ ಕೃಷಿ ಕಾರ್ಮಿಕರೂ ಸೇರಿದ್ದು ನೌಕರರ ಸಂಘದ ಮುಖಂಡರಾಗಿ ಹೆಚ್.ಸಿ.ದಾಸಪ್ಪ, ಹೆಚ್.ಕೆ.ವೀರಣ್ಣಗೌಡ, ಮತ್ತು ಎ.ರಾಮಣ್ಣ ನೌಕರರ ಪರವಾಗಿ ಹೋರಾಡಿದರು. ಕೆಲಸ ಖಾಯಂಗೊಳಿಸುವಿಕೆ, ವೇತನ ತಾರತಮ್ಯ ನಿವಾರಣೆ, ರಜೆ ಸೌಲಭ್ಯ, ಬೋನಸ್ ಹಾಗೂ ಫಾರಂ ಕಾರ್ಮಿಕರನ್ನೂ ಸಹ ಕಾರ್ಖಾನೆಯ ನೌಕರರನ್ನಾಗಿ ಪರಿಗಣಿಸಬೇಕೆಂಬ ಬೇಡಿಕೆಗಳೊಂದಿಗೆ ೧೯೪೯ರಲ್ಲಿ ನೌಕರರ ಪ್ರಥಮ ಮುಷ್ಕರ ಪ್ರಾರಂಭಗೊಂಡಿತು. ಚಳವಳಿ ತೀವ್ರಗೊಂಡು, ಪೋಲಿಸರು ಮುಷ್ಕರ ನಿಯಂತ್ರಿಸಲು, ಲಾಠಿ ಛಾರ್ಜ್ ಮಾಡಿ, ಅಶ್ರುವಾಯು ಸಿಡಿಸಿದರು. ಬಂಧಿಸಲ್ಪಟ್ಟ ಇಪ್ಪತ್ತು ಜನರಲ್ಲಿ ಶಿವಲಿಂಗಯ್ಯ ಎಂಬುವವರು ಮೊದಲ ಅಪರಾಧಿಯಾಗಿದ್ದರು. ಅನಂತರ ಆಡಳಿತ ಮಂಡಳಿ ಮತ್ತು ಕಾರ್ಮಿಕರ ನಡುವೆ ಒಪ್ಪಂದಗಳಾಗಿ, ಬೇಡಿಕೆಗಳು ಈಡೇರಿಸಲ್ಪಟ್ಟವು. ಇದರಿಂದ ಕಾರ್ಮಿಕರಿಗಾಗಿ ಇರುವ ಕಾನೂನಿನ ಸವಲತ್ತು ಹಾಗೂ ಸಂಘಟನಾ ಶಕ್ತಿಯ ಪರಿಚಯವಾಗಿ, ಜಿಲ್ಲೆಯಲ್ಲಿ ಕಾರ್ಮಿಕರ ಸಂಘಟನೆ ಬಲಗೊಂಡಿತು. ೧೯೭೧ರ ಅಂಕಿ ಅಂಶಗಳ ಪ್ರಕಾರ ಆ ಸಮಯದಲ್ಲಿ ಜಿಲ್ಲೆಯಲ್ಲಿ ಒಟ್ಟು ೫೨ ಕಾರ್ಖಾನೆಗಳಿದ್ದು, ೪,೧೧೯ ಕೆಲಸಗಾರರಿದ್ದರು. ಈಗ ಜಿಲ್ಲೆಯ ನಗರ ಪ್ರದೇಶಗಳಲ್ಲಿ ಕೆಲವು ಬೃಹತ್ ಕೈಗಾರಿಕೆಗಳಿವೆಯಾದರೂ ಗ್ರಾಮಾಂತರ ಭಾಗದಲ್ಲಿ ಕೈಗಾರಿಕೆಗಳೂ ಕಡಿಮೆ ಇದ್ದು ಕಾರ್ಮಿಕ ಸಂಘಟನೆಗಳೂ ಹೆಚ್ಚಿನ ಪ್ರಮಾಣದಲ್ಲಿ ಆಗಿಲ್ಲ. ಇದು ಕೃಷಿ

ಪ್ರಧಾನ ಜಿಲ್ಲೆಯಾದರೂ ಕೃಷಿ ಕಾರ್ಮಿಕ ಸಂಘಟನೆಗಳು ಗಣನೀಯವಾಗಿಲ್ಲ. ಡಿಸೆಂಬರ್ ೨೦೦೨ದವರೆಗೆ ಮಂಡ್ಯ ಜಿಲ್ಲೆಯಲ್ಲಿ ನೋಂದಣಿಗೊಂಡಿರುವ ೩೫ ಕಾರ್ಖಾನೆಗಳು ಇದ್ದು, ಆ ಕಾರ್ಖಾನೆಗಳಲ್ಲಿ ೯,೬೯೪ ಕಾರ್ಮಿಕರು ಕೆಲಸ ಮಾಡುತ್ತಿದ್ದಾರೆ.

## ಟ್ರೇಡ್ ಯೂನಿಯನ್

ಕಾರ್ಮಿಕ ಮತ್ತು ವ್ಯವಸ್ಥಾಪಕ ವರ್ಗದ ನಡುವೆ ಭಿನ್ನಾಭಿಪ್ರಾಯಗಳನ್ನು ಹೋಗಲಾಡಿಸಿ, ಕಾರ್ಮಿಕರ ಅಹವಾಲುಗಳನ್ನು ಪರಿಶೀಲಿಸಿ ಸೂಕ್ತ ಕ್ರಮ ಕೈಗೊಳ್ಳುವ ಸಲುವಾಗಿ, ಇಂಡಿಯನ್ ಟ್ರೇಡ್ ಯೂನಿಯನ್ ಕಾಯಿದೆಯು, ಟ್ರೇಡ್ ಯೂನಿಯನ್‌ಗಳ ಸ್ಥಾಪನೆಯನ್ನು ಬೆಂಬಲಿಸುತ್ತದೆ. ಕಾರ್ಮಿಕರ ಕ್ಷೇಮಾಭಿವೃದ್ಧಿಯನ್ನು ಸುಧಾರಿಸಲು ಈ ಕಾಯಿದೆಯಲ್ಲಿ ಅವಕಾಶಗಳನ್ನು ಮಾಡಿಕೊಡಲಾಗಿದೆ. ಇಂಡಿಯನ್ ಟ್ರೇಡ್ ಯೂನಿಯನ್ ಕಾಯಿದೆಯಡಿ, ಆಗಸ್ಟ್ ೧೯೬೬ರಲ್ಲಿ, ಜಿಲ್ಲೆಯಲ್ಲಿ ನೋಂದಣಿಗೊಂಡ ಟ್ರೇಡ್ ಯೂನಿಯನ್‌ಗಳ ವಿವರಗಳು ಕೆಳಗಿನಂತಿವೆ.

**ಕೋಷ್ಟಕ ೧೬.೧ ಜಿಲ್ಲೆಯ ಟ್ರೇಡ್ ಯೂನಿಯನ್ ವಿವರ (೧೯೬೬ರಲ್ಲಿದ್ದಂತೆ)**

| ಕ್ರ.ಸಂ | ಸಂಘಟನೆಯ ಹೆಸರು | ಸ್ಥಳ |
|---|---|---|
| ೧ | ಮಂಡ್ಯ ಡಿಸ್ಟ್ರಿಕ್ಟ್ ಮುನ್ಸಿಪಲ್ ವರ್ಕರ್ಸ್ ಯೂನಿಯನ್ | ಮಂಡ್ಯ |
| ೨ | ಮಂಡ್ಯ ವಿಶ್ವೇಶ್ವರಯ್ಯ ಕೆನಾಲ್ ಫಾರಂ ಅಗ್ರಿಕಲ್ಚರಲ್ ಅಂಡ್ ಅಲೈಡ್ ಎಂಪ್ಲಾಯಿಸ್ ಯೂನಿಯನ್ | ಮಂಡ್ಯ |
| ೩ | ಮೈಸೂರ್ ಕೆಮಿಕಲ್ಸ್ ಮ್ಯಾನುಫ್ಯಾಕ್ಚರರ್ಸ್ ವರ್ಕರ್ಸ್ ಯೂನಿಯನ್ | ಬೆಳಗೊಳ |
| ೪ | ಮಂಡ್ಯ ಡಿಸ್ಟ್ರಿಕ್ಟ್ ಜನರಲ್ ವರ್ಕರ್ಸ್ ಯೂನಿಯನ್ | ಮಂಡ್ಯ |
| ೫ | ಮಂಡ್ಯ ನ್ಯಾಶನಲ್ ಪೇಪರ್ ಮಿಲ್ಸ್ ಸ್ಟ್ಯಾಫ್ ಅಸೋಸಿಯೇಷನ್ | ಬೆಳಗೊಳ |
| ೬ | ಮೈಸೂರ್ ಕೆಮಿಕಲ್ಸ್ ಎಂಪ್ಲಾಯೀಸ್ ಅಸೋಸಿಯೇಷನ್ | ಮಂಡ್ಯ |
| ೭ | ಪಾಂಡವಪುರ ಕೋ–ಆಪರೇಟಿವ್ ಶುಗರ್ ಫ್ಯಾಕ್ಟರಿ ಎಂಪ್ಲಾಯೀಸ್ ಅಸೋಸಿಯೇಷನ್ | ಪಾಂಡವಪುರ |
| ೮ | ಮಂಡ್ಯ ಡಿಸ್ಟ್ರಿಕ್ಟ್ ಶುಗರ್‌ಕೇನ್ ಗ್ರೋಯರ್ಸ್ ಅಸೋಸಿಯೇಷನ್ | ಮಂಡ್ಯ |
| ೯ | ಮೈಸೂರ್ ಶುಗರ್ ಕಂಪೆನಿ ಎಂಪ್ಲಾಯೀಸ್ ಯೂನಿಯನ್ | ಮಂಡ್ಯ |
| ೧೦ | ಪಾಂಡವಪುರ ಕೋ–ಆಪರೇಟಿವ್ ಶುಗರ್ ಫ್ಯಾಕ್ಟರಿ ಕೇನ್ ಕಲ್ಟಿವೇಶನ್ ಸೆಕ್ಷನ್ ಎಂಪ್ಲಾಯೀಸ್ ಯೂನಿಯನ್ | ಪಾಂಡವಪುರ |

ಮಂಡ್ಯ ಜಿಲ್ಲಾ ಲಾರಿ ಚಾಲಕರ ಸಂಘ; ಮೈಶುಗರ್ ಕಂಪನಿಯ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಸಂಘ; ಮೈಸೂರು ಸಕ್ಕರೆ ಕಾರ್ಖಾನೆ ಕೆಲಸಗಾರರ ಸಂಘ; ಕೆ.ಎಂ.ಎಫ್.ಕೆಲಸಗಾರರ ಸಂಘ; ಚರಕ್ ಫಾರ್ಮಾಸ್ಯೂಟಿಕಲ್ಸ್ ಕೆಲಸಗಾರರ ಸಂಘ ಮತ್ತು ಮಂಡ್ಯ ಜಿಲ್ಲಾ ಕಟ್ಟಡ ಕೆಲಸಗಾರರ ಸಂಘಗಳು ಪ್ರಸ್ತುತ ಜಿಲ್ಲೆಯ ಪ್ರಮುಖ ಕಾರ್ಮಿಕ ಸಂಘಗಳಾಗಿವೆ. ಎಂ.ಡಿ.ಜಯರಾಂ, ಬಲ್ಲೇನಹಳ್ಳಿ ನಾಗರಾಜ್ ಮುಂತಾದವರು ಕಾರ್ಮಿಕ ನಾಯಕರಾಗಿ ಕೆಲಸ ನಿರ್ವಹಿಸುತ್ತಿದ್ದಾರೆ. (ಜಿಲ್ಲಾ ಕಾರ್ಮಿಕ ಅಧಿಕಾರಿಗಳ ಮಾಹಿತಿಯ ಪ್ರಕಾರ)

ಮೃತ ನೌಕರರ ವಾರಸುದಾರರಿಗೆ ಆರ್ಥಿಕ ನೆರವು ನೀಡುವ ಸಲುವಾಗಿ ಮರಣ ಪರಿಹಾರ ನಿಧಿಯನ್ನು ಸ್ಥಾಪಿಸಲಾಗಿದ್ದು, ೧೯೬೫ – ೬೬ರಲ್ಲಿ ಕನಿಷ್ಠ ೫೦೦ ರೂ.ಗಳನ್ನು ಮೃತರ ವಾರಸುದಾರರಿಗೆ ಅಥವಾ ನಾಮಾಂಕಿತರಿಗೆ ನೀಡಲಾಗುತ್ತಿತ್ತು. ಇದನ್ನು ತಿಂಗಳಿಗೆ ೫೦೦ ರೂ. ಗಳಿಗಿಂತ ಹೆಚ್ಚು ವೇತನವಿಲ್ಲದ ಸದಸ್ಯ ನೌಕರರ ವಾರಸುದಾರರಿಗೆ

ಅಥವಾ ನಾಮಾಂಕಿತದಾರರಿಗೆ ನೀಡಲಾಗುತ್ತಿತ್ತು. ೧೯೫೫-೫೬ರಿಂದ ಕಂದಾಯ ಇಲಾಖೆಯ ಸಹಾಯಕ ಆಯುಕ್ತರ ಅಧಿಕಾರ ವ್ಯಾಪ್ತಿಯಲ್ಲಿ ಬರುವ 'ಆಶಾ ಕಿರಣ' ಎಂಬ ಯೋಜನೆಯಡಿ ಈ ವಿಷಯವನ್ನು ನಿರ್ವಹಿಸಲಾಗುತ್ತಿದೆ. (ಮಾಹಿತಿ : ಮಂಡ್ಯ ಜಿಲ್ಲಾ ಕಾರ್ಮಿಕ ಅಧಿಕಾರಿಗಳು)

**ನೌಕರರ ಭವಿಷ್ಯ ನಿಧಿ ಯೋಜನೆ** : ಈ ಯೋಜನೆಯನ್ನು ೧೯೫೨ರಲ್ಲಿ ಪ್ರಾರಂಭಿಸಲಾಯಿತು. ಈ ಕೆಳಕಂಡ ಸಂದರ್ಭಗಳಲ್ಲಿ, ಮುಂಗಡಗಳನ್ನು ಮಂಜೂರು ಮಾಡುವ ಸಲುವಾಗಿ ಈ ಯೋಜನೆಯನ್ನು ರೂಪಿಸಲಾಯಿತು. ೧. ಜೀವ ವಿಮಾ ಪಾಲಿಸಿಗಳಿಗೆ ಪ್ರೀಮಿಯಂ ಕಟ್ಟಬೇಕಾದ ಸಂದರ್ಭ, ೨. ನಿವೇಶನ ಖರೀದಿ ಮತ್ತು ಗೃಹ ನಿರ್ಮಾಣ, ೩. ವೈದ್ಯಕೀಯ ಖರ್ಚು, ೪. ಕಾರ್ಖಾನೆಗಳ ತತ್ಕಾಲಿಕ ಮುಚ್ಚುವಿಕೆಯಿಂದ ನೌಕರರನ್ನು ತೆಗೆದು ಹಾಕಿದಂಥ ವಿಶೇಷ ಪ್ರಕರಣ, ೫. ಗ್ರಾಹಕ ಸಹಕಾರ ಸಂಸ್ಥೆಗಳಲ್ಲಿ ಶೇರುಗಳ ಖರೀದಿ ಹಾಗೂ ೬. ಅಂತಿಮ ವಿತ್‌ಡ್ರಾಯಲ್ ಬಾಕಿ ಇಟ್ಟುಕೊಂಡು ಕೆಲಸದಿಂದ ವಜಾ ಆದಾಗ, ಮೇಲೆ ನಮೂದಿಸಿರುವ ಸೌಲಭ್ಯಗಳನ್ನು/ ಯೋಜನೆಗಳನ್ನು ಒಂದನೇ ಆಗಸ್ಟ್ ೧೯೬೬ ರಿಂದ ಮುಂದೆ ತಿಳಿಸಿರುವ ಜಿಲ್ಲೆಯ ಒಂಭತ್ತು ಕಂಪನಿ/ಸಂಸ್ಥೆಗಳಿಗೆ ಅನ್ವಯಿಸುವಂತೆ ಜಾರಿಗೆ ತರಲಾಯಿತು. ೧. ಮೈಸೂರು ಶುಗರ್ ಕಂಪನಿ ಲಿಮಿಟೆಡ್, ಮಂಡ್ಯ, ೨. ಮೈಸೂರು ಕೆಮಿಕಲ್ಸ್ ಅಂಡ್ ಫರ್ಟಿಲೈಸರ್ಸ್ ಲಿಮಿಟೆಡ್, ಬೆಳಗೊಳ, ೩. ಮೈಸೂರು ಮಿನರಲ್ಸ್ ಅಂಡ್ ಕಂಪನಿ, ಶುಗರ್ ಟೌನ್, ಮಂಡ್ಯ, ೪. ಮಾಡೆಲ್ ರೈಸ್ ಅಂಡ್ ಆಯಿಲ್ ಮಿಲ್ಸ್, ಮಂಡ್ಯ ೫. ಹೋಟೆಲ್ ಕೃಷ್ಣರಾಜಸಾಗರ, ಬೃಂದಾವನ ಗಾರ್ಡನ್ಸ್, ೬. ಪಾಂಡವಪುರ ಸಹಕಾರ ಸಕ್ಕರೆ ಕಾರ್ಖಾನೆ ಲಿಮಿಟೆಡ್, ಪಾಂಡವಪುರ ೭. ರಾಯತ್ಸ್ (ರೈತರ) ಅಗ್ರಿಕಲ್ಚರಲ್ ಪ್ರಾಡ್ಯುಸ್ ಕೋ-ಆಪರೇಟಿವ್ ಮಾರ್ಕೆಟಿಂಗ್ ಸೊಸೈಟಿ ಮಂಡ್ಯ. ೮. ಮಂಡ್ಯ ನ್ಯಾಶನಲ್ ಪೇಪರ್ ಮಿಲ್ಸ್ ಬೆಳಗೊಳ ೯. ಮಂಡ್ಯ ಡಿಸ್ಟ್ರಿಕ್ಟ್ ಸೆಂಟ್ರಲ್ ಕೋ-ಆಪರೇಟೀವ್ ಬ್ಯಾಂಕ್ ಲಿಮಿಟೆಡ್, ಮಂಡ್ಯ (ಆಧಾರ: ಮಂಡ್ಯ ಗ್ಯಾಸೆಟಿಯರ್ ೧೯೬೭) ಪ್ರಸ್ತುತ ೨೦ಕ್ಕಿಂತ ಹೆಚ್ಚು ಉದ್ಯೋಗಿಗಳಿರುವ ಎಲ್ಲಾ ಕಾರ್ಖಾನೆಗಳಲ್ಲಿಯೂ ನೌಕರರ ಭವಿಷ್ಯನಿಧಿ ಯೋಜನೆ ಸೌಲಭ್ಯ ಲಭ್ಯವಿದೆ.

ಕಾರ್ಮಿಕ ಕಲ್ಯಾಣ ಚಟುವಟಿಕೆಗಳನ್ನು ಜಿಲ್ಲಾ ಮಟ್ಟದಲ್ಲಿ ವ್ಯವಸ್ಥಿತವಾಗಿ ನಿರ್ವಹಿಸಲು ಕಾರ್ಮಿಕ ಇಲಾಖೆಯ ಕಾರ್ಖಾನೆ ಪರಿವೀಕ್ಷಕರು ನಿಯುಕ್ತರಾಗಿರುತ್ತಾರೆ. ತಾಲೂಕು ಮಟ್ಟದಲ್ಲಿ ಕಾರ್ಮಿಕ ನಿರೀಕ್ಷಕರು ಈ ಕಾರ್ಯ ನಿರ್ವಹಿಸುತ್ತಾರೆ. ಮಂಡ್ಯ ತಾಲೂಕಿನ ಎರಡು ವಲಯಗಳಲ್ಲಿ ಇಬ್ಬರು, ಹಾಗೂ ಪ್ರತಿ ತಾಲೂಕಿಗೂ ಒಬ್ಬರಂತೆ ಆರು, ಹೀಗೆ ಒಟ್ಟು ಎಂಟು ಕಾರ್ಮಿಕ ನಿರೀಕ್ಷಕರಿರುತ್ತಾರೆ. ಸುಮಾರು ಇಪ್ಪತ್ತೈದು ಕೇಂದ್ರ ಹಾಗೂ ರಾಜ್ಯ ಕಾರ್ಮಿಕ ಕಾಯ್ದೆಗಳು ಪ್ರಸ್ತುತ ಜಾರಿಯಲ್ಲಿದ್ದು, ಅವುಗಳಲ್ಲಿ ಪ್ರಮುಖವಾದವು ಈ ಮುಂದಿನಂತಿವೆ ; ೧) ೧೯೪೭ರ ಕೈಗಾರಿಕಾ ವಿವಾದ ಕಾಯ್ದೆ ೨) ೧೯೪೮ರ ಕನಿಷ್ಟ ವೇತನ ಕಾಯ್ದೆ ೩) ೧೯೨೬ರ ಕಾರ್ಮಿಕ ಸಂಘಗಳ ಕಾಯ್ದೆ ೪) ೧೯೫೧ರ ತೋಟ ಕಾರ್ಮಿಕರ ಕಾಯ್ದೆ ೫) ೧೯೬೬ರ ಬೀಡಿ ಮತ್ತು ಚುಟ್ಟಾ ಕಾರ್ಮಿಕರ (ಸೇವಾ ನಿಯಮಗಳು) ಕಾಯ್ದೆ ೬) ೧೯೬೩ರ ಕಾರ್ಮಿಕ ಕೈಗಾರಿಕಾ ಸಂಸ್ಥೆಗಳ (ರಾಷ್ಟ್ರೀಯ ಮತ್ತು ಹಬ್ಬದ ರಜಾ ದಿನಗಳ) ಕಾಯ್ದೆ, ೭) ೧೯೪೬ರ ಕೈಗಾರಿಕಾ ಉದ್ಯೋಗ (ಸ್ಥಾಯಿ ನಿಯಮಗಳ) ಕಾಯ್ದೆ ೮) ೧೯೭೦ರ ಕಂಟ್ರಾಕ್ಟ್ ಕೆಲಸಗಾರರ (ಕ್ರಮ ವ್ಯವಸ್ಥೆ ಮತ್ತು ನಿಷೇಧ) ಕಾಯ್ದೆ ೯. ೧೯೩೬ರ ವೇತನ ಪಾವತಿ ಕಾಯ್ದೆ, ೧೦. ೧೯೬೫ರ ಬೋನಸ್ ಪಾವತಿ ಕಾಯ್ದೆ ೧೧. ೧೯೭೨ರ ಗ್ರಾಚ್ಯುಯಿಟಿ ಪಾವತಿ ಕಾಯ್ದೆ ಹಾಗೂ ತತ್ಸಂಬಂಧಿತ ಇನ್ನಿತರ ಕಾಯ್ದೆಗಳು.

**ಕೋಷ್ಟಕ ೧೬.೨ ೧೯೯೭–೯೮ ರಿಂದ ೧೯೯೯–೨೦೦೦ರವರೆಗೆ ವಿವಿಧ ಕಾಯ್ದೆಗಳ ಪ್ರಕಾರ ತಲೆದೋರಿದ ವಿವಾದಗಳ ವಿವರ**

| ವರ್ಷ | ಕಾಯ್ದೆಗಳ ಹೆಸರು | ದಾಖಲಾದ ವಿವಾದಗಳು | ಇತ್ಯರ್ಥವಾದ ವಿವಾದಗಳು | ಬಾಕಿ ಉಳಿದ ವಿವಾದಗಳು* |
|---|---|---|---|---|
| ೧೯೯೭–೯೮ | ಕಾರ್ಮಿಕ ನಷ್ಟ ಪರಿಹಾರ ಕಾಯ್ದೆ | ೧೧೪ | ೫೨ | ೨೮೨* |
| | ಔದ್ಯಮಿಕ ವಿವಾದ ಕಾಯ್ದೆ | ೯೩ | ೮೯ | ೨೮ |
| | ಕನಿಷ್ಟ ವೇತನ ಕಾಯ್ದೆ | ೧೮ | ೨೩ | ೨೮ |
| | ತಕರಾರು ಅರ್ಜಿಗಳು | ೨೬ | ೭೫ | ೧೫ |
| ೧೯೯೮–೯೯ | ಕಾರ್ಮಿಕ ನಷ್ಟ ಪರಿಹಾರ ಕಾಯ್ದೆ | ೧೭೫ | ೬೮ | ೪೨೧ |
| | ಔದ್ಯಮಿಕ ವಿವಾದ ಕಾಯ್ದೆ | ೨೫೧ | ೧೭೬ | ೧೦೩ |
| | ಕನಿಷ್ಠ ವೇತನ ಕಾಯ್ದೆ | ೧೩ | ೧೨ | ೨೯ |
| | ತಕರಾರು ಅರ್ಜಿಗಳು | ೧೩ | ೧೪ | ೧೪ |
| ೯೯–೨೦೦೦ | ಕಾರ್ಮಿಕ ನಷ್ಟ ಪರಿಹಾರ ಕಾಯ್ದೆ | ೪೧೧ | ೧೬೨ | ೬೬೪ |
| | ಔದ್ಯಮಿಕ ವಿವಾದ ಕಾಯ್ದೆ | ೯೪ | ೧೪೯ | ೪೮ |
| | ಕನಿಷ್ಠ ವೇತನ ಕಾಯ್ದೆ | ೭೧ | ೦೪ | ೯೬ |
| | ತಕರಾರು ಅರ್ಜಿಗಳು | ೧೨ | ೧೪ | ೧೨ |

ಆಧಾರ: ಜಿಲ್ಲಾ ಕಾರ್ಮಿಕ ಅಧಿಕಾರಿಗಳು, ಮಂಡ್ಯ

* ಸೂಚನೆ: ಬಾಕಿ ಉಳಿದ ಪ್ರಕರಣಗಳಲ್ಲಿ ಹಿಂದಿನ ವರ್ಷಗಳ ಇತ್ಯರ್ಥವಾಗದ ಪ್ರಕರಣಗಳೂ ಸೇರಿವೆ.

**ಕೋಷ್ಠಕ ೧೬.೩ ೧೯೯೭–೯೮ ರಿಂದ ೧೯೯೯–೨೦೦೦ರ ಸಾಲುಗಳಲ್ಲಿ ಹೊಸ ನೋಂದಣಿ ಹಾಗೂ ನವೀಕರಣ ಶುಲ್ಕದಿಂದ ಸಂದಾಯವಾದ ಹಣದ ವಿವರಗಳು**

| ವರ್ಷ | ಹೊಸ ನೋಂದಣಿ | ವಸೂಲಾದ ಹಣ (ರೂ.ಗಳಲ್ಲಿ) | ನವೀಕರಣದಿಂದ ಸಂದ ಹಣ (ರೂ.ಗಳಲ್ಲಿ) | ವಸೂಲಾದ ಒಟ್ಟು ಹಣ (ರೂ.ಗಳಲ್ಲಿ) |
|---|---|---|---|---|
| ೧೯೯೭–೯೮ | ೧೫೦ | ೫೪೨೫ | ೧,೨೮,೨೭೦ | ೧,೩೩,೬೯೫ |
| ೧೯೯೮–೯೯ | ೧೯೦ | ೫,೩೬೦ | ೧,೩೩,೦೧೦ | ೧,೩೮,೩೭೦ |
| ೯೯–೨೦೦೦ | ೨೨೯ | ೧೨,೫೧೫ | ೩೬,೪೪,೦೯೦ | ೩,೭೭,೦೦೫ |

೧೯೨೩ರ ಕಾರ್ಮಿಕ ಪರಿಹಾರ ಕಾಯ್ದೆಯ ಪ್ರಕಾರ ಕೈಗಾರಿಕೆಗಳಲ್ಲಿ ಕೆಲಸ ಮಾಡುತ್ತಿರುವ ಕಾರ್ಮಿಕರು ಆಕಸ್ಮಿಕ ಮರಣ ಅಥವಾ ಅಂಗಹೀನತೆಗೆ ಒಳಗಾದಲ್ಲಿ, ಅಂತಹವರಿಗೆ ಪರಿಹಾರ ಧನವನ್ನು ನೀಡಲಾಗುತ್ತದೆ.

ಕಳೆದ ಮೂರು ವರ್ಷಗಳಲ್ಲಿ ಯಾವ ಕಾರ್ಮಿಕರೂ ಅಂಗನ್ಯೂನತೆಗೆ ಒಳಪಟ್ಟಿಲ್ಲ. ಆದರೆ ದುರ್ಮರಣಕ್ಕೆ ಈಡಾದವರಿದ್ದಾರೆ.

**ಕೋಷ್ಟಕ ೧೬.೪ ೧೯೯೭–೯೮ ರಿಂದ ೧೯೯೯–೨೦೦೦ ದವರೆಗಿನ ಅವಧಿಯಲ್ಲಿ ದುರ್ಮರಣಕ್ಕೀಡಾದವರ ಸಂಖ್ಯೆ ಮತ್ತು ನೀಡಿದ ಪರಿಹಾರಗಳ ವಿವರ**

| ವರ್ಷ | ದುರ್ಮರಣ ಪ್ರಕರಣಗಳ ಸಂಖ್ಯೆ | ಪರಿಹಾರ ಧನ |
|---|---|---|
| ೧೯೯೭–೯೮ | ೨೩ | ೨೩,೦೮,೫೭೪ |
| ೧೯೯೮–೯೯ | ೩೯ | ೪೯,೨೪,೮೪೦ |
| ೧೯೯೯–೨೦೦೦ | ೪೫ | ೨,೧೦,೦೪,೪೯೧ |

(ಆಧಾರ: ಜಿಲ್ಲಾ ಕಾರ್ಮಿಕ ಅಧಿಕಾರಿ, ಮಂಡ್ಯ)

**ಕಾರ್ಮಿಕ ಕಲ್ಯಾಣ ಮಂಡಳಿ**

ಕಾರ್ಮಿಕ ಕಲ್ಯಾಣ ಮಂಡಳಿಯು, ಕರ್ನಾಟಕ ಕಾರ್ಮಿಕ ಕಲ್ಯಾಣ ಅಧಿನಿಯಮ ೧೯೬೫ರ ಅನುಸಾರ ಅನೇಕ ಕಾರ್ಮಿಕ ಕಲ್ಯಾಣ ಯೋಜನೆಗಳನ್ನು ಕಾರ್ಯರೂಪಕ್ಕೆ ತಂದಿದೆ. ಕಾರ್ಮಿಕರಿಂದ ಒಂದು ರೂಪಾಯಿಯಂತೆಯೂ, ಮಾಲಿಕರ ವತಿಯಿಂದ ಕಾರ್ಮಿಕರ ಸಂಖ್ಯಾನುಸಾರ ತಲಾ ಎರಡು ರೂಪಾಯಿಗಳಂತೆಯೂ ಮತ್ತು ಸರ್ಕಾರದಿಂದ ಪ್ರತೀ ಕಾರ್ಮಿಕನಿಗೆ ಒಂದು ರೂಪಾಯಿನಂತೆಯೂ ಕಾರ್ಮಿಕ ಕಲ್ಯಾಣ ನಿಧಿಗಾಗಿ ಪ್ರತೀ ವರ್ಷ ವಂತಿಗೆಯನ್ನು ಸಂಗ್ರಹಿಸಲಾಗುತ್ತದೆ. ಈ ನಿಧಿಯಿಂದ, ಕಾರ್ಮಿಕ ಕಲ್ಯಾಣ ಮಂಡಳಿಯು, ಕಾರ್ಮಿಕ ಕಲ್ಯಾಣ ಕೇಂದ್ರಗಳನ್ನು ಸ್ಥಾಪಿಸಿ, ವಿಶ್ರಾಂತಿ ಧಾಮ, ಗ್ರಂಥಾಲಯ, ಕ್ರೀಡಾ ಚಟುವಟಿಕೆ, ಮನರಂಜನೆ ಮೊದಲಾದ ಸೌಲಭ್ಯಗಳನ್ನು ಕಾರ್ಮಿಕರಿಗೆ ಒದಗಿಸುತ್ತದೆ. ಮೃತ ಕಾರ್ಮಿಕರ ಅಂತ್ಯ ಸಂಸ್ಕಾರಕ್ಕೆ ಧನ ಸಹಾಯ ಯೋಜನೆ, ಅಪಘಾತ ಸಹಾಯ ಯೋಜನೆ, ಸ್ವಯಂ ಉದ್ಯೋಗ ಯೋಜನೆ, ವೈದ್ಯಕೀಯ ನೆರವು ಯೋಜನೆ, ಅಂಗವಿಕಲರಿಗೆ ತ್ರಿಚಕ್ರ ಸೈಕಲ್ ಒದಗಿಸುವ ಯೋಜನೆ, ಕನ್ನಡಕ ಖರೀದಿಗೆ ಧನ ಸಹಾಯ, ಕೃತಕ ಅಂಗಸಾಧನ ಖರೀದಿಗೆ ಧನ ಸಹಾಯ, ಶ್ರವಣ ಸಾಧನ ಖರೀದಿಗೆ ಧನ ಸಹಾಯ, ಮಹಿಳಾ ಕಾರ್ಮಿಕರಿಗೆ ಹೆರಿಗೆ ಭತ್ಯೆ ಯೋಜನೆ, ಮುಂತಾದವು ಮಂಡಳಿಯಿಂದ ಅನುಷ್ಠಾನಗೊಂಡಿರುವ ಇನ್ನಿತರ ಯೋಜನೆಗಳಾಗಿವೆ. ಕರ್ನಾಟಕ ಕಾರ್ಮಿಕ ಕಲ್ಯಾಣ ನಿಧಿಗೆ,ಸೆಕ್ಷನ್ ೭೪ಎ ಪ್ರಕಾರ ವಂತಿಕೆ ಪಾವತಿಸುವ, ೧೮ ರಿಂದ ೬೦ ವರ್ಷದೊಳಗಿನ ಸಂಘಟಿತ ಮತ್ತು ಅಸಂಘಟಿತ ವಲಯದ ಕಾರ್ಮಿಕರ ಕುಟುಂಬಗಳ ಸದಸ್ಯರೂ ಈ ಯೋಜನೆಗಳ ಸೌಲಭ್ಯಗಳನ್ನು ಪಡೆಯಬಹುದಾಗಿದೆ. ಕಳೆದ ಮೂರು ವರ್ಷಗಳಲ್ಲಿ ಜಿಲ್ಲೆಯ ಕಾರ್ಮಿಕ ಸದಸ್ಯರು ಮಂಡಳಿಯಿಂದ ವಿದ್ಯಾರ್ಥಿವೇತನವನ್ನು ಮಾತ್ರ ಪಡೆದಿರುತ್ತಾರೆ.

**ವಿದ್ಯಾರ್ಥಿ ವೇತನ ಯೋಜನೆ :** ಕೇಂದ್ರ ಮತ್ತು ರಾಜ್ಯ ಸರ್ಕಾರದ ಸ್ವಾಮ್ಯದಲ್ಲಿರುವ ಹಾಗೂ ಸಹಕಾರಿ ಕ್ಷೇತ್ರದ ಉದ್ದಿಮೆಗಳಲ್ಲಿ ಕೆಲಸ ಮಾಡುವ, ವ್ಯವಸಾಯ, ಅಗರಬತ್ತಿ, ಗೋಡಂಬಿ, ಏಲಕ್ಕಿ ಹಾಗೂ ಕಾಫಿ ಸಂಸ್ಕರಣೆ; ಹೋಟೆಲ್ ಮತ್ತು ರೆಸ್ಟೋರೆಂಟ್; ಕೈಮಗ್ಗ, ಯಾಂತ್ರಿಕ ಮಗ್ಗ ಮುಂತಾದ ಕೈಗಾರಿಕಾ ಸಂಸ್ಥೆಗಳಲ್ಲಿರುವ ಅಸಂಘಟಿತ ಕಾರ್ಮಿಕರ ಮಕ್ಕಳಿಗೆ ಕೆಲವು ನಿಯಮಗಳನ್ನನುಸರಿಸಿ ವಿದ್ಯಾರ್ಥಿ ವೇತನವನ್ನು ನೀಡಲಾಗುತ್ತದೆ. ವಿದ್ಯಾರ್ಥಿಯು ಹಿಂದಿನ ವರ್ಷದ ಪರೀಕ್ಷೆಯಲ್ಲಿ ಶೇ.೪೫ರಷ್ಟು ಅಂಕಗಳನ್ನು ಪಡೆದಿದ್ದು (ಪರಿಶಿಷ್ಟ ಜಾತಿಗೆ ಶೇ.೪೦) ತಂದೆ–ತಾಯಿಯ ಮಾಸಿಕ ವರಮಾನ ರೂ.೧,೬೦೦/– ಕ್ಕಿಂತ ಹೆಚ್ಚಿಲ್ಲದಿದ್ದರೆ, ಅಂತಹ ವಿದ್ಯಾರ್ಥಿಗಳು ಈ

ವಿದ್ಯಾರ್ಥಿ ವೇತನವನ್ನು ಪಡೆಯಬಹುದಾಗಿದೆ. ಎಂಟರಿಂದ ಹತ್ತನೇ ತರಗತಿಯ ವಿದ್ಯಾರ್ಥಿಗಳಿಗೆ ರೂ.೫೦೦; ಪಿ.ಯು.ಸಿ., ಐ.ಟಿ.ಐ., ಡಿಪ್ಲೋಮಾ ಮತ್ತು ಟಿ.ಸಿ.ಹೆಚ್. ವಿದ್ಯಾರ್ಥಿಗಳಿಗೆ ರೂ.೬೦೦; ಪದವಿ ವಿದ್ಯಾರ್ಥಿಗಳಿಗೆ ರೂ.೮೦೦; ಸ್ನಾತಕೋತ್ತರ ವಿದ್ಯಾರ್ಥಿಗಳಿಗೆ ರೂ.೧,೨೦೦ ಹಾಗೂ ವೃತ್ತಿ ಪರ ವಿದ್ಯಾರ್ಥಿಗಳಿಗೆ ರೂ.೧೬೦೦ ರಂತೆ ವಾರ್ಷಿಕ ವಿದ್ಯಾರ್ಥಿ ವೇತನವನ್ನು ಆಯಾ ಶಾಲಾ ಕಾಲೇಜುಗಳ ಮುಖ್ಯಸ್ಥರ ಮೂಲಕ ನೀಡಲಾಗುತ್ತದೆ. ಕಳೆದ ಎರಡು ವರ್ಷಗಳಲ್ಲಿ ಜಿಲ್ಲೆಯ ಭಾರತೀನಗರ (ಕೆ.ಎಂ.ದೊಡ್ಡಿ) ಹಾಗೂ ಅಣ್ಣೂರು, (ಮದ್ದೂರು ತಾಲೂಕು), ಮಳವಳ್ಳಿ ತಾಲೂಕು ಮತ್ತು ಮಂಡ್ಯ ಪ್ರದೇಶದ ವಿವಿಧ ಶಾಲೆಗಳಲ್ಲಿ ಓದುವ ವಿದ್ಯಾರ್ಥಿಗಳು, ಈ ವಿದ್ಯಾರ್ಥಿ ವೇತನವನ್ನು ಪಡೆದಿರುತ್ತಾರೆ. ೧೯೯೯–೨೦೦೦ನೇ ಸಾಲಿನಲ್ಲಿ ೧೮ ವಿದ್ಯಾರ್ಥಿಗಳು; ೨೦೦೦–೨೦೦೧ನೇ ಸಾಲಿನಲ್ಲಿ ೭೫ ವಿದ್ಯಾರ್ಥಿಗಳು, ಇದರ ಪ್ರಯೋಜನ ಪಡೆದಿರುತ್ತಾರೆ. ಇದಕ್ಕಾಗಿ ಕ್ರಮವಾಗಿ ರೂ.೧೧,೮೪೦/– ಮತ್ತು ರೂ.೫೫,೦೦೦ಗಳನ್ನು ಖರ್ಚು ಮಾಡಲಾಗಿದೆ.

## ಕಾರ್ಖಾನೆ ಮತ್ತು ಬಾಯ್ಲರುಗಳ ಇಲಾಖೆ

ಕಾರ್ಖಾನೆ ಮತ್ತು ಬಾಯ್ಲರುಗಳ ಮುಖ್ಯ ಪರಿವೀಕ್ಷಕರು ಇಲಾಖಾ ಮುಖ್ಯಸ್ಥರಾಗಿದ್ದು, ಆಡಳಿತ ಹಾಗೂ ತಾಂತ್ರಿಕ ವಿಭಾಗಗಳೆರಡೂ ಅವರ ನಿಯಂತ್ರಣದಲ್ಲಿರುತ್ತವೆ. ಜಿಲ್ಲಾ ಮಟ್ಟದಲ್ಲಿ ಕಾರ್ಖಾನೆ ಮತ್ತು ಬಾಯ್ಲರುಗಳು ಪ್ರತ್ಯೇಕವಾಗಿದ್ದು, ಆ ವಿಭಾಗಗಳಿಗೆ ಪ್ರತ್ಯೇಕ ಪರಿವೀಕ್ಷಕರಿರುತ್ತಾರೆ.

**ಕಾರ್ಖಾನೆ ಇಲಾಖೆ :** ಮಂಡ್ಯ ಜಿಲ್ಲೆಯಲ್ಲಿ ೨೦೦೨ ದ ಮಾರ್ಚ್ ಅಂತ್ಯಕ್ಕೆ ನೋಂದಣಿಗೊಂಡಿರುವ ೭೫ ಕಾರ್ಖಾನೆಗಳಲ್ಲಿ ೯,೬೯೪ ಕಾರ್ಮಿಕರು ಕೆಲಸ ಮಾಡುತ್ತಿದ್ದಾರೆ. ಹಾನಿಕರ ಸ್ವರೂಪದ ವಸ್ತುಗಳ ಉತ್ಪಾದನೆಯೂ ಸೇರಿದಂತೆ ಹಾಗೂ ಅಲ್ಲಿ ಕೆಲಸ ನಿರ್ವಹಿಸುವ ಕಾರ್ಮಿಕರ ಹಿತದೃಷ್ಟಿಯಿಂದ ಅಪಾಯಕಾರಿಯಾಗಿ ತೋರುವ ಕಾರ್ಖಾನೆಗಳ ಪಟ್ಟಿಯನ್ನು ಈ ಮುಂದೆ ನೀಡಲಾಗಿದೆ.

೧. ಮೈಸೂರು ಸಕ್ಕರೆ ಕಾರ್ಖಾನೆ ನಿ., ಮಂಡ್ಯ ; ೨. ದಿ ಮೈಸೂರು ಅಸಿಟೇಟ್ ಕೆಮಿಕಲ್ಸ್ ಕಂ.ಲಿ. ಮಂಡ್ಯ (ಮುಚ್ಚಿದೆ) ; ೩. ಕರ್ನಾಟಕ ಮಲ್ಲಾದಿ ಬಯೋಟಿಕ್ಸ್ ಲಿ. ತೂಬಿನಕೆರೆ ಇಂಡಸ್ಟ್ರಿಯಲ್ ಏರಿಯಾ ಮಂಡ್ಯ ; ೪. ಹಬೀಬ್ ಆಗ್ರೋ ಅಸಿಟೇಟ್ ಕೆಮಿಕಲ್ಸ್ ಕಂ.ಲಿ., ಭೂತನಹೊಸೂರು ; ಶ್ರೀರಂಗಪಟ್ಟಣ ತಾಲೂಕಿನ ೫. ದಿ ಮಂಡ್ಯ ನ್ಯಾಷನಲ್ ಪೇಪರ್ ಮಿಲ್ಸ್ ಲಿ., ಬೆಳಗೊಳ,; ೬. ವಿಶ್ವೇಶ್ವರಯ್ಯ ವಿದ್ಯುತ್ ನಿಗಮ ನಿಯಮಿತ, ಶಿವಸಮುದ್ರ; ೭. ಹಬೀಬ್ ಸಾಲ್ವೆಂಟ್ ಎಕ್ಸ್‌ಟ್ರಾಕ್ಟಸ್ ಪ್ರೈ. ಲಿ. ಶ್ರೀರಂಗಪಟ್ಟಣ; ೮. ಹಬೀಬ್ ಆಯಿಲ್ ಮಿಲ್ಸ್ ಪ್ರೈ.ಲಿ. ಶ್ರೀರಂಗಪಟ್ಟಣ; ೯. ಎಂ.ಕೆ. ಅಗ್ರೋಟೆಕ್ ಪ್ರೈ.ಲಿ. ಶ್ರೀರಂಗಪಟ್ಟಣ; ೧೦. ವಿಲ್ಸನ್ ಡಿಸ್ಟಿಲರೀಸ್ ಪ್ರೈ.ಲಿ. ಗೆಂಡೆಹೊಸಹಳ್ಳಿ; ೧೧. ಕೃಷ್ಣ ಎಕ್ಸ್‌ಪೋರ್ಟ್ಸ್ ಲಿ. ಬೆಳಗೊಳ; ಮಳವಳ್ಳಿ ತಾಲೂಕಿನ ೧೨. ಕಾವೇರಿ ವಾಟರ್ ಸಪ್ಲೈ ಸ್ಕೀಂ ಪಂಪಿಂಗ್ ಸ್ಟೇಷನ್, ತೊರೆಕಾಡನಹಳ್ಳಿ ಮತ್ತು ೧೩. ಶಿವ ಮಿನಿ ಹೈಡಲ್ ಸ್ಕೀಂ ಶಿವಸಮುದ್ರ, ಈ ಹದಿಮೂರರಲ್ಲಿ ದಿ ಮಂಡ್ಯ ನ್ಯಾಷನಲ್ ಪೇಪರ್ ಮಿಲ್ಸ್ ಲಿ., ಬೆಳಗೋಳ, ಶ್ರೀರಂಗಪಟ್ಟಣ ತಾ. ಮತ್ತು ದಿ ಮೈಸೂರು ಅಸಿಟೇಟ್ ಕೆಮಿಕಲ್ಸ್ ಕಂ ಲಿ. ಮಂಡ್ಯ ಇವು ಮಂಡ್ಯ ಜಿಲ್ಲೆಯಲ್ಲಿನ ಹೆಚ್ಚಿನ ಹಾನಿಕಾರಕ ಸ್ವರೂಪದ ವಸ್ತುಗಳ ಉತ್ಪಾದನೆಯಲ್ಲಿ ತೊಡಗಿರುವ ಕಾರ್ಖಾನೆಗಳಾಗಿದ್ದು, ಈಗ ಈ ಎರಡೂ ಕಾರ್ಖಾನೆಗಳು ಸ್ಥಗಿತಗೊಂಡಿವೆ.

**ಕೋಷ್ಟಕ ೧೬.೫ ೨೦೦೧–೦೨ರವರೆಗೆ ನೋಂದಣಿ ಅನುಮೋದನೆ ಹಾಗೂ ನವೀಕರಣಗೊಂಡ ಕಾರ್ಖಾನೆಗಳ ವಿವರ**

| | |
|---|---|
| ಒಟ್ಟು ನೋಂದಣಿಗೊಂಡಿದ್ದ ಕಾರ್ಖಾನೆಗಳು | ೩೫ |
| ಅನುಮೋದನೆಗೊಂಡ ಅನ್ ಸೈಟ್ / ಆಫ್ ಸೈಟ್ ಎಮರ್ಜೆನ್ಸಿ ಪ್ಲಾನ್ ಸಂಖ್ಯೆ | ೦೩ |
| ಪಡೆದ ನಕ್ಷೆಗಳ ಸಂಖ್ಯೆ | ೨೩ |
| ಅನುಮೋದನೆಗೊಂಡ ನಕ್ಷೆಗಳ ಸಂಖ್ಯೆ | ೨೩ |
| ಲೈಸೆನ್ಸ್ ನವೀಕರಣಕ್ಕೆ ಬಂದ ಅರ್ಜಿಗಳ ಸಂಖ್ಯೆ | ೮೬ |
| ನವೀಕರಿಸಿದ ಲೈಸೆನ್ಸ್‌ಗಳ ಸಂಖ್ಯೆ | ೧೦೩ |
| ಹೂಡಿದ ಮೊಕದ್ದಮೆಗಳ ಸಂಖ್ಯೆ | ೦೫ |
| ವಿಲೇಯಾದ ಮೊಕದ್ದಮೆಗಳ ಸಂಖ್ಯೆ | ೦೩ |
| ದೂರುಗಳು | ೦೨ |
| ವಿಲೇವಾರಿ | ೦೨ |
| ಸಂಭವಿಸಿದ ಮರಣಾಂತಿಕ ಅಪಘಾತ / ಬೆಂಕಿ ಅಪಘಾತಗಳ ಸಂಖ್ಯೆ | ಇಲ್ಲ |

ಈ ಮೇಲೆ ನಮೂದಿಸಿಲಾದ ಒಂದು ಮರಣಾಂತಿಕ ಅಪಘಾತದ ಬಗ್ಗೆ ಹೂಡಲಾದ ಮೊಕದ್ದಮೆಯನ್ನು ಹೊರತುಪಡಿಸಿದರೆ, ಉಳಿದಂತೆ ಅಪಾದಿತರಿಗೆ ಶಿಕ್ಷೆ ನೀಡುವಂಥ ಹಾಗೂ ಇಲಾಖೆಗೆ ಮೊತ್ತ ವಸೂಲಿಯಾದಂತಹ ಯಾವುದೇ ಪ್ರಕರಣಗಳು ಕಳೆದ ಮೂರು ವರ್ಷಗಳಲ್ಲಿ ನಡೆದಿಲ್ಲ.

**ಬಾಯ್ಲರುಗಳ ಇಲಾಖೆ:** ಬಾಯ್ಲರುಗಳ ಪರಿವೀಕ್ಷಣೆ ಸಲುವಾಗಿ ಮಂಡ್ಯ ಜಿಲ್ಲೆಯ ಶ್ರೀರಂಗಪಟ್ಟಣ, ಪಾಂಡವಪುರ ಮತ್ತು ಕೆ.ಆರ್.ಪೇಟೆ ತಾಲೂಕುಗಳನ್ನು ಮೈಸೂರಿನ ಪರಿವೀಕ್ಷಕರ ವ್ಯಾಪ್ತಿಗೂ, ನಾಗಮಂಗಲ, ಮಂಡ್ಯ, ಮಳವಳ್ಳಿ ಮತ್ತು ಮದ್ದೂರು ತಾಲೂಕುಗಳನ್ನು ಬೆಂಗಳೂರಿನ ಎರಡನೇ ವಿಭಾಗದ ವ್ಯಾಪ್ತಿಗೂ ಒಳಪಡಿಸಲಾಗಿದೆ. ಈ ಎರಡೂ ಕಚೇರಿಗಳೂ, ಬಾಯ್ಲರುಗಳ ಉಪ ಮುಖ್ಯ ಪರಿವೀಕ್ಷಕರು ಗಾಂಧೀನಗರ, ಬೆಂಗಳೂರು ವಲಯ – ೧ (ಕೇಂದ್ರ ಕಚೇರಿ) ಇವರ ಅಧೀನಕ್ಕೆ ಒಳಪಟ್ಟಿವೆ.

ಬಾಯ್ಲರ್‌ನ ಡಿಸೈನ್, ಮೆಟೀರಿಯಲ್, ತಯಾರಿಕಾ ಗುಣಮಟ್ಟ ಬಾಯ್ಲರ್‌ನ ತಯಾರಿಕೆಯ ಸಮಯದಲ್ಲಿ ವಿವಿಧ ಹಂತದ ಪರಿವೀಕ್ಷಣೆ, ವೆಲ್ಡರ್‌ಗಳ ಅರ್ಹತಾ ಪರೀಕ್ಷೆ ಮುಂತಾದವುಗಳ ಬಗ್ಗೆ ಭಾರತೀಯ ಬಾಯ್ಲರ್ ರೆಗ್ಯುಲೇಷನ್, ೧೯೫೦ರ ನಿಯಮಗಳಲ್ಲಿ ಮಾರ್ಗದರ್ಶನವಿದೆ. ಬಾಯ್ಲರ್‌ನಿಂದ ಆಗಬಹುದಾದ ಅಪಘಾತಗಳನ್ನು ತಡೆದು, ಸುರಕ್ಷತೆಗೆ ಉತ್ತೇಜನ ನೀಡಿ, ಸಾರ್ವಜನಿಕರ ಜೀವ ಮತ್ತು ಆಸ್ತಿ–ಪಾಸ್ತಿಗಳನ್ನು ಸಂರಕ್ಷಿಸುವುದು ಬಾಯ್ಲರ್ ವಿಭಾಗದ ಕರ್ತವ್ಯವಾಗಿರುತ್ತದೆ. ಈ ಎರಡೂ ವಿಭಾಗಗಳ ಬಾಯ್ಲರುಗಳ ಪರಿವೀಕ್ಷಕರ ಕಾರ್ಯವ್ಯಾಪ್ತಿಯಲ್ಲಿ ಕೆಳಕಂಡ ನಿಯಮಗಳನ್ನು ಜಾರಿಗೊಳಿಸಲಾಗುತ್ತದೆ. ೧) ದಿ ಇಂಡಿಯನ್ ಬಾಯ್ಲರ್ ಆ್ಯಕ್ಟ್ ೧೯೨೩ ೨) ದಿ ಇಂಡಿಯನ್ ಬಾಯ್ಲರ್ ರೆಗ್ಯೂಲೇಷನ್ ೧೯೫೦, ೩) ದಿ ಕರ್ನಾಟಕ ರೂಲ್ಸ್, ೧೯೮೨ ೪) ದಿ ಕರ್ನಾಟಕ ಎಕನಾಮೈಸರ್ ರೂಲ್ಸ್ ೧೯೫೭ ೫) ದಿ ಕರ್ನಾಟಕ ಬಾಯ್ಲರ್ ಆಪರೇಷನ್ ಇಂಜಿನೀಯರ್ಸ್ ರೂಲ್ಸ್ ೧೯೫೯ ಮತ್ತು ೬) ದಿ ಕರ್ನಾಟಕ ಬಾಯ್ಲರ್ ಅಟೆಂಡೆಂಟ್ಸ್ ರೂಲ್ಸ್ ೧೯೬೨.

## ನೌಕರರ ರಾಜ್ಯ ವಿಮಾ ಯೋಜನೆ

೧೯೪೮ರ ರಾಜ್ಯ ವಿಮಾ ಯೋಜನೆಯ ಶಾಸನ ಹಾಗೂ ಸಂಬಂಧಪಟ್ಟ ನಿಯಮ ನಿಬಂಧನೆಗಳ ಪ್ರಕಾರ ಮಂಡ್ಯ ಜಿಲ್ಲೆಯಲ್ಲಿ ಡಿಸೆಂಬರ್ ೧೯೮೧ರಲ್ಲಿ ರಾಜ್ಯ ವಿಮಾ ಯೋಜನೆಯನ್ನು ಜಾರಿಗೆ ತರಲಾಯಿತು. ಆರಂಭದಲ್ಲಿ ಈ ಯೋಜನೆಯು ವಿದ್ಯುತ್ತನ್ನು ಬಳಸುವ, ಇಪ್ಪತ್ತು ಅಥವಾ ಹೆಚ್ಚು ಕಾರ್ಮಿಕರಿರುವ ಹಾಗೂ ನಾಲ್ಕು ನೂರಕ್ಕಿಂತ ಕಡಿಮೆ ಮಾಸಿಕ ವೇತನವಿರುವ, ವರ್ಷ ಪೂರ್ತಿ ಕೆಲಸ ಮಾಡುವ ಕಾರ್ಖಾನೆಗಳಲ್ಲಿ ಕೆಲಸ ಮಾಡುತ್ತಿರುವ ನೌಕರರಿಗೆ ಮಾತ್ರ ಸೀಮಿತವಾಗಿತ್ತು. ಕ್ರಮೇಣ ಇದು ತಿದ್ದುಪಡಿಯಾಗಿ ಹಂಗಾಮೀತರ ಕಾರ್ಖಾನೆ ಕೆಲಸಗಾರರು, ಹೋಟೆಲ್, ರೆಸ್ಟೋರೆಂಟ್, ಸಿನಿಮಾ ಮಂದಿರ, ರಸ್ತೆ ಸಾರಿಗೆ ಸಂಸ್ಥೆಗಳೇ ಮೊದಲಾದ ಕ್ಷೇತ್ರಗಳಲ್ಲಿ ಕೆಲಸ ಮಾಡುತ್ತಿರುವ ನೌಕರರಿಗೂ ; ವಿದ್ಯುತ್ ಬಳಸದಿರುವ ಕಾರ್ಖಾನೆಗಳಲ್ಲಿ ಇಪ್ಪತ್ತು ಅಥವಾ ಅದಕ್ಕಿಂತ ಕಡಿಮೆ ನೌಕರರಿರುವ ಕಡೆಗಳಿಗೂ ವಿಸ್ತರಿಸಲಾಗಿದೆ. ಜನವರಿ ೧೯೯೭ರಿಂದ ಈ ಸೌಲಭ್ಯ ಪಡೆಯುವ ನೌಕರರ ಮಾಸಿಕ ವೇತನದ ಗರಿಷ್ಟ ಮಿತಿಯನ್ನು ರೂ.೬,೫೦೦ ಕ್ಕೆ ಹೆಚ್ಚಿಸಲಾಗಿದೆ.

ಸಾಮಾಜಿಕ ಭದ್ರತಾ ವ್ಯವಸ್ಥೆಗಾಗಿ ಜಾರಿಗೆ ಬಂದಿರುವ ನೌಕರರ ರಾಜ್ಯ ವಿಮಾ ಯೋಜನೆಯು ವೈದ್ಯಕೀಯ ಸೌಲಭ್ಯವನ್ನು ನೀಡುವುದೇ ಅಲ್ಲದೆ ಖಾಯಿಲೆ, ಪ್ರಸೂತಿ ಹಾಗೂ ಅಂತ್ಯ ಸಂಸ್ಕಾರಗಳಿಗೆ ಸಂಬಂಧಿಸಿದಂತೆ ನಗದು ಪರಿಹಾರವನ್ನೂ ನೀಡುತ್ತದೆ. ವೈದ್ಯಕೀಯ ಪರಿಹಾರವು, ವಿಮೆ ಮಾಡಲ್ಪಟ್ಟ ವ್ಯಕ್ತಿಗಳಲ್ಲದೆ ಅವರನ್ನು ಆಶ್ರಯಿಸಿರುವ ಕುಟುಂಬದ ಸದಸ್ಯರಿಗೂ ವಿಸ್ತರಿಸಲ್ಪಟ್ಟಿದೆ. ಈ ಯೋಜನೆಯನ್ವಯ ವೈದ್ಯಕೀಯ ಪರಿಹಾರವನ್ನು ಒದಗಿಸುವ ಹೊಣೆಗಾರಿಕೆ ರಾಜ್ಯ ಸರ್ಕಾರಕ್ಕೆ ಸೇರಿರುತ್ತದೆ. ನಿಯಮಾನುಸಾರ, ಒಂದು ಸಣ್ಣ ಇ.ಎಸ್.ಐ. ಔಷಧಾಲಯವನ್ನು ಆರಂಭಿಸಲು ವಿಮೆ ಮಾಡಿರುವ ನಾಲ್ಕುನೂರು ನೌಕರರ ಕುಟುಂಬ ಘಟಕಗಳಿರಬೇಕು. ಮಂಡ್ಯ ಜಿಲ್ಲೆಯಲ್ಲಿ ೧೯೯೭-೯೮ ನೇ ಸಾಲಿನಿಂದ ೨೦೦೦-೨೦೦೧ನೇ ಸಾಲಿನ ಕ್ರಮವಾಗಿ ಒಟ್ಟು ೨೫,೦೬೦, ೩೧,೧೩೫, ೩೩,೬೮೫ ಮತ್ತು ೩೦,೯೫೫ ಸದಸ್ಯರು ಇ.ಎಸ್.ಐ. ಸೌಲಭ್ಯವನ್ನು ಪಡೆದಿರುತ್ತಾರೆ.

**ಕೋಷ್ಟಕ ೧೬.೬ ೧೯೯೭-೯೮ ರಿಂದ ೨೦೦೦-೨೦೦೧ನೇ ಸಾಲುಗಳಲ್ಲಿ ಈ ಜಿಲ್ಲೆಯಲ್ಲಿ ವಿಮೆ ಮಾಡಿಸಿರುವ ನೌಕರರ ಕುಟುಂಬಗಳು, ಫಲಾನುಭವಿಗಳು ಮತ್ತು ಆದ ಖರ್ಚಿನ ವಿವರ**

| | ೧೯೯೭-೧೯೯೮ | ೧೯೯೮-೧೯೯೯ | ೧೯೯೯-೨೦೦೦ | ೨೦೦೦-೨೦೦೧ |
|---|---|---|---|---|
| ವಿಮೆ ಮಾಡಿಸಿರುವ ನೌಕರರು | ೫,೦೧೨ | ೬,೨೨೭ | ೬,೭೩೭ | ೬,೧೯೧ |
| ಕುಟುಂಬಗಳು | ೨೦,೦೪೮ | ೨೪,೯೦೮ | ೨೬,೯೪೮ | ೨೪,೭೬೪ |
| ಮಾಡಲಾದ ಖರ್ಚು ರೂ. | ೧೩,೩೨,೫೭೧ | ೧೫,೭೭,೩೧೮ | ೨೧,೫೭,೫೩೫ | ೧೮,೭೫,೭೧೧ |

## ಪರಿಶಿಷ್ಟ ಜಾತಿ ಮತ್ತು ವರ್ಗಗಳ ಕಲ್ಯಾಣ

ಸಮಾಜದಲ್ಲಿ ಹಿಂದಿನಿಂದಲೂ ನಡೆದುಕೊಂಡು ಬಂದಿರುವ ಅಸ್ಪೃಶ್ಯತೆ ಎಂಬ ಸಾಮಾಜಿಕ ಪಿಡುಗನ್ನು ತಡೆಯಲು ಹಾಗೂ ಸಮಾಜದಲ್ಲಿ ಸುಧಾರಣೆಗಳನ್ನು ತರಲು, ಮೈಸೂರು ಸಂಸ್ಥಾನದಲ್ಲಿ ೧೯ ಮತ್ತು ೨೦ನೆಯ ಶತಮಾನಗಳಲ್ಲಿ ಕ್ರಮ ತೆಗೆದುಕೊಳ್ಳಲಾಯಿತು. ಸರ್.ಮಿರ್ಜಾ ಎಂ.ಇಸ್ಮಾಯಿಲ್‌ರವರು ದಿವಾನರಾಗಿದ್ದಾಗ ಈ ದಿಸೆಯಲ್ಲಿ ಪರಿಣಾಮಕಾರಿ

ಕ್ರಮ ಕೈಗೊಳ್ಳಲಾಯಿತು. ಅದಕ್ಕೂ ಮೊದಲು ೧೨ನೆಯ ಶತಮಾನದಲ್ಲಿ, ವಿಶಿಷ್ಟಾದ್ವೈತ ಸಿದ್ಧಾಂತದ ಪ್ರವರ್ತಕರಾದ ರಾಮಾನುಜಾಚಾರ್ಯರು, ತೊಣ್ಣೂರು-ಮೇಲುಕೋಟೆಗಳಲ್ಲಿ ವಾಸ್ತವ್ಯ ಮಾಡಿದ್ದಾಗ, ಮೇಲುಕೋಟೆಯ ತಿರುನಾರಾಯಣಸ್ವಾಮಿ ದೇವಸ್ಥಾನಕ್ಕೆ ನಿಗದಿತ ಸಮಯದಲ್ಲಿ ಹರಿಜನರಿಗೆ ಮುಕ್ತ ಪ್ರವೇಶಕ್ಕೆ ಅವಕಾಶ ಮಾಡಿಕೊಟ್ಟಿದ್ದರು.

ಅಸ್ಪೃಶ್ಯತಾ ನಿವಾರಣೆಯ ಸಂಬಂಧವಾಗಿ ಮಹಾತ್ಮ ಗಾಂಧೀಜಿಯವರು ೧೯೩೪ರಲ್ಲಿ ಕರ್ನಾಟಕದ ಎಲ್ಲಾ ಜಿಲ್ಲೆಗಳಲ್ಲೂ ಪ್ರವಾಸ ಕೈಗೊಂಡು ಹರಿಜನ ಸೇವಕ ಸಂಘಕ್ಕಾಗಿ ನಿಧಿ ಸಂಗ್ರಹಿಸಿದ ಸಂದರ್ಭದಲ್ಲಿ ಮಂಡ್ಯ ಮತ್ತು ಮದ್ದೂರುಗಳಿಗೂ ಬಂದು ನಿಧಿ ಸ್ವೀಕರಿಸಿದರು. ಗಾಂಧೀಜಿಯವರ ಪ್ರಭಾವಕ್ಕೆ ಒಳಗಾದವರಲ್ಲಿ ಪ್ರಮುಖರಾದ ಕೀಲಾರದ ಕೆ.ವಿ.ಶಂಕರೇಗೌಡರು, ಸಮಾಜಸೇವೆಗೆ ಹೆಸರುವಾಸಿಯಾಗಿದ್ದು ಸ್ವಗ್ರಾಮವಾದ ಕೀಲಾರದಲ್ಲಿ 'ಜಿಲ್ಲಾ ಜನತಾ ಸೇವಾ ಸಂಘ'ವನ್ನು ಪ್ರಾರಂಭಿಸಿದರು. ಹೆಣ್ಣು ಮಕ್ಕಳಿಗೆ, ಅದರಲ್ಲೂ ವಿಶೇಷವಾಗಿ ವಿಧವೆಯರಿಗೆ ಉದ್ಯೋಗ ಕಲ್ಪಿಸುವ ಉದ್ದೇಶದಿಂದ ಆ ಸಂಘದಿಂದ ಖಾದಿ ಪಾಲಿಯಸ್ಟರ್ ಬಟ್ಟೆ ತಯಾರಿಕೆಯನ್ನೂ ಆರಂಭಿಸಿದರು.

೧೯೭೧ರ ಜನಗಣತಿಯ ಪ್ರಕಾರ ಕರ್ನಾಟಕದಲ್ಲಿ ನೂರು ಪರಿಶಿಷ್ಟ ಜಾತಿಗಳಿದ್ದು, ಕೆಲವು ಜಾತಿಗಳನ್ನು ಕೆಲವು ಪ್ರದೇಶಗಳಿಗೆ ಸಂಬಂಧಿಸಿದಂತೆ ಮಾತ್ರ ಪರಿಶಿಷ್ಟ ಜಾತಿಗಳೆಂದು ಘೋಷಿಸಲಾಗಿದೆ. ಭಾರತ ಸರ್ಕಾರವು, ಎಲ್ಲಾ ಪರಿಶಿಷ್ಟ ಬುಡಕಟ್ಟು ಮತ್ತು ಜಾತಿಗಳಿಗೆ ಕೆಲವು ಸೌಲಭ್ಯಗಳನ್ನು ಕಲ್ಪಿಸಿಕೊಟ್ಟಿದ್ದು, ಅವೆಲ್ಲವನ್ನು ಕರ್ನಾಟಕಕ್ಕೂ ಅನ್ವಯಿಸಲಾಗಿದೆ. ಭಾರತ ಸಂವಿಧಾನದಲ್ಲಿ ಅನೇಕ ಅನುಚ್ಛೇದಗಳನ್ನು ಪರಿಶಿಷ್ಟ ಜಾತಿ ಮತ್ತು ಪಂಗಡಗಳ ಕಲ್ಯಾಣದ ಸಲುವಾಗಿ ರೂಪಿಸಲಾಗಿದೆ. ಸರ್ಕಾರಿ ಸೇವೆಯಲ್ಲಿ ನೇಮಕಾತಿ ಸ್ಥಾನಗಳ ಮೀಸಲಾತಿ, ವಿಧಾನಸಭೆ ಮತ್ತು ಸಂಸತ್ತಿನಲ್ಲಿ ಯೋಗ್ಯ ಪ್ರಾತಿನಿಧ್ಯ ಮುಂತಾದ ಕಾರ್ಯಕ್ರಮಗಳ ಬಗ್ಗೆ ಉಲ್ಲೇಖವಿದೆ. ಕರ್ನಾಟಕದಲ್ಲಿ ಪರಿಶಿಷ್ಟ ಜಾತಿ ಮತ್ತು ಹಿಂದುಳಿದ ವರ್ಗಗಳ ಕ್ಷೇಮಾಭಿವೃದ್ಧಿಗಾಗಿ ಕಾರ್ಯಕ್ರಮಗಳು, ೧೯೪೦ ರಷ್ಟು ಹಿಂದಿನಿಂದಲೇ ನಡೆದುಕೊಂಡು ಬಂದಿವೆಯಾದರೂ ಆ ಕಾರ್ಯಕ್ರಮಗಳಿಗೆ ಹೆಚ್ಚಿನ ಪ್ರಾಮುಖ್ಯತೆ ಸಿಕ್ಕಿದ್ದು ಸ್ವಾತಂತ್ರ್ಯಾನಂತರವೇ. ಈ ಕಾರ್ಯಕ್ರಮಗಳು ೧೯೫೨-೧೯೫೩ರಲ್ಲಿ ಪ್ರಾರಂಭವಾದರೂ ೧೯೫೬ರವರೆಗೂ ಸರಿಯಾದ ರೂಪು-ರೇಷೆಯನ್ನು ಹೊಂದಿರಲಿಲ್ಲ. ಕರ್ನಾಟಕ ರಾಜ್ಯದ ಪುನರ್ ರಚನೆಯ ನಂತರ ಪರಿಶಿಷ್ಟ ಜಾತಿಗಳ ಸೇವಾ ಕಾರ್ಯವನ್ನು ಸಮಾಜ ಕಲ್ಯಾಣ ಖಾತೆಗೆ ವಹಿಸಲಾಯಿತು. ಭಾರತದ ಸಂವಿಧಾನದಲ್ಲಿ ಹೇಳಿರುವ ಧೋರಣೆಗೆ ಅನುಗುಣವಾಗಿ ಈ ಇಲಾಖೆಯಿಂದ ಯೋಜನೆಗಳನ್ನು ರೂಪಿಸಿ ಜಾರಿಗೆ ತರಲಾಯಿತು.

೧೯೯೧ರ ಜನಗಣತಿಯ ಪ್ರಕಾರ ಮಂಡ್ಯ ಜಿಲ್ಲೆಯ ಒಟ್ಟು ಜನಸಂಖ್ಯೆ ೧೬,೪೪,೩೭೪ ಆಗಿದೆ. ಇದರಲ್ಲಿ ಪರಿಶಿಷ್ಟ ಜಾತಿಯ ಜನಸಂಖ್ಯೆ ೨,೨೬,೬೨೮ ಮತ್ತು ಪರಿಶಿಷ್ಟ ವರ್ಗದ ಜನಸಂಖ್ಯೆ ೧೩,೯೧೦ ಇರುತ್ತದೆ. ಪರಿಶಿಷ್ಟ ಜಾತಿಯ ಸಾಕ್ಷರತೆಯ ಪ್ರಮಾಣ ಶೇಕಡವಾರು ೨೬.೨೬, ಹಾಗೂ ಪರಿಶಿಷ್ಟ ವರ್ಗದ ಸಾಕ್ಷರತೆಯ ಪ್ರಮಾಣ ಶೇಕಡಾವಾರು ೨೨.೩೬ ಆಗಿರುತ್ತದೆ. ಪರಿಶಿಷ್ಟ ಜಾತಿ ಮತ್ತು ವರ್ಗದವರ ಸರ್ವತೋಮುಖ ಅಭಿವೃದ್ಧಿಯ ಮೂಲಕ ಸಾಮಾಜಿಕ ಸಮಾನತೆ ಸ್ಥಾಪಿಸಲು, ಸಮಾಜ ಕಲ್ಯಾಣ ಇಲಾಖೆ ಹಾಗೂ ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆಗಳ ಮೂಲಕ ಸರ್ಕಾರವು ಹಲವಾರು ಆರ್ಥಿಕ, ಸಾಮಾಜಿಕ ಮತ್ತು ಶೈಕ್ಷಣಿಕ ಅಭಿವೃದ್ಧಿ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸುತ್ತಿದೆ. ಜಿಲ್ಲಾ ಮಟ್ಟದಲ್ಲಿ ಜಿಲ್ಲಾ ಸಮಾಜ ಕಲ್ಯಾಣ ಅಧಿಕಾರಿಗಳೂ, ತಾಲೂಕು ಮಟ್ಟದಲ್ಲಿ ತಾಲೂಕು ಸಮಾಜ ಕಲ್ಯಾಣ ಅಧಿಕಾರಿಗಳೂ, ಅವುಗಳನ್ನು ಅನುಷ್ಠಾನಕ್ಕೆ ತರುವ ಜವಾಬ್ದಾರಿಯನ್ನು ಹೊಂದಿರುತ್ತಾರೆ.

**ಕೃಷಿ ಕಾಲೋನಿಗಳು :** ಪರಿಶಿಷ್ಟ ಜಾತಿಗೆ ಸೇರಿದ ಬಹುತೇಕ ಜನರಿಗೆ ಸ್ವಂತದ್ದಾದ ಭೂಮಿ ಇರಲಿಲ್ಲವಾದ ಕಾರಣ, ಕೃಷಿ ಕಾಲೋನಿಗಳನ್ನು ರಚಿಸಿ, ಅವರಿಗೆ ಮನೆ, ನಿವೇಶನ ಮತ್ತು ವ್ಯವಸಾಯ ಯೋಗ್ಯ ಭೂಮಿಯನ್ನು

ಒದಗಿಸಿಕೊಡಲು ಸರ್ಕಾರವು ಯೋಚಿಸಿತು. ಅದಕ್ಕಾಗಿ ಕೃಷಿ ಕಾಲೋನಿಗಳಲ್ಲಿ, ಮಕ್ಕಳಿಗಾಗಿ ಶಾಲೆ, ವಯಸ್ಕರಿಗಾಗಿ ರಾತ್ರಿ ಶಾಲೆ, ವಾಚನಾಲಯ, ಗ್ರಂಥಾಲಯ, ಸಮುದಾಯ ಭವನ, ಸೂಕ್ತ ರಸ್ತೆ– ಸಂಪರ್ಕ ಮುಂತಾದ ಸೌಲಭ್ಯಗಳನ್ನು ಒದಗಿಸಲಾಯಿತು. ಈ ಕಾಲೋನಿಗಳಲ್ಲಿರುವವರಿಗೆ, ಎತ್ತು, ಹಾಲು ಹಿಂಡುವ ಹಸು, ಮತ್ತು ವ್ಯವಸಾಯಕ್ಕೆ ಅಗತ್ಯವಾದ ಉಪಕರಣಗಳನ್ನೂ ಸರಬರಾಜು ಮಾಡಲಾಗಿದೆ. ಮಂಡ್ಯ ಜಿಲ್ಲೆಯಲ್ಲಿ ೧೯೬೫–೬೬ರಲ್ಲಿ ಇಂತಹ ಏಳು ಕೃಷಿ ಕಾಲೋನಿಗಳಿದ್ದು, ಅವುಗಳ ಹೆಸರು ಮತ್ತು ಅಲ್ಲಿ ವಾಸಿಸುತ್ತಿದ್ದ ಕುಟುಂಬಗಳ ವಿವರಗಳನ್ನು ಇಲ್ಲಿ ಗಮನಿಸಬಹುದಾಗಿದೆ.

**ಕೋಷ್ಟಕ ೧೬.೭ ಕೃಷಿ ಕಾಲೋನಿ ನಿವಾಸಗಳ ವಿವರ**

| ತಾಲೂಕು | ಕಾಲೋನಿಯ ಹೆಸರು | ವಾಸಿಸುತ್ತಿದ್ದ ಕುಟುಂಬಗಳ ಸಂಖ್ಯೆ |
|---|---|---|
| ಮಂಡ್ಯ | ೧. ಶಿವಪುರ | ೨೩ |
| | ೨. ಹೊನಗಾನಹಳ್ಳಿ | ೪೦ |
| | ೩. ಮಂಗಳ | ೧೫ |
| | ೪. ಮಾರೇಗೌಡನಹಳ್ಳಿ | ೧೬ |
| ಮದ್ದೂರು | ೧. ತರಿಕೆರೆ | ೮೬ |
| | ೨. ಕುದುರೆಗುಂಡಿ | ೨೫ |
| ಕೃಷ್ಣರಾಜಪೇಟೆ | ೧. ಬೆಳ್ಳಿಬೆಟ್ಟ | ೫೮ |

ಮಂಡ್ಯ ತಾಲೂಕಿನ ಶಿವಾರದಲ್ಲಿ ಪರಿಶಿಷ್ಟ ಪಂಗಡದವರಿಗಾಗಿ ಒಂದು ಕೃಷಿ ಕಾಲೋನಿಯನ್ನು ಸರ್ಕಾರವು ೧೯೬೫–೬೬ರಲ್ಲಿ ಸ್ಥಾಪಿಸಿದ್ದು, ಪರಿಶಿಷ್ಟ ಪಂಗಡಕ್ಕೆ ಸೇರಿದ ಸುಮಾರು ೨೦ ಕುಟುಂಬಗಳು ಅಲ್ಲಿ ವ್ಯವಸಾಯ ವೃತ್ತಿಯನ್ನವಲಂಬಿಸಿ, ಬದುಕು ನಡೆಸುತ್ತಿದ್ದು, ಸದರಿ ಜನಾಂಗದವರಿಗಾಗಿಯೇ ಒಂದು ಆಶ್ರಮ ಶಾಲೆಯನ್ನು ನಡೆಸಲಾಗುತ್ತಿದೆ. ಕೃಷಿಕರಿಗೆ ಮತ್ತು ಕುಶಲಕರ್ಮಿಗಳಿಗೆ ಮನೆಗಳನ್ನು ಕಟ್ಟಲು ಬಾವಿಗಳನ್ನು ತೋಡಲು ಹಾಗೂ ಅವರ ಮಕ್ಕಳಿಗಾಗಿ ಶೈಕ್ಷಣಿಕ ಸೌಲಭ್ಯಗಳನ್ನು ಒದಗಿಸಲು, ಮೂರನೇ ಪಂಚವಾರ್ಷಿಕ ಯೋಜನೆಯಲ್ಲಿ ೦.೩೯ ಲಕ್ಷ ರೂ.ಗಳನ್ನು ಒದಗಿಸಲಾಗಿತ್ತು. ಅಲೆಮಾರಿ ಪಂಗಡಗಳ ಅಭಿವೃದ್ಧಿಗಾಗಿ ೧೯೬೫–೬೬ರಲ್ಲಿ ಕೃಷಿ ಉಪಕರಣಗಳನ್ನೂ, ಹಾಲು ಕರೆಯುವ ಹಸುಗಳನ್ನೂ ಮತ್ತು ಮನೆ ಕಟ್ಟಲು ನೆರವನ್ನೂ ನೀಡುವ ಸಲುವಾಗಿ ೧೪,೦೦೦ ರೂ.ಗಳನ್ನು ಖರ್ಚು ಮಾಡಲಾಯಿತು. ೧೯೭೮–೭೯ರಲ್ಲಿ ಮಂಡ್ಯ ತಾಲೂಕಿನ ಹೊನಗಾನಹಳ್ಳಿಯಲ್ಲಿ ರಚಿಸಲಾದ ಕೃಷಿ ಕಾಲೋನಿಯಲ್ಲಿ ೧೦೦ ಕುಟುಂಬಗಳು ವಾಸಿಸುತ್ತಿವೆ. ಮದ್ದೂರು ತಾಲೂಕಿನ ಅಂಕೇಗೌಡನದೊಡ್ಡಿ ಹಾಗೂ ಮಳವಳ್ಳಿ ತಾಲೂಕಿನ ಮುತ್ತತ್ತಿಗಳಲ್ಲಿ, ೧೯೯೯ರಲ್ಲಿ ಕೃಷಿ ಕಾಲೋನಿಗಳನ್ನು ಪರಿಶಿಷ್ಟ ವರ್ಗದವರಿಗಾಗಿ ಸ್ಥಾಪಿಸಲಾಗಿದೆ. ಅಂಕೇಗೌಡನದೊಡ್ಡಿಯಲ್ಲಿ ೩೫ ಬುಡಕಟ್ಟು ಕುಟುಂಬಗಳಿದ್ದು ಅವರಿಗೆ ಸ್ವಯಂ ಉದ್ಯೋಗ ಕಲ್ಪಿಸುವ ಸಲುವಾಗಿ ೧೯೯೯ರಲ್ಲಿ ರೂ.೭೩,೭೭೫ ಗಳನ್ನು ಇಲಾಖೆಯ ವತಿಯಿಂದ ಖರ್ಚು ಮಾಡಲಾಗಿದೆ. ಮುತ್ತತ್ತಿಯಲ್ಲಿ ಪರಿಶಿಷ್ಟ ವರ್ಗದ ೬೦ ಕುಟುಂಗಳಿವೆ. ಈ ಕುಟುಂಬಗಳಿಗೆ ಕುರಿ ಸಾಕಾಣಿಕೆಗೆಂದು ೧೯೯೯ರಲ್ಲಿ ೧,೭೬,೪೦೦ ರೂ.ಗಳ ಧನ ಸಹಾಯ ಮಾಡಲಾಗಿದೆ. ಡಾ.ಅಂಬೇಡ್ಕರ್ ಸಮಗ್ರ ಗ್ರಾಮೀಣ ಅಭಿವೃದ್ಧಿ ಯೋಜನೆಯಡಿ, ೨೦೦೧ನೇ ಸಾಲಿನಲ್ಲಿ ಚಾಮನಹಳ್ಳಿಯ ಸರ್ವತೋಮುಖ ಅಭಿವೃದ್ಧಿ ಕಾರ್ಯಕ್ರಮವನ್ನು ಕೈಗೆತ್ತಿಕೊಳ್ಳಲಾಗಿದ್ದು, ಈ ಯೋಜನೆಗಾಗಿ ಸರ್ಕಾರವು ೧೮ ಲಕ್ಷ ರೂ.ಗಳನ್ನು ಒದಗಿಸಿದೆ.

ಜನವರಿ ೧೯೯೯ರಿಂದ ಪರಿಶಿಷ್ಟ ವರ್ಗದವರ ಕಲ್ಯಾಣದ ಯೋಜನೆಗಳನ್ನು ಜಾರಿಗೊಳಿಸುವ ಸಲುವಾಗಿ, ಸಮಾಜ ಕಲ್ಯಾಣ ಇಲಾಖೆಯಿಂದ ಬೇರ್ಪಡಿಸಿ, ಪ್ರತ್ಯೇಕ ಇಲಾಖೆಯನ್ನು ಸ್ಥಾಪಿಸಲಾಗಿದೆ. ಈ ಎರಡು ಇಲಾಖೆಗಳು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದವರಿಗಾಗಿ ಒಂದೇ ರೀತಿಯ ಶೈಕ್ಷಣಿಕ ಮತ್ತು ಆರ್ಥಿಕ ಅಭಿವೃದ್ಧಿ ಯೋಜನೆಗಳನ್ನು ಪ್ರತ್ಯೇಕವಾಗಿ ನಿರ್ವಹಿಸುತ್ತವೆ. ಜಿಲ್ಲಾ ಮಟ್ಟದಲ್ಲಿ ಈ ಎರಡೂ ಇಲಾಖೆಗಳ ಎಲ್ಲಾ ಕಾರ್ಯಕ್ರಮಗಳನ್ನು ಜಿಲ್ಲಾ ಸಮಾಜ ಕಲ್ಯಾಣ ಅಧಿಕಾರಿಯೇ ಜಾರಿಗೊಳಿಸುತ್ತಾರೆ.

**ಮೆಟ್ರಿಕ್ ಪೂರ್ವ ವಿದ್ಯಾರ್ಥಿ ನಿಲಯಗಳು :** ಶೈಕ್ಷಣಿಕ ಕಾರ್ಯಕ್ರಮಗಳ ಅಡಿಯಲ್ಲಿ ಮಾಧ್ಯಮಿಕ ಮತ್ತು ಪ್ರೌಢ ಶಾಲಾ ಶಿಕ್ಷಣ ಪಡೆಯಲು ದೂರದ ಊರುಗಳಿಂದ ಶಿಕ್ಷಣ ಸಂಸ್ಥೆಗಳಿರುವ ಸ್ಥಳಕ್ಕೆ ಬಂದು ಹೋಗುವಂತಹ, ಪರಿಶಿಷ್ಟ ಜಾತಿ ಮತ್ತು ಪಂಗಡಗಳ ವಿದ್ಯಾರ್ಥಿಗಳಿಗೆ ಅನುಕೂಲ ಕಲ್ಪಿಸಿಕೊಡುವ ಉದ್ದೇಶದಿಂದ ಈ ನಿಲಯಗಳನ್ನು ಇಲಾಖೆಗಳ ವತಿಯಿಂದ ನಡೆಸಲಾಗುತ್ತಿದೆ. ೧೯೬೫-೬೬ರಲ್ಲಿ, ಶಿಕ್ಷಣ ಇಲಾಖೆಯ ವತಿಯಿಂದ ಕೃಷ್ಣರಾಜಪೇಟೆ ಮತ್ತು ಮಳವಳ್ಳಿಗಳಲ್ಲಿ ನಿರ್ವಹಿಸಲಾಗುತ್ತಿದ್ದ ಎರಡು ನಿಲಯಗಳನ್ನು ಹೊರತು ಪಡಿಸಿ, ಜಿಲ್ಲೆಯಲ್ಲಿ ಸಮಾಜ ಕಲ್ಯಾಣ ಇಲಾಖೆಯ ವತಿಯಿಂದ ನಡೆಸಲಾಗುತ್ತಿದ್ದ ಒಟ್ಟು ೧೧ ಮೆಟ್ರಿಕ್ ಪೂರ್ವ ವಿದ್ಯಾರ್ಥಿ ನಿಲಯಗಳಿದ್ದವು. ಅವುಗಳಲ್ಲಿ ಎಂಟು ಬಾಲಕರಿಗಾಗಿಯೂ ಮತ್ತು ಮೂರು ನಿಲಯಗಳು ಬಾಲಕಿಯರಿಗಾಗಿಯೂ ಇದ್ದವು. ಈ ನಿಲಯಗಳಲ್ಲಿ ಸೌಲಭ್ಯ ಪಡೆದ ನಿಲಯಾರ್ಥಿಗಳ ಸಂಖ್ಯೆ ಮತ್ತು ನಿಲಯಗಳಿರುವ ಸ್ಥಳಗಳನ್ನು ಕೆಳಗೆ ನೀಡಲಾಗಿದೆ.

**ಕೋಷ್ಟಕ ೧೬.೮ ೧೯೬೫-೬೬ರಲ್ಲಿ ಇಲಾಖೆ ವತಿಯಿಂದ ನಡೆಸಲಾಗುತ್ತಿದ್ದ ನಿಲಯಗಳ ವಿವರ**

| ಕ್ರಮ ಸಂಖ್ಯೆ | ಸ್ಥಳ | ವಿದ್ಯಾರ್ಥಿ/ವಿದ್ಯಾರ್ಥಿನಿಯರ ಸಂಖ್ಯೆ |
|---|---|---|
| ೧ | ಮಂಡ್ಯ (ಬಾಲಕಿಯರಿಗೆ) | ೬೦ |
| ೨ ಮತ್ತು ೩ | ಮಂಡ್ಯ (ಬಾಲಕರಿಗೆ) | ೨೦೦ |
| ೪ | ಮಳವಳ್ಳಿ (ಬಾಲಕಿಯರಿಗೆ) | ೪೦ |
| ೫ | ಮಾರ್ನವಮಿದೊಡ್ಡಿ (ಬಾಲಕಿಯರಿಗೆ) | ೧೫ |
| ೬ | ಗಂಜಾಂ (ಬಾಲಕರಿಗೆ) | ೪೦ |
| ೭ | ನಾಗಮಂಗಲ (ಬಾಲಕರಿಗೆ) | ೮೭ |
| ೮ | ಮದ್ದೂರು (ಬಾಲಕರಿಗೆ) | ೧೦೭ |
| ೯ | ಹೇಮಗಿರಿ (ಬಾಲಕರಿಗೆ) | ೨೫ |
| ೧೦ | ಹೊನಕೆರೆ (ಬಾಲಕರಿಗೆ) | ೩೩ |
| ೧೧ | ಪಾಂಡವಪುರ (ಬಾಲಕರಿಗೆ) | ೭೫ |

ಐದರಿಂದ ಹತ್ತನೇ ತರಗತಿಗಳಲ್ಲಿ ವ್ಯಾಸಂಗ ಮಾಡುತ್ತಿರುವ ಶಾಲಾ ವಿದ್ಯಾರ್ಥಿಗಳಿಗೆ, ಸಮಾಜ ಕಲ್ಯಾಣ ಮತ್ತು ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆಗಳು ನಡೆಸುತ್ತಿರುವ ಮೆಟ್ರಿಕ್ ಪೂರ್ವ ನಿಲಯಗಳಲ್ಲಿ ಈಗ ಪ್ರವೇಶ ನೀಡಲಾಗುವುದು. ಹತ್ತು ತಿಂಗಳ ಅವಧಿಗೆ ಆಹಾರ ಪೂರೈಕೆ ; ಸೋಪು ಎಣ್ಣೆ ಇತ್ಯಾದಿಗಳ ಪೂರೈಕೆ ; ವೈದ್ಯಕೀಯ ಸೌಲಭ್ಯ; ಪಠ್ಯಪುಸ್ತಕ ಮತ್ತುಲೇಖನ ಸಾಮಗ್ರಿಗಳ ಪೂರೈಕೆ ; ಎರಡು ಜೊತೆ ಟೆರಿಕಾಟ್ ಸಮವಸ್ತ್ರಗಳ

ಪೂರೈಕೆ; ವಿದ್ಯಾರ್ಥಿಗಳಲ್ಲಿ ಶೈಕ್ಷಣಿಕ ಮಟ್ಟದಲ್ಲಿ ಸುಧಾರಣೆ ತರಲು ಅರೆಕಾಲಿಕ ಬೋಧಕರಿಂದ ಮನೆಪಾಠದ ವ್ಯವಸ್ಥೆ; ಪಬ್ಲಿಕ್ ಪರೀಕ್ಷೆಗಳಲ್ಲಿ ಪ್ರಥಮ ದರ್ಜೆಯಲ್ಲಿ ಉತ್ತೀರ್ಣರಾದ ವಿದ್ಯಾರ್ಥಿಗಳಿಗೆ, ಪ್ರತೀ ವಿದ್ಯಾರ್ಥಿಗೆ ವಾರ್ಷಿಕ ರೂ. ೨೦೦/- ರಂತೆ ಪ್ರೋತ್ಸಾಹ ಧನ -ಇವೇ ಮುಂತಾದ ಇನ್ನೂ ಹಲವಾರು ಸೌಲಭ್ಯಗಳನ್ನು ಈ ನಿಲಯಗಳಲ್ಲಿನ ವಿದ್ಯಾರ್ಥಿಗಳಿಗೆ ಒದಗಿಸಿ ಕೊಡಲಾಗುತ್ತದೆ. ಜಿಲ್ಲೆಯಲ್ಲಿ, ಪರಿಶಿಷ್ಟ ಜಾತಿಯವರಿಗಾಗಿ ೩೦ ಮೆಟ್ರಿಕ್ ಪೂರ್ವ ಬಾಲಕರ ವಿದ್ಯಾರ್ಥಿ ನಿಲಯಗಳೂ, ೧೩ ಮೆಟ್ರಿಕ್ ಪೂರ್ವ ಬಾಲಕಿಯರ ನಿಲಯಗಳೂ ಇದ್ದು, ೨೦೦೦-೨೦೦೧ನೇ ಸಾಲಿನಲ್ಲಿ ೧,೮೪೯ ಬಾಲಕರು, ೧,೦೦೬ ಬಾಲಕಿಯರು ಹೀಗೆ ಒಟ್ಟು ೨,೮೭೫ ಮಂದಿ ಈ ನಿಲಯಗಳ ಪ್ರಯೋಜನ ಪಡೆದಿದ್ದು, ಇದಕ್ಕಾಗಿ ರೂ. ೨೧೯.೮೫ ಲಕ್ಷಗಳನ್ನು ಖರ್ಚು ಮಾಡಲಾಗಿದೆ.

**ಅನುದಾನಿತ ಮೆಟ್ರಿಕ್ ಪೂರ್ವ ವಿದ್ಯಾರ್ಥಿ ನಿಲಯಗಳು :** ಖಾಸಗಿ ಸಂಸ್ಥೆಗಳು ನಡೆಸುವ ನಾಲ್ಕು ವಿದ್ಯಾರ್ಥಿ ನಿಲಯಗಳು, ೧೯೬೫-೬೬ರಲ್ಲಿ, ಇಲಾಖೆಯಿಂದ ಅನುದಾನವನ್ನು ಪಡೆಯುತ್ತಿದ್ದವು. ಮದ್ದೂರು ತಾಲೂಕಿನ ಕಾಡುಕೊತ್ತನಹಳ್ಳಿ, ಕೃಷ್ಣರಾಜಪೇಟೆ ತಾಲೂಕಿನ ಹೊಸಹೊಳಲು, ಮಳವಳ್ಳಿ ತಾಲೂಕಿನ ಹಲಗೂರು ಮತ್ತು ಮಂಡ್ಯ ನಗರದಲ್ಲಿ ಈ ನಿಲಯಗಳಿದ್ದು, ಇವುಗಳಲ್ಲಿ ೧೨೫ ವಿದ್ಯಾರ್ಥಿಗಳು ವಸತಿ ಸೌಲಭ್ಯವನ್ನು ಪಡೆದಿದ್ದರು. ಈ ನಿಲಯಗಳಿಗಾಗಿ ೧೯೬೫-೬೬ರಲ್ಲಿ ಇಲಾಖೆಯಿಂದ ಮಾಡಲಾದ ಖರ್ಚು ೧೫,೦೦೦/- ರೂ.ಗಳು. ೧೯೯೯-೨೦೦೦ನೇ ಸಾಲಿನಲ್ಲಿ, ಜಿಲ್ಲೆಯಲ್ಲಿ ಬಾಲಕರಿಗಾಗಿ ಆರು ಅನುದಾನಿತ ವಿದ್ಯಾರ್ಥಿ ನಿಲಯಗಳಿದ್ದು, ಈ ವಿದ್ಯಾರ್ಥಿ ನಿಲಯಗಳಿಗೆ ವಿದ್ಯಾರ್ಥಿಗಳ ಭೋಜನ ವೆಚ್ಚಕ್ಕೆಂದು ತಿಂಗಳಿಗೆ ತಲಾ ರೂ.೪೦೦ ರ ದರದಲ್ಲಿ ಸಮಾಜ ಕಲ್ಯಾಣ ಇಲಾಖೆಯಿಂದ ಅನುದಾನ ಮಂಜೂರು ಮಾಡಲಾಗುತ್ತದೆ. ಕಟ್ಟಡದ ಬಾಡಿಗೆ, ವಿದ್ಯುಚ್ಛಕ್ತಿ, ನೀರು ಹಾಗೂ ಸಿಬ್ಬಂದಿ ವರ್ಗಕ್ಕೆ ವೇತನವನ್ನೂ ನೀಡಲಾಗುತ್ತದೆ. ೧೯೯೯-೨೦೦೦ನೇ ಸಾಲಿನಲ್ಲಿ ಭೋಜನ ವೆಚ್ಚಕ್ಕಾಗಿ ರೂ.೯.೮೬ ಲಕ್ಷಗಳನ್ನು ವೆಚ್ಚ ಮಾಡಲಾಗಿದೆ. ಒಟ್ಟಾರೆಯಾಗಿ ೧೯೯೯-೨೦೦೦ನೇ ಸಾಲಿನಲ್ಲಿ ಯೋಜನೆಯಡಿಯಲ್ಲಿ ರೂ.೧೯೩.೭೮ ಲಕ್ಷಗಳನ್ನೂ, ಯೋಜನೇತರಡಿಯಲ್ಲಿ ರೂ.೩೪೩.೫೩ ಲಕ್ಷಗಳನ್ನೂ ಖರ್ಚು ಮಾಡಲಾಗಿದೆ.

**ಮೆಟ್ರಿಕ್ ನಂತರದ ವಿದ್ಯಾರ್ಥಿ ನಿಲಯಗಳು :** ಗ್ರಾಮಾಂತರ ಪ್ರದೇಶದಿಂದ ವ್ಯಾಸಂಗಕ್ಕಾಗಿ ಬರುವ ಪರಿಶಿಷ್ಟ ಜಾತಿ ಮತ್ತು ಪಂಗಡದ ಕಾಲೇಜು ವಿದ್ಯಾರ್ಥಿಗಳಿಗೆ ವಿದ್ಯಾರ್ಜನೆಗೆ ಅನುಕೂಲ ಕಲ್ಪಿಸುವ ಸಲುವಾಗಿ, ಜಿಲ್ಲೆಯಲ್ಲಿ ೧೧ ಮೆಟ್ರಿಕ್ ನಂತರದ ವಿದ್ಯಾರ್ಥಿ ನಿಲಯಗಳನ್ನು ನಡೆಸಲಾಗುತ್ತಿದೆ. ಇದರಲ್ಲಿ ಎಂಟು ನಿಲಯಗಳು ಬಾಲಕರಿಗಾಗಿಯೂ, ಮೂರು ನಿಲಯಗಳು ಬಾಲಕಿಯರಿಗಾಗಿಯೂ ಇರುತ್ತವೆ. ಈ ವಿದ್ಯಾರ್ಥಿಗಳಿಗೆ ವಸತಿ ಮತ್ತು ಭೋಜನಕ್ಕಾಗಿ ತಿಂಗಳಿಗೆ ತಲಾ ರೂ.೪೫೦/- ಖರ್ಚು ಮಾಡಲಾಗುತ್ತದೆ. ಈ ನಿಲಯಗಳಲ್ಲಿ ಗ್ರಂಥಾಲಯ, ಟಿ.ವಿ., ಆಟದ ಸಾಮಗ್ರಿಗಳ ವ್ಯವಸ್ಥೆಯೂ ಇರುತ್ತದೆ. ಜಿಲ್ಲೆಯ ೧೧ ಕಾಲೇಜು ವಿದ್ಯಾರ್ಥಿ ನಿಲಯಗಳ ಆಡಳಿತವನ್ನು ಆಯಾ ತಾಲೂಕು ಸಮಾಜ ಕಲ್ಯಾಣಾಧಿಕಾರಿಗಳೇ ನೋಡಿಕೊಳ್ಳುತ್ತಾರೆ.

**ಮೆಟ್ರಿಕ್ ಪೂರ್ವ ವಿದ್ಯಾರ್ಥಿ ವೇತನಗಳ ನೀಡಿಕೆ :** ಪ್ರೌಢಶಾಲೆಯಲ್ಲಿ ವ್ಯಾಸಂಗ ಮಾಡುವ ಹಿಂದುಳಿದ ವರ್ಗದ ವಿದ್ಯಾರ್ಥಿಗಳಿಗೆ ಉತ್ತೇಜನ ನೀಡುವ ಉದ್ದೇಶದಿಂದ, ಐದರಿಂದ ಹತ್ತನೇ ತರಗತಿಯ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿ ವೇತನವನ್ನು ನೀಡಲಾಗುತ್ತಿದ್ದು, ೧೯೬೪-೬೫ ಮತ್ತು ೧೯೬೫-೬೬ರಲ್ಲಿ ಸಾಲುಗಳಲ್ಲಿ ೧೨೦ ಮಾಧ್ಯಮಿಕ ಶಾಲಾ ವಿದ್ಯಾರ್ಥಿ ವೇತನಗಳನ್ನು ಮತ್ತು ೬೦ ಪ್ರೌಢಶಾಲಾ ವಿದ್ಯಾರ್ಥಿ ವೇತನಗಳನ್ನು ಕ್ರಮವಾಗಿ ತಿಂಗಳಿಗೆ ರೂ. ಐದು ಮತ್ತು ಹತ್ತರ ದರದಲ್ಲಿ ಪರಿಶಿಷ್ಟ ಜಾತಿಯ ವಿದ್ಯಾರ್ಥಿಗಳಿಗೆ ಕೊಡಲಾಗಿತ್ತು. ಪ್ರಸ್ತುತ ವಿದ್ಯಾರ್ಥಿ ವೇತನದ ದರವನ್ನು ಹೆಚ್ಚಿಸಲಾಗಿದ್ದು, ವರ್ಷಕ್ಕೆ ರೂಪಾಯಿ ೭೫ ರಂತೆ ಮತ್ತು ಎಂಟರಿಂದ ಹತ್ತನೇ ತರಗತಿಯ ವಿದ್ಯಾರ್ಥಿಗಳಿಗೆ ವರ್ಷಕ್ಕೆ ರೂಪಾಯಿ ೧೦೦ ರಂತೆ ಈ ಇಲಾಖೆಯ ಮೂಲಕ ನೀಡಲಾಗುತ್ತಿದೆ. ಪ್ರವರ್ಗ ಒಂದರ ವಿದ್ಯಾರ್ಥಿಗಳನ್ನು

ಹೊರತುಪಡಿಸಿ, ಕುಟುಂಬದ ವಾರ್ಷಿಕ ವರಮಾನ ೧೫,೦೦೦ ರೂ.ಗಳಿಗೆ ಮೀರದಿದ್ದಲ್ಲಿ ಸರ್ಕಾರದ ಇತರೆ ಯಾವುದೇ ಇಲಾಖೆಯಿಂದ ನಡೆಯುತ್ತಿರುವ ಅಥವಾ ಅನುದಾನಿತ ಖಾಸಗಿ ನಿಲಯಗಳಲ್ಲಿ ಪ್ರವೇಶ ಪಡೆದಿರದಿದ್ದರೆ, ಬೇರೆ ಯಾವುದೇ ವಿದ್ಯಾರ್ಥಿ ವೇತನವನ್ನು ಪಡೆಯುತ್ತಿಲ್ಲದಿದ್ದಲ್ಲಿ, ಹಾಗೂ ಹಿಂದಿನ ವಾರ್ಷಿಕ ಪರೀಕ್ಷೆಯಲ್ಲಿ ಉತ್ತೀರ್ಣನಾಗಿದ್ದಲ್ಲಿ ಅಂತಹ ವಿದ್ಯಾರ್ಥಿಯು ಈ ವಿದ್ಯಾರ್ಥಿ ವೇತನವನ್ನು ಪಡೆಯಲು ಅರ್ಹನೆಂದು ಇಲಾಖೆಯು ಪರಿಗಣಿಸುತ್ತದೆ. ೨೦೦೦-೨೦೦೧ನೇ ಸಾಲಿನಲ್ಲಿ ೨೦,೭೨೬ ಪರಿಶಿಷ್ಟ ಜಾತಿಯ ವಿದ್ಯಾರ್ಥಿಗಳು ಈ ವಿದ್ಯಾರ್ಥಿ ವೇತನಗಳ ಪ್ರಯೋಜನ ಪಡೆದಿದ್ದು, ಅದಕ್ಕಾಗಿ ರೂ. ೪೨.೮೭ ಲಕ್ಷ ರೂಪಾಯಿಗಳನ್ನು ಖರ್ಚು ಮಾಡಲಾಗಿದೆ.

ಎಸ್.ಎಸ್.ಎಲ್.ಸಿ. ಮತ್ತು ಕಾಲೇಜು ವಿದ್ಯಾರ್ಥಿಗಳಿಗೆ ಪುರಸ್ಕಾರ, ಅಧ್ಯಯನ ಪ್ರವಾಸ ವೆಚ್ಚ, ಹೆಣ್ಣುಮಕ್ಕಳಿಗೆ ಟಿ.ಸಿ.ಹೆಚ್. ತರಬೇತಿ, ಮೆರಿಟ್ ವಿದ್ಯಾರ್ಥಿ ವೇತನ, ಮುಂತಾದವು ಇಲಾಖೆಯಿಂದ ಪರಿಶಿಷ್ಟ ಜಾತಿಯವರಿಗಾಗಿ ಕಾರ್ಯಗತಗೊಳಿಸಲಾಗುತ್ತಿರುವ ಇನ್ನಿತರ ಕಾರ್ಯಕ್ರಮಗಳಾಗಿದ್ದು, ೨೦೦೦-೨೦೦೧ನೇ ಸಾಲಿನಲ್ಲಿ ಈ ಕಾರ್ಯಕ್ರಮಗಳಿಗಾಗಿ ಮಾಡಲಾದ ಖರ್ಚು ಮತ್ತು ಫಲಾನುಭವಿಗಳ ವಿವರವನ್ನು ಇಲ್ಲಿ ಕೊಡಲಾಗಿದೆ.

**ಕೊಷ್ಟಕ ೧೬.೯ ೨೦೦೧-೦೨ರ ಸಾಲಿನಲ್ಲಿ ವಿವಿಧ ವರ್ಗದ ಶಿಕ್ಷಣಾರ್ಥಿಗಳಿಗೆ ನೀಡಲ್ಪಟ್ಟಿರುವ ಸೌಲಭ್ಯಗಳ ವಿವರ**

| ಕಾರ್ಯಕ್ರಮದ ಹೆಸರು | ಕಾರ್ಯಕ್ರಮದ ವಿವರ | ಫಲಾನುಭವಿಗಳ ಸಂಖ್ಯೆ | ಮಾಡಲಾದ ಖರ್ಚು (ಲಕ್ಷ ರೂ.ಗಳಲ್ಲಿ) |
|---|---|---|---|
| ೧ | ೨ | ೩ | ೪ |
| ಮೆರಿಟ್ ವಿದ್ಯಾರ್ಥಿ ವೇತನ | ೫ ರಿಂದ ೯ನೇ ತರಗತಿಯ ವಾರ್ಷಿಕ ಪರೀಕ್ಷೆಯಲ್ಲಿ ಪ್ರಥಮ ದರ್ಜೆಯಲ್ಲಿ ತೇರ್ಗಡೆಯಾದ ವಿದ್ಯಾರ್ಥಿಗಳಿಗೆ | ೩,೩೬೦ | ೨.೭೯ |
| ಪ್ರಾಥಮಿಕ ಶಾಲಾ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿ ವೇತನ | ಒಂದರಿಂದ ನಾಲ್ಕನೇ ತರಗತಿಯಲ್ಲಿ ವ್ಯಾಸಂಗ ಮಾಡುವ ವಿದ್ಯಾರ್ಥಿಗಳಿಗೆ | ೧೯,೮೯೪ | ೧೪.೯೨ |
| ಮೆಟ್ರಿಕ್ ನಂತರದ ವಿದ್ಯಾರ್ಥಿ ವೇತನ | ಕಾಲೇಜುಗಳಲ್ಲಿ ವ್ಯಾಸಂಗ ಮಾಡುವ ವಿದ್ಯಾರ್ಥಿಗಳಿಗೆ | ೪,೨೦೨ | ೯೮.೨೭ |
| ಎಸ್.ಎಸ್.ಎಲ್.ಸಿ. ವಿದ್ಯಾರ್ಥಿಗಳಿಗೆ ಪುರಸ್ಕಾರ | ಎಸ್.ಎಸ್.ಎಲ್.ಸಿ.ಯಲ್ಲಿ ಪ್ರಥಮ ಬಾರಿಗೆ ಪ್ರಥಮ ದರ್ಜೆಯಲ್ಲಿ ಉತ್ತೀರ್ಣರಾದ ವಿದ್ಯಾರ್ಥಿಗಳಿಗೆ ತಲಾ ರೂ.೫೦೦ರಂತೆ | ೧೨೬ | ೦.೬೩ |
| ಕಾಲೇಜು ವಿದ್ಯಾರ್ಥಿಗಳಿಗೆ ಪುರಸ್ಕಾರ | ಪ್ರಥಮ ದರ್ಜೆಯಲ್ಲಿ ಉತ್ತೀರ್ಣರಾದ ಕಾಲೇಜು ವಿದ್ಯಾರ್ಥಿಗಳಿಗೆ | ೨೫೬ | ೨.೦೦ |
| ಅಧ್ಯಯನ ಪ್ರವಾಸ ಭತ್ಯ | ವೃತ್ತಿಪರ ಶಿಕ್ಷಣ ಪಡೆಯುವ ಪರಿಶಿಷ್ಟ ಜಾತಿ ಮತ್ತು ವರ್ಗದ ವಿದ್ಯಾರ್ಥಿಗಳಿಗೆ ತಲಾ ರೂ.೧,೦೦೦ ದಂತೆ ಪ್ರವಾಸಭತ್ಯೆ | ೨೮ | ೦.೨೮ |
| ಹೆಣ್ಣು ಮಕ್ಕಳಿಗೆ ಟಿ.ಸಿ.ಹೆಚ್. ತರಬೇತಿ | ಟಿ.ಸಿ.ಹೆಚ್. ತರಬೇತಿ ಪಡೆಯುವ ಹೆಣ್ಣು ಮಕ್ಕಳಿಗೆ ಸಮವಸ್ತ್ರ ಮತ್ತು ಪಠ್ಯ ಪುಸ್ತಕ ಕೊಳ್ಳಲು ತಲಾ ರೂ. ೪೦೦ ರಂತೆ ಹಂಚಿಕೆ | ೨೯ | ೦.೧೨ |
| ಮೆಟ್ರಿಕ್ ಪೂರ್ವ ವಿದ್ಯಾರ್ಥಿ ನಿಲಯಗಳು | ಬಾಲಕರ ೩೦ ಮತ್ತು ಬಾಲಕಿಯರ ೧೩ ನಿಲಯಗಳ ವಿದ್ಯಾರ್ಥಿಗಳಿಗೆ ವಸತಿ ಮತ್ತಿತರ ಸೌಲಭ್ಯಗಳು | ೧,೮೬೯ ಬಾಲಕರು, ೧,೦೦೬ ಬಾಲಕಿಯರು, ಒಟ್ಟು ೨,೮೭೫ ವಿದ್ಯಾರ್ಥಿಗಳು | ೨೧೯.೮೫ |

| ೧ | ೨ | ೩ | ೪ |
|---|---|---|---|
| ಮಳವಳ್ಳಿ ವಸತಿ ಶಾಲೆ | ಒಂದರಿಂದ ನಾಲ್ಕನೇ ತರಗತಿಯಲ್ಲಿ ವ್ಯಾಸಂಗ ಮಾಡುವ ಮಕ್ಕಳಿಗೆ ವಸತಿ, ಶಿಕ್ಷಣ, ಭೋಜನ, ಸಮವಸ್ತ್ರ, ಇತ್ಯಾದಿ | ೧೦೦ ವಿದ್ಯಾರ್ಥಿಗಳು | ೪.೮೯ |
| ನಾಲ್ಕು ಮೊರಾರ್ಜಿ ದೇಸಾಯಿ ವಸತಿ ಶಾಲೆಗಳು | ವಿದ್ಯಾರ್ಥಿಗಳು | ೧,೦೦೦ | ೩೩.೧೭ |
| ೨೫ ಮಹಿಳಾ ಕಲ್ಯಾಣ ಕೇಂದ್ರಗಳು | ೩ ರಿಂದ ೫ ವರ್ಷದ ಮಕ್ಕಳಿಗಾಗಿ | ೧,೨೫೦ | ೩೨,೦೫ |
| ಕಾನೂನು ಪದವೀಧರರಿಗೆ ಆಡಳಿತ ತರಬೇತಿ | ಪರಿಶಿಷ್ಟ ಜಾತಿ/ವರ್ಗದ ಕಾನೂನು ಪದವೀಧರರು ಸ್ವತಂತ್ರವಾಗಿ ವೃತ್ತಿ ಮಾಡಲು, ಸರ್ಕಾರಿ ವಕೀಲರಲ್ಲಿ ನಾಲ್ಕು ವರ್ಷಗಳ ಅವಧಿಗೆ ತರಬೇತಿ ಪಡೆಯಲು ಅಭ್ಯರ್ಥಿಗೆ ತಿಂಗಳಿಗೆ ತಲಾ ರೂ.೧,೦೦೦ ರಂತೆ ಸ್ಟೈಫಂಡ್ | ೭ | ೦.೫೫ |

## ಆರ್ಥಿಕ ಅಭಿವೃದ್ಧಿ ಯೋಜನೆಗಳು

**ಹೊಲಿಗೆ ತರಬೇತಿ ಕೇಂದ್ರಗಳು:** ಪರಿಶಿಷ್ಟ ಜಾತಿಯ ಮಹಿಳೆಯರಿಗೆ ಸ್ವಯಂ ಉದ್ಯೋಗದ ಮೂಲಕ ಜೀವನ ನಿರ್ವಹಣೆಗೆ ಅನುವು ಮಾಡಿಕೊಡುವ ಸಲುವಾಗಿ, ಇಲಾಖೆಯಿಂದ ಹೊಲಿಗೆ ತರಬೇತಿ ಕೇಂದ್ರಗಳನ್ನು ನಡೆಸಲಾಗುತ್ತಿದೆ. ಜಿಲ್ಲೆಯಲ್ಲಿ ಹೊಲಿಗೆ ತರಬೇತಿ ಕೇಂದ್ರಗಳನ್ನು ೧೯೬೦ರಲ್ಲಿ ಪ್ರಾರಂಭಿಸಲಾಗಿದ್ದು, ಮಂಡ್ಯ ಮತ್ತು ಮಳವಳ್ಳಿ ತಾಲೂಕುಗಳಲ್ಲಿ ಎರಡು ಹೊಲಿಗೆ ತರಬೇತಿ ಕೇಂದ್ರಗಳಿವೆ. ಪ್ರತಿಯೊಂದು ಕೇಂದ್ರದಲ್ಲೂ ಪ್ರತೀ ವರ್ಷ, ೧೮ ರಿಂದ ೩೦ ವರ್ಷ ವಯೋಮಿತಿಯೊಳಗಿನ ೨೦ ಅಭ್ಯರ್ಥಿಗಳಿಗೆ ತರಬೇತಿ ನೀಡಲಾಗುತ್ತದೆ. ಈ ೨೦ ರಲ್ಲಿ ಪರಿಶಿಷ್ಟ ಜಾತಿ/ಪಂಗಡಕ್ಕೆ ಸೇರಿದ ೧೫ ಮಹಿಳೆಯರು ಹಾಗೂ ಇತರೆ ಹಿಂದುಳಿದ ಜನಾಂಗಕ್ಕೆ ಸೇರಿದ ಐವರು ಮಹಿಳೆಯರೂ ಇಲ್ಲಿ ತರಬೇತಿ ಪಡೆಯುತ್ತಾರೆ. ಗ್ರಾಮಾಂತರ ಪ್ರದೇಶದವರು, ವಿಧವೆಯರು, ಅನಾಥರು ಮತ್ತು ಅಂಗವಿಕಲರಿಗೆ ಆದ್ಯತೆ ನೀಡಿ ತರಬೇತಿಗೆ ಪ್ರವೇಶ ನೀಡಲಾಗುವುದು. ಪ್ರವೇಶ ಪಡೆದವರಿಗೆ, ತಿಂಗಳಿಗೆ ೧೫೦ ರೂಪಾಯಿಗಳ ತರಬೇತಿ ಭತ್ಯೆಯನ್ನೂ, ತರಬೇತಿಯಲ್ಲಿ ಉತ್ತೀರ್ಣರಾದವರಿಗೆ ಉಚಿತವಾಗಿ ಒಂದು ಹೊಲಿಗೆ ಯಂತ್ರವನ್ನೂ ನೀಡಲಾಗುವುದು. ೧೯೯೭–೯೮ರಲ್ಲಿ ೪೦ ಫಲಾನುಭವಿಗಳಿಗೆ ರೂ.೧.೨೫ ಲಕ್ಷ ೧೯೯೮–೯೯ ರಲ್ಲಿ ೪೦ ಫಲಾನುಭವಿಗಳಿಗೆ ರೂ.೨.೨೩ ಲಕ್ಷ ಹಾಗೂ ೧೯೯೯–೨೦೦೦ರಲ್ಲಿ ೪೦ ಫಲಾನುಭವಿಗಳಿಗೆ ೨.೫೬ ಲಕ್ಷ ರೂ.ಗಳನ್ನು ಖರ್ಚು ಮಾಡಲಾಯಿತು.

**ಆಟೋರಿಕ್ಷಾ ಚಾಲನಾ (ಸ್ವಯಂ ಉದ್ಯೋಗ) ತರಬೇತಿ:** ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ನಿರುದ್ಯೋಗಿ ಯುವಕರಿಗೆ ಆಟೋರಿಕ್ಷಾ ಚಾಲನಾ ತರಬೇತಿ ನೀಡಿ, ಅವರು ಸ್ವಯಂ ಉದ್ಯೋಗ ಪ್ರಾರಂಭಿಸಲು ಉತ್ತೇಜನ ಕೊಡುವ ಸಲುವಾಗಿ ಗ್ರಾಮಾಂತರ ಅಭ್ಯರ್ಥಿಗಳಿಗೆ ೩೦೦ ರೂ.ಗಳನ್ನು ಮತ್ತು ನಗರ ಪ್ರದೇಶದ ಅಭ್ಯರ್ಥಿಗಳಿಗೆ ೧೫೦ ರೂ.ಗಳನ್ನು ಶಿಷ್ಯ ವೇತನವಾಗಿ ನೀಡಲಾಗುವುದು. ಪ್ರಾದೇಶಿಕ ಸಾರಿಗೆ ಅಧಿಕಾರಿಗಳು ಮಾನ್ಯತೆ ನೀಡಿದ ಖಾಸಗಿ ತರಬೇತಿ ಸಂಸ್ಥೆಗಳಿಗೆ ನಿಗದಿ ಪಡಿಸಿದ ತರಬೇತಿ ಶುಲ್ಕವನ್ನು ಇಲಾಖೆಯ ವತಿಯಿಂದ ತುಂಬಲಾಗುವುದು.

**ದೌರ್ಜನ್ಯ ಪ್ರಕರಣಗಳಲ್ಲಿ ನೊಂದವರಿಗೆ ಪರಿಹಾರ ಮತ್ತು ಪುರ್ನವಸತಿ ಕಾರ್ಯಕ್ರಮ:** ದೌರ್ಜನ್ಯಕ್ಕೊಳಗಾದ ಪರಿಶಿಷ್ಟ ಜಾತಿ/ಪಂಗಡದ ಅಮಾಯಕರಿಗೆ, ೨,೦೦೦ ರೂ.ಗಳಿಂದ ೨.೦೦ ಲಕ್ಷ ರೂ.ಗಳವರೆಗೆ ನಷ್ಟದ ಪ್ರಮಾಣ ಅನುಸರಿಸಿ ಸಹಾಯಧನ ಮತ್ತು ಪುನರ್ವಸತಿ ನೀಡಲಾಗುವುದು. ದೌರ್ಜನ್ಯಕ್ಕೊಳಗಾದ ವ್ಯಕ್ತಿ ಮೃತನಾದರೆ ರೂ.೨.೦೦ ಲಕ್ಷವನ್ನೂ, ಶಾಶ್ವತ ಅಂಗವಿಕಲನಾದರೆ ರೂ. ಒಂದು ಲಕ್ಷವನ್ನೂ, ವಾಸದ ಮನೆ ಅಥವಾ ಇತರೆ

ಚರಾಸ್ತಿ ನಷ್ಟವಾದರೆ ೨,೦೦೦ ರೂಪಾಯಿಯಿಂದ ೨೦,೦೦೦ ರೂಪಾಯಿಯವರೆಗೂ, ಅತ್ಯಾಚಾರಕ್ಕೆ ಒಳಗಾದರೆ ೫೦,೦೦೦ ರೂ.ಗಳ ಪರಿಹಾರ ಧನವನ್ನೂ ನೀಡಲಾಗುತ್ತದೆ. ಬೆಂಕಿ,ಪ್ರವಾಹ ಮುಂತಾದ ನೈಸರ್ಗಿಕ ವಿಪತ್ತುಗಳಲ್ಲಿ ಹಾಗೂ ಆಕಸ್ಮಿಕ ಘಟನೆಗಳಲ್ಲಿ ಮನೆ ಕಳೆದುಕೊಂಡರೆ ಗೃಹ ನಿರ್ಮಾಣಕ್ಕಾಗಿ ಪರಿಹಾರ ಅಥವಾ ಬಿ.ಆರ್.ಅಂಬೇಡ್ಕರ್ ಯೋಜನೆಯಡಿ ಮನೆ ಕಟ್ಟಿಸಿ ಕೊಡಲಾಗುತ್ತದೆ. ಈ ಯೋಜನೆಯಡಿ ದೌರ್ಜನ್ಯಕ್ಕೊಳಗಾದ ಪರಿಶಿಷ್ಟ ಜಾತಿಯವರಿಗೆ ೧೯೯೭-೧೯೯೮ರ ಸಾಲಿನಲ್ಲಿ ರೂ. ೧೭,೦೫೫-೦೦ ಗಳನ್ನು ಮೂರು ಫಲಾನುಭವಿಗಳಿಗೂ, ೧೯೯೮-೯೯ರ ಸಾಲಿನಲ್ಲಿ ರೂ.೪,೫೦೦-೦೦ಗಳನ್ನು ಐವರಿಗೂ ನೀಡಲಾಗಿದೆ.

**ಅಸ್ಪೃಶ್ಯತಾ ನಿವಾರಣಾ ಕಾರ್ಯಕ್ರಮಗಳು:** ಮೇಲುಕೋಟೆಯ ಚೆಲುವನಾರಾಯಣ ದೇವಾಲಯಕ್ಕೆ ರಾಮಾನುಜಾಚಾರ್ಯರು ೧೨ನೇ ಶತಮಾನದಲ್ಲೇ ನಿರ್ದಿಷ್ಟ ದಿನಗಳಲ್ಲಿ ಪರಿಜನರಿಗೆ ಪ್ರವೇಶ ಕಲ್ಪಿಸಿಕೊಟ್ಟಿದ್ದರು. ಸರ್ಕಾರವು ಅಸ್ಪೃಶ್ಯತಾ ನಿವಾರಣೆಗಾಗಿ ಅನೇಕ ರೀತಿಯ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವ ಮೂಲಕ ಎಲ್ಲಾ ಜನಾಂಗದವರಲ್ಲಿ ಜಾಗೃತಿ ಮೂಡಿಸುವ ಪ್ರಯತ್ನ ಮಾಡುತ್ತಿದೆ. ಗ್ರಾಮಾಂತರ ಪ್ರದೇಶ ಮತ್ತು ಜಿಲ್ಲಾ ಮುಖ್ಯ ಕೇಂದ್ರಗಳಲ್ಲಿ ಎಲ್ಲಾ ಜನಾಂಗದವರೊಡನೆ ಸಭೆ, ಸಮಾರಂಭಗಳನ್ನು ನಡೆಸುವುದು, ಗಣ್ಯ ವ್ಯಕ್ತಿ ಹಾಗೂ ಉತ್ತಮ ವಾಗ್ಮಿಗಳ ಭಾಷಣ ಏರ್ಪಡಿಸಿ, ಅಸ್ಪೃಶ್ಯತಾ ನಿವಾರಣೆಯ ಬಗ್ಗೆ ಅರಿವು ಮೂಡಿಸುವುದು, ಸಂಘ-ಸಂಸ್ಥೆಗಳ ಮೂಲಕ ಬೀದಿನಾಟಕ ಆಡಿಸುವುದು, ಭಿತ್ತಿ ಪತ್ರಗಳ ಮೂಲಕ ಪ್ರಚಾರ ಮಾಡುವುದು ಈ ಕಾರ್ಯಕ್ರಮದ ರೂಪುರೇಷೆಗಳಾಗಿದ್ದು, ತನ್ಮೂಲಕ ಅಸ್ಪೃಶ್ಯತೆಯ ನಿವಾರಣೆಗೆ ಪ್ರಯತ್ನಿಸಲಾಗುತ್ತಿದೆ. ಅಲ್ಲದೆ ನಾಗರಿಕ ಹಕ್ಕು ಸಂರಕ್ಷಣಾ ಕಾಯ್ದೆ ೧೯೫೫ ರನ್ವಯ ಸಾರ್ವಜನಿಕ ಪ್ರದೇಶಗಳಾದ ಶಾಲೆ, ಆಸ್ಪತ್ರೆ, ಹೋಟೆಲ್ ಹಾಗೂ ಧಾರ್ಮಿಕ ಸ್ಥಳಗಳಲ್ಲಿ ಅಸ್ಪೃಶ್ಯತಾ ಆಚರಣೆಯನ್ನು ನಿಷೇಧಿಸಲಾಗಿದೆ. ಈ ನಿಯಮವನ್ನು ಉಲ್ಲಂಘನೆ ಮಾಡಿದ ವ್ಯಕ್ತಿಗೆ ಆರು ತಿಂಗಳಿಗಿಂತ ಕಡಿಮೆಯಿಲ್ಲದ, ಆದರೆ ಐದು ವರ್ಷಗಳ ಅವಧಿಗೆ ವಿಸ್ತರಿಸಬಹುದಾದ ಕಾರಾಗೃಹವಾಸ ಮತ್ತು ಜುಲ್ಮಾನೆಯನ್ನು ವಿಧಿಸಲಾಗುವುದು.

**ಅಂತರ್‌ಜಾತಿ ವಿವಾಹ:** ಇದು ಅಸ್ಪೃಶ್ಯತಾ ನಿವಾರಣೆಯಲ್ಲಿ ಅತಿ ಮುಖ್ಯವಾದ ಕಾರ್ಯಕ್ರಮವಾಗಿದೆ. ಇತರೇ ಜನಾಂಗದವರು, ಪರಿಶಿಷ್ಟ ಜಾತಿಗೆ ಸೇರಿದ ಹೆಣ್ಣು ಅಥವಾ ಗಂಡನ್ನು ಮದುವೆಯಾದರೆ, ಅಂತಹ ಅಂತರ್ಜಾತಿ ವಿವಾಹಿತ ದಂಪತಿಗಳಿಗೆ, ಕೆಲವು ನಿಯಮಗಳನ್ನನುಸರಿಸಿ, ಈ ಇಲಾಖೆಯಿಂದ ರೂ. ೨೫,೦೦೦ ಗಳನ್ನು ಮಂಜೂರು ಮಾಡಲಾಗುತ್ತದೆ. ಇದರಲ್ಲಿ ರೂ. ೧೨,೫೦೦ ಗಳನ್ನು ಸಣ್ಣ ಉಳಿತಾಯ ಸರ್ಟಿಫಿಕೇಟ್ ರೂಪದಲ್ಲಿಯೂ ಉಳಿದ ರೂ. ೧೨,೫೦೦ ಗಳನ್ನು ನಗದು ರೂಪದಲ್ಲಿಯೂ ವಿತರಿಸಲಾಗುವುದು. ೧೯೯೯-೨೦೦೦ನೇ ಸಾಲಿನಲ್ಲಿ, ಮಂಡ್ಯ ಜಿಲ್ಲೆಯಲ್ಲಿ ೨೬ ಫಲಾನುಭವಿಗಳಿಗೆ, ರೂ.೬.೫೦ ಲಕ್ಷ ವೆಚ್ಚ ಮಾಡಲಾಗಿದೆ.

**ವಿಶೇಷ ಘಟಕ ಯೋಜನೆ:** ಪರಿಶಿಷ್ಟ ಜಾತಿ/ವರ್ಗದವರ ಸರ್ವಾಂಗೀಣ ಅಭಿವೃದ್ಧಿಗಾಗಿ ವಿಶೇಷ ಘಟಕ ಯೋಜನೆ ಕಾರ್ಯಕ್ರಮಗಳನ್ನು ಸರ್ಕಾರವು ವಿಭಿನ್ನ ಅಭಿವೃದ್ಧಿ ಇಲಾಖೆ, ಇನ್ನಿತರ ಮಂಡಳಿ ಮತ್ತು ನಿಗಮಗಳ ಮೂಲಕ ಜಾರಿಗೊಳಿಸುತ್ತಿದೆ. ಈ ಯೋಜನೆಯಲ್ಲಿ ಎಲ್ಲಾ ಅಭಿವೃದ್ಧಿ ಇಲಾಖೆಗಳ ವಿವಿಧ ಕಾರ್ಯಕ್ರಮಗಳನ್ನು ಅನುಷ್ಠಾನಕ್ಕೆ ತರಲು ಯೋಜಿಸಲಾಗಿದೆ. ಈ ಯೋಜನೆಯ ಮೂಲಕ ಪರಿಶಿಷ್ಟ ಜಾತಿ/ವರ್ಗದವರ ಮೂಲಭೂತ ಅಗತ್ಯಗಳಾದ ವಸತಿ, ನೀರು ಸರಬರಾಜು, ವಿದ್ಯುಚ್ಛಕ್ತಿ, ರಸ್ತೆ, ನೀರಾವರಿ, ಆರೋಗ್ಯ ಇತ್ಯಾದಿಗಳನ್ನು ವಿವಿಧ ಇಲಾಖೆಗಳ ಮುಖಾಂತರ ಪೂರೈಸಲಾಗುತ್ತದೆ. ಈ ಕುಟುಂಬಗಳು ತಮ್ಮ ಆರ್ಥಿಕ ಸ್ಥಿತಿಗತಿಗಳನ್ನು ಉತ್ತಮಪಡಿಸಿಕೊಂಡು ಬಡತನ ರೇಖೆಯನ್ನು ದಾಟಲು ಸಾಧ್ಯವಾಗುವಂತೆ ಈ ಯೋಜನೆಯನ್ನು ರೂಪಿಸಲಾಗಿದೆ. ಈ ಜಿಲ್ಲೆಯಲ್ಲಿ ವಿವಿಧ ಇಲಾಖೆಗಳು, ಹಿಂದಿನ ಮೂರು ವರ್ಷಗಳಲ್ಲಿ, ವಿಶೇಷ ಘಟಕ ಯೋಜನೆಯಡಿ ಮಾಡಿರುವ ಖರ್ಚು ಮತ್ತು ವೆಚ್ಚಗಳ ವಿವರ ಕೆಳಕಂಡಂತಿದೆ.

**ಕೋಷ್ಟಕ ೧೬.೧೦ ೧೯೯೭–೯೮ ಮತ್ತು ೧೯೯೯–೨೦೦೦ನೇ ಸಾಲುಗಳಲ್ಲಿ ವಿವಿಧ ಇಲಾಖೆಗಳಲ್ಲಿ ಸಾಧಿಸಿದ ಪ್ರಗತಿಯ ವಿವರ**

(ಲಕ್ಷ ರೂ.ಗಳಲ್ಲಿ)

| | | ೧೯೯೭–೯೮ | ೧೯೯೯–೨೦೦೦ |
|---|---|---|---|
| ೧. | ಜಿಲ್ಲಾ ಪಂಚಾಯತ್ ಇಂಜಿನಿಯರಿಂಗ್ ವಿಭಾಗ | | |
| | ೧. ಗ್ರಾಮಾಂತರ ನೀರು ಪೂರೈಕೆ | ೩೭.೭೦ | ೧೨.೭೫ |
| | ೨. ಕಿರುನೀರು ಪೂರೈಕೆ | ೩೪.೯೯ | – |
| | ೩. ರಸ್ತೆ ಸೇತುವೆ | ೯.೫೦ | ೪೧.೨೩ |
| ೨. | ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ | | |
| | ೧. ಪೌಷ್ಟಿಕ ಆಹಾರ | ೭.೮೮ | ೩.೯೮ |
| ೩. | ಕೃಷಿ ಇಲಾಖೆ | | |
| | ೧. ಪರಿಕರಗಳ ಪೂರೈಕೆ | ೭.೯೦ | ೪.೦೪೧ |
| ೪ | ತೋಟಗಾರಿಕೆ ಇಲಾಖೆ | | |
| | ೧. ತೋಟಗಳ ನಿರ್ಮಾಣ | ೧೪.೯೮ | ೭.೭೧ |
| ೫ | ಭೂಸಾರ ಸಂರಕ್ಷಣೆ | | |
| | ೧. ತಡೆಅಣೆಗಳು | ೩.೫೦ | ೦ |
| ೬ | ಕೈಗಾರಿಕಾ ಇಲಾಖೆ | | |
| | ೧. ತರಬೇತಿ | ೨.೧೦ | – |
| ೭ | ರೇಷ್ಮೆ ಇಲಾಖೆ | | |
| | ೧. ಪ್ಯಾಕೇಜ್ ಪ್ರೋಗ್ರಾಂ | ೧೦.೬೦ | ೭.೫೫ |
| ೮. | ಕೈಮಗ್ಗ ಜವಳಿ ಇಲಾಖೆ | | |
| | ೧. ತರಬೇತಿ | ೪.೩೧ | ೨.೩೪ |
| ೯ | ಪಶುಪಾಲನಾ ಇಲಾಖೆ | | |
| | ೧. ಎಮ್ಮೆ ಘಟಕ | ೯.೪೧ | ೨.೦೧ |
| ೧೦. | ಅರಣ್ಯ ಇಲಾಖೆ | | |
| | ೧. ಸಸಿ ವಿತರಣೆ | ೧.೯೧ | – |
| ೧೨ | ಖಾದಿ ಮತ್ತು ಗ್ರಾಮೋದ್ಯೋಗ | | |
| | ೧. ತರಬೇತಿ | – | ೩.೭೯ |

ಪರಿಶಿಷ್ಟ ಜಾತಿ/ವರ್ಗದ ವಿವಿಧ ಯೋಜನೆಯಲ್ಲಿ ೧೯೯೭–೯೮ರಲ್ಲಿ ರೂ. ೧೩೫.೭೨ ಲಕ್ಷಗಳನ್ನು ೬,೨೯೦ ಜನರಿಗೂ, ೧೯೯೮–೯೯ ರೂ. ೧೫೭.೬೭೩ ಲಕ್ಷಗಳನ್ನು ೬,೮೭೮ ಜನರಿಗೆ, ೧೯೯೯–೨೦೦೦ ರಲ್ಲಿ ರೂ. ೮೫,೩೭೧ ಲಕ್ಷಗಳನ್ನು ೬,೨೬೧ ಫಲಾನುಭವಿಗಳಿಗೂ ಸರ್ಕಾರವು ನೀಡಿದೆ.

## ಪರಿಶಿಷ್ಟ ವರ್ಗಗಳ ಕಲ್ಯಾಣ

**ಗಿರಿಜನ ಉಪಯೋಜನೆ :** ಬೇಡ, ನಾಯಕ, ಬೇಡರ್ ಮತ್ತು ವಾಲ್ಮೀಕಿ ಪಂಗಡಗಳು ಪರಿಶಿಷ್ಟ ವರ್ಗಕ್ಕೆ ಸೇರ್ಪಡೆಯಾದ ಮೇಲೆ ಪರಿಶಿಷ್ಟ ವರ್ಗಗಳ ಜನಸಂಖ್ಯೆಯು ಗಣನೀಯವಾಗಿ ಹೆಚ್ಚಾಗಿದೆ. ೨೦೦೧ರ ಜನಗಣತಿಯ ಕೆಲವೇ ವಿವರಗಳು ದೊರಕಿದ್ದು, ಪರಿಶಿಷ್ಟ ಪಂಗಡಗಳಿಗೆ ಸಂಬಂಧಿಸಿದಂತೆ ಅಂತಿಮ ಅಂಕಿಅಂಶಗಳು ಇನ್ನೂ ಪ್ರಕಟಗೊಂಡಿಲ್ಲ. ೧೯೯೧ರ ಜನಗಣತಿಯ ಪ್ರಕಾರ ರಾಜ್ಯದಲ್ಲಿ ಪರಿಶಿಷ್ಟ ವರ್ಗಗಳ ಜನಸಂಖ್ಯೆ ಒಟ್ಟು ೧೯.೧೫ ಲಕ್ಷ ಇದ್ದು, ಇದು ರಾಜ್ಯದ ಒಟ್ಟು ಜನಸಂಖ್ಯೆಯ ಶೇಕಡ ೪.೨೬ ರಷ್ಟಾಗಿದ್ದಿತು. ಸಾಮಾನ್ಯ ಸಾಕ್ಷರತಾ ಮಟ್ಟ ಶೇಕಡ ೫೬.೦೫ ಆಗಿದ್ದು, ಇದರಲ್ಲಿ ಪರಿಶಿಷ್ಟ ಪಂಗಡದವರ ಸಾಕ್ಷರತಾ ಮಟ್ಟ ಶೇಕಡ ೩೯.೦೧ ಆಗಿದ್ದಿತು. ೧೯೯೧ರ ಜನಗಣತಿಯಂತೆ ೨.೭೫ ಲಕ್ಷ ಜನರು ಗಿರಿಜನ ಉಪಯೋಜನಾ ಪ್ರದೇಶದ ವ್ಯಾಪ್ತಿಯಲ್ಲಿರುತ್ತಾರೆ. ರಾಜ್ಯದಲ್ಲಿ ಸುಮಾರು ೩.೮೩ ಲಕ್ಷ ಪರಿಶಿಷ್ಟ ವರ್ಗದ ಕುಟುಂಬಗಳಿವೆಯೆಂದು ಅಂದಾಜು ಮಾಡಲಾಗಿದೆ. ಇದರಲ್ಲಿ ೧೯೯೮-೯೯ನೇ ಸಾಲಿನವರೆಗೆ ೧,೩೦,೩೪೬ ಕುಟುಂಬಗಳಿಗೆ ಬಡತನ ನಿರ್ಮೂಲನಾ ಕಾರ್ಯಕ್ರಮದಡಿ ವಿವಿಧ ಸೌಲಭ್ಯಗಳನ್ನು ಒದಗಿಸಲಾಗಿದೆ. ಪರಿಶಿಷ್ಟ ಪಂಗಡದವರ ಸರ್ವತೋಮುಖ ಅಭಿವೃದ್ಧಿ ಹಾಗೂ ಗಿರಿಜನ ಅಭಿವೃದ್ಧಿಗಾಗಿ ವಿವಿಧ ಇಲಾಖೆಗಳ ಸಹಕಾರದೊಂದಿಗೆ ಹಲವಾರು ಯೋಜನೆಗಳನ್ನು ಹಮ್ಮಿಕೊಳ್ಳಲಾಗಿದೆ. ೧೯೭೧ರ ಜನಗಣತಿಯನ್ವಯ ಮೂಲವಾಸಿ ಪಂಗಡಗಳು ಹೆಚ್ಚಾಗಿದ್ದ ಮೈಸೂರು, ಕೊಡಗು, ಚಿಕ್ಕಮಗಳೂರು, ದಕ್ಷಿಣ ಕನ್ನಡ ಜಿಲ್ಲೆಗಳಲ್ಲಿ (ಚಾಮರಾಜನಗರ ಮತ್ತು ಉಡುಪಿ ಜಿಲ್ಲೆಗಳು ಅಸ್ತಿತ್ವಕ್ಕೆ ಬರುವ ಮುನ್ನ) ಐದು ಸುಸಂಘಟಿತ ಗಿರಿಜನ ಅಭಿವೃದ್ಧಿ ಯೋಜನಾ ಘಟಕಗಳು ಸ್ಥಾಪನೆಗೊಂಡು ಕಾರ್ಯ ನಿರ್ವಹಿಸುತ್ತಿದ್ದವು. ನಾಯಕ ಹಾಗೂ ಇದರ ತತ್ಸಮಾನ ಪಂಗಡಗಳಾದ ನಾಯ್ಕ, ಬೇಡ, ಬೇಡರ್ ಮತ್ತು ವಾಲ್ಮೀಕಿ ಪಂಗಡಗಳು ಪರಿಶಿಷ್ಟ ವರ್ಗಕ್ಕೆ ಸೇರ್ಪಡೆಯಾದ ಮೇಲೆ, ಈ ಪಂಗಡದವರು ಇತರೆ ಎಲ್ಲಾ ಜಿಲ್ಲೆಗಳಲ್ಲಿಯೂ ವಾಸಿಸುತ್ತಿರುವುದರಿಂದ ಗಿರಿಜನ ಉಪಯೋಜನೆಯನ್ನು ಎಲ್ಲಾ ಜಿಲ್ಲೆಗಳಲ್ಲಿಯೂ ಅನುಷ್ಠಾನಗೊಳಿಸುವಂತೆ ೧೯೯೩ರಲ್ಲಿ ಸರ್ಕಾರವು ನಿರ್ದೇಶನವನ್ನು ನೀಡಿತು. ದಿನಾಂಕ ೩೦.೮.೧೯೯೪ರ ಆದೇಶದಲ್ಲಿ ಪರಿಶಿಷ್ಟ ವರ್ಗದವರ ಕಲ್ಯಾಣಕ್ಕಾಗಿ ಪ್ರತ್ಯೇಕ ನಿರ್ದೇಶನಾಲಯವನ್ನು ಸ್ಥಾಪಿಸಲು ಸರ್ಕಾರವು ಅನುಮತಿ ನೀಡಿತು. ಅದರಂತೆ ಪರಿಶಿಷ್ಟ ವರ್ಗಗಳ ಕಲ್ಯಾಣಕ್ಕಾಗಿ ಪ್ರತ್ಯೇಕ ನಿರ್ದೇಶನಾಲಯವು ಜನವರಿ ೧೯೯೯ರಲ್ಲಿ ದಾವಣಗೆರೆಯಲ್ಲಿ ಪ್ರಾರಂಭಗೊಂಡು, ನವೆಂಬರ್ ೧೯೯೯ರಲ್ಲಿ ಬೆಂಗಳೂರಿಗೆ ಸ್ಥಳಾಂತರಗೊಂಡು ಕಾರ್ಯ ನಿರ್ವಹಿಸುತ್ತಿದೆ. ಈ ಜಿಲ್ಲೆಯಲ್ಲಿ ೧೯೯೭-೯೮ ರಿಂದ ೧೯೯೯-೨೦೦೦ ನೇ ಸಾಲಿನವರೆಗೆ ಈ ಯೋಜನೆಯಡಿ ಪರಿಶಿಷ್ಟ ವರ್ಗದ ೪೫ ಫಲಾನುಭವಿಗಳಿಗಾಗಿ ರೂ.೪,೮೫,೩೭೫ ಗಳನ್ನು ಖರ್ಚು ಮಾಡಲಾಗಿದೆ.

ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆಯಿಂದ ಪರಿಶಿಷ್ಟ ವರ್ಗದವರಿಗಾಗಿ ನರ್ಸರಿ ಮತ್ತು ಮಹಿಳಾ ಕಲ್ಯಾಣ ಕೇಂದ್ರಗಳು, ಆಶ್ರಮ ಶಾಲೆಗಳು, ಮೆಟ್ರಿಕ್ ಪೂರ್ವ ಮತ್ತು ಮೆಟ್ರಿಕ್ ನಂತರದ ವ್ಯಾಸಂಗಾರ್ಥಿಗಳ ಸಲುವಾಗಿ ವಿದ್ಯಾರ್ಥಿ ನಿಲಯಗಳು, ನಡೆಸಲ್ಪಡುತ್ತಿವೆ. ಭಾರತ ಸರ್ಕಾರದ ವಿದ್ಯಾರ್ಥಿ ವೇತನವಲ್ಲದೆ, ರಾಜ್ಯ ಸರ್ಕಾರದ ವಿದ್ಯಾರ್ಥಿ ವೇತನಗಳನ್ನೂ, ಪ್ರತಿಭಾವಂತರಿಗೆ ನಗದು ಬಹುಮಾನಗಳನ್ನೂ, ಮೆಟ್ರಿಕ್ ಪೂರ್ವ ಮತ್ತು ಮೆಟ್ರಿಕ್ ನಂತರದ ವಿದ್ಯಾರ್ಥಿಗಳಿಗೆ ಮಂಜೂರು ಮಾಡುವ ಕಾರ್ಯಕ್ರಮ ಹಾಗೂ ಸಮಾಜ ಕಲ್ಯಾಣ ಇಲಾಖೆಯಲ್ಲಿರುವ ಇನ್ನಿತರ ಕಾರ್ಯಕ್ರಮಗಳನ್ನೂ ಇದೇ ಇಲಾಖೆಯ ಸಮಾನ ನಿಯಮಗಳನ್ನನುಸರಿಸಿ ಕಾರ್ಯಗತಗೊಳಿಸುತ್ತಿದೆ.

ಎಸ್.ಎಸ್.ಎಲ್.ಸಿ. ಮತ್ತು ಕಾಲೇಜು ವಿದ್ಯಾರ್ಥಿಗಳಿಗೆ ಪುರಸ್ಕಾರ, ಅಧ್ಯಯನ ಪ್ರವಾಸ ವೆಚ್ಚ, ಹೆಣ್ಣುಮಕ್ಕಳಿಗೆ ಟಿ.ಸಿ.ಹೆಚ್. ತರಬೇತಿ, ಮೆರಿಟ್ ವಿದ್ಯಾರ್ಥಿ ವೇತನ, ಮುಂತಾದವು ಇಲಾಖೆಯಿಂದ ಪರಿಶಿಷ್ಟ ವರ್ಗದವರಿಗಾಗಿ ನಡೆಸಲಾಗುತ್ತಿರುವ ಇನ್ನಿತರ ಕಾರ್ಯಕ್ರಮಗಳಾಗಿದ್ದು, ೨೦೦೦-೨೦೦೧ನೇ ಸಾಲಿನಲ್ಲಿ ಈ ಕಾರ್ಯಕ್ರಮಗಳಿಗಾಗಿ ಮಾಡಲಾದ ಖರ್ಚು ಮತ್ತು ಫಲಾನುಭವಿಗಳ ವಿವರಗಳನ್ನು ಇಲ್ಲಿ ಕೊಡಲಾಗಿದೆ.

**ಕೋಷ್ಟಕ ೧೬.೧೧ ಪರಿಶಿಷ್ಟ ವರ್ಗದವರಿಗಾಗಿ ೨೦೦೦–೨೦೦೧ನೇ ಸಾಲಿನಲ್ಲಿ ಕೈಗೊಂಡ ವಿವಿಧ ಕಾರ್ಯಕ್ರಮಗಳು**

| ಕಾರ್ಯಕ್ರಮದ ಹೆಸರು | ಕಾರ್ಯಕ್ರಮದ ವಿವರ | ಫಲಾನುಭವಿಗಳ ಸಂಖ್ಯೆ | ಮಾಡಲಾದ ಖರ್ಚು (ಲಕ್ಷ ರೂ.ಗಳಲ್ಲಿ) |
|---|---|---|---|
| ಮೆರಿಟ್ ವಿದ್ಯಾರ್ಥಿ ವೇತನ | ೫ ರಿಂದ ೯ನೇ ತರಗತಿಯ ವಾರ್ಷಿಕ ಪರೀಕ್ಷೆಯಲ್ಲಿ ಪ್ರಥಮ ದರ್ಜೆಯಲ್ಲಿ ತೇರ್ಗಡೆಯಾದ ವಿದ್ಯಾರ್ಥಿಗಳಿಗೆ | ೧೩೦ | ೦.೧೧ |
| ಪ್ರಾಥಮಿಕ ಶಾಲಾ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿ ವೇತನ | ಒಂದರಿಂದ ನಾಲ್ಕನೇ ತರಗತಿಯಲ್ಲಿ ವ್ಯಾಸಂಗ ಮಾಡುವ ವಿದ್ಯಾರ್ಥಿಗಳಿಗೆ | ೧,೦೪೬ | ೦.೮೯ |
| ಮೆಟ್ರಿಕ್ ನಂತರದ ವಿದ್ಯಾರ್ಥಿ ವೇತನ | ಕಾಲೇಜುಗಳಲ್ಲಿ ವ್ಯಾಸಂಗ ಮಾಡುವ ವಿದ್ಯಾರ್ಥಿಗಳಿಗೆ | ೧೨೮ | ೪.೨೯ |
| ಕಾಲೇಜು ವಿದ್ಯಾರ್ಥಿಗಳಿಗೆ | ಪ್ರಥಮ ದರ್ಜೆಯಲ್ಲಿ ಉತ್ತೀರ್ಣರಾದ ಕಾಲೇಜು ವಿದ್ಯಾರ್ಥಿಗಳಿಗೆ | ೪ | ೦.೫ |
| ಅಧ್ಯಯನ ಪ್ರವಾಸ ಭತ್ಯ | ವೃತ್ತಿಪರ ಶಿಕ್ಷಣ ಪಡೆಯುವ ಪರಿಶಿಷ್ಟ ಜಾತಿ ಮತ್ತು ವರ್ಗದ ವಿದ್ಯಾರ್ಥಿಗಳಿಗೆ ತಲಾ ರೂ.೧,೦೦೦ ದಂತೆ ಪ್ರವಾಸಭತ್ಯೆ | ೨೮ | ೦.೨೮ |
| ಒಂದು ಅಶ್ರಮ ಶಾಲೆ | ಒಂದರಿಂದ ನಾಲ್ಕನೇ ತರಗತಿ ಮಕ್ಕಳಿಗೆ | ೧೦೦ | ೩.೬೮ |

## ಪರಿಶಿಷ್ಟ ಜಾತಿ ಮತ್ತು ವರ್ಗಗಳ ನಿಗಮ

ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗಗಳ ಆರ್ಥಿಕ ಮಟ್ಟವನ್ನು ಅಭಿವೃದ್ಧಿಗೊಳಿಸುವ ಉದ್ದೇಶದಿಂದ ೧೯೭೫ರಲ್ಲಿ ಪರಿಶಿಷ್ಟ ಜಾತಿ ಮತ್ತು ವರ್ಗಗಳ ನಿಗಮವನ್ನು ಸ್ಥಾಪಿಸಲಾಯಿತು. ಭೂ ಒಡೆತನ, ಸ್ವಯಂ ಉದ್ಯೋಗ, ಗಂಗಾ ಕಲ್ಯಾಣ (ಕೊಳವೆ ಬಾವಿ) ಮತ್ತು ದೇವದಾಸಿ ಪುನರ್ವಸತಿ ಮುಂತಾದವು ನಿಗಮದ ಪ್ರಮುಖ ಯೋಜನೆಗಳಾಗಿವೆ.

**ಭೂಒಡೆತನ ಯೋಜನೆ :** ಭೂ ಮಾಲೀಕರಾಗಬೇಕೆಂದು ಬಯಸುವ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗಗಳ ಕೃಷಿ ಕಾರ್ಮಿಕರಿಗೆ ಭೂಮಿಯನ್ನು ಒದಗಿಸಿಕೊಡುವುದು ಈ ಯೋಜನೆಯ ಉದ್ದೇಶ. ಈ ಯೋಜನೆಯು ೧೯೭೯–೮೦ನೇ ಸಾಲಿನಿಂದ ಜಿಲ್ಲೆಯಲ್ಲಿ ಆರಂಭಗೊಂಡಿದೆ. ಪರಿಶಿಷ್ಟ ಜಾತಿ/ವರ್ಗದವರಿಗೆ ಈ ಯೋಜನೆಯಡಿಯಲ್ಲಿ ಕನಿಷ್ಟ ಎರಡು ಎಕರೆ ಖುಷ್ಕಿ ಹಾಗೂ ಅರ್ಧದಿಂದ ಒಂದು ಎಕರೆ ತರಿ ಜಮೀನನ್ನು ಖರೀದಿಸಲೆಂದು ರೂ.೫೦,೦೦೦ಗಳ ವೆಚ್ಚವನ್ನು ಮಂಜೂರು ಮಾಡಲಾಗುವುದು. ಅದರಲ್ಲಿ ರೂ. ೨೫,೦೦೦ಗಳನ್ನು ಗರಿಷ್ಠ ಸಹಾಯ ಧನವೆಂದೂ, ಬಾಕಿ ರೂ.೨೫,೦೦೦ ಮೊತ್ತವನ್ನು ಸಾಲವೆಂದೂ ಪರಿಗಣಿಸಲಾಗುವುದು. ಈ ಸಾಲದ ಮೊತ್ತವನ್ನು ಹತ್ತು ವಾರ್ಷಿಕ ಸಮಕಂತುಗಳಲ್ಲಿ ಸಾಲ ಪಡೆದವರು ಹಿಂದಿರುಗಿಸಬೇಕಾಗುತ್ತದೆ. ಕಳೆದ ಐದು ವರ್ಷಗಳಲ್ಲಿ ಜಿಲ್ಲೆಯಲ್ಲಿ ಭೂ ಒಡೆತನ ಯೋಜನೆಯಡಿಯಲ್ಲಿ ಪ್ರಯೋಜನ ಪಡೆದ, ಭೂರಹಿತ ಪರಿಶಿಷ್ಟ ಜಾತಿ ಮತ್ತುವರ್ಗದ ಕೃಷಿ ಕಾರ್ಮಿಕ ಫಲಾನುಭವಿಗಳ ಸಂಖ್ಯೆ ಮತ್ತು ವೆಚ್ಚವನ್ನು ಇಲ್ಲಿ ಕೊಡಲಾಗಿದೆ.

**ಕೋಷ್ಟಕ ೧೬.೧೨ ಪರಿಶಿಷ್ಟ ಜಾತಿ ಮತ್ತುವರ್ಗದ ಭೂರಹಿತ ಕೃಷಿ ಕಾರ್ಮಿಕ ಫಲಾನುಭವಿಗಳ ವಿವರ**

| ವರ್ಷ | ಫಲಾನುಭವಿಗಳ ಸಂಖ್ಯೆ | ಜಮೀನಿನ ವಿಸ್ತೀರ್ಣ (ಎಕರೆಗಳಲ್ಲಿ) | | ಸಹಾಯ ಧನ (ಲಕ್ಷ ರೂ.ಗಳಲ್ಲಿ) | ಸೀಮಾಂತ (ಮಾರ್ಜಿನಲ್) ಹಣ (ಲಕ್ಷ ರೂ.ಗಳಲ್ಲಿ) | ಒಟ್ಟು (ಲಕ್ಷ ರೂ.ಗಳಲ್ಲಿ) |
|---|---|---|---|---|---|---|
| ೧೯೯೭–೯೮ | ೫೬ | ೨೭.೦೭ | ೧೦.೦೬ | ೮.೧೪ | ೧೦.೪೫ | ೧೮.೫೯ |
| ೧೯೯೮–೯೯ | ೫೭ | ೨೬.೨೪ | ೪೭.೦೩ | ೧೩.೦೪ | ೧೩.೦೫ | ೨೬.೦೯ |
| ೧೯೯೯–೨೦೦೦ | ೨೨ | ೧೦.೦೧ | ೨೦.೦೦ | ೪.೯೯ | ೪.೯೯ | ೯.೯೮ |
| ೨೦೦೦–೦೧ | ೧೬ | – | – | ೩.೭೭ | – | ೩.೭೭ |
| ೨೦೦೧–೦೨ | ೧೨ | – | – | ೩.೩೧ | ೩.೩೧ | ೬.೬೨ |

**ಗಂಗಾ ಕಲ್ಯಾಣ (ಕೊಳವೆ ಬಾವಿ) ಯೋಜನೆ :** ರಾಜ್ಯದಲ್ಲಿ ಈ ಯೋಜನೆಯನ್ನು ೧೯೮೫ರಲ್ಲಿ ಆರಂಭಿಸಲಾಗಿದ್ದು, ಆರಂಭದಲ್ಲಿ ನಾಲ್ಕು ಜಿಲ್ಲೆಗಳಿಗೆ ಮಾತ್ರ ಸೀಮಿತಗೊಳಿಸಲಾಗಿತ್ತು. ೧೯೯೧–೯೨ನೇ ಸಾಲಿನಿಂದ ರಾಜ್ಯದ ಎಲ್ಲಾ ಜಿಲ್ಲೆಗಳಲ್ಲಿಯೂ ಈ ಯೋಜನೆಯನ್ನು ಅನುಷ್ಠಾನಗೊಳಿಸಲು ನಿಗಮಕ್ಕೆ ವಹಿಸಲಾಯಿತು. ಮೊದಲು ಶೇ.೭೫ರಷ್ಟು ಭಾಗವನ್ನು ಅಥವಾ ರೂ.೩೦,೦೦೦ವನ್ನು ನಿಗಮದಿಂದ ಸಹಾಯಧನವಾಗಿಯೂ, ಉಳಿದ ಮೊತ್ತವನ್ನು ಬ್ಯಾಂಕ್ ಸಾಲವಾಗಿಯೂ ನೀಡಲಾಗುತ್ತಿತ್ತು. ಫೆಬ್ರವರಿ ೧೯೯೯ರಿಂದ ಈ ಯೋಜನೆಗೆ ಶೇಕಡ ೧೦೦ ರಷ್ಟೂ ಮೊತ್ತವನ್ನು ಸಹಾಯಧನವಾಗಿ ಒದಗಿಸಲು ಅವಕಾಶ ಮಾಡಲಾಗಿದೆ. ಈ ಯೋಜನೆಯನ್ನು ಪರಿಶಿಷ್ಟ ಜಾತಿ ಮತ್ತು ವರ್ಗದ ಸಣ್ಣ ಮತ್ತು ಅತಿ ಸಣ್ಣ ರೈತರ ಅಭಿವೃದ್ಧಿಗಾಗಿ ರೂಪಿಸಲಾಗಿದೆ. ಆ ಪ್ರಕಾರ ಒಂದೇ ಕಡೆ ಎಂಟು ಎಕರೆ ತರಿ ಅಥವಾ ಹದಿನೈದು ಎಕರೆ ಖುಷ್ಕಿ ಜಮೀನು ಇರುವ ಸಣ್ಣ ರೈತರುಗಳ ಜಮೀನಿಗೆ ಸಾಮೂಹಿಕ ನೀರಾವರಿ ಸೌಲಭ್ಯ ಒದಗಿಸಲಾಗುವುದು. ಲಭ್ಯವಿರುವ ನೀರಿನ ಪ್ರಮಾಣವನ್ನು ಅವಲಂಬಿಸಿ ಎರಡರಿಂದ ಮೂರು ಕೊಳವೆ ಬಾವಿಗಳನ್ನು ಕೊರೆಯಿಸಲಾಗುವುದು. ಕೊಳವೆ ಬಾವಿಯನ್ನು ಕೊರೆದಾಗ ಕನಿಷ್ಟ ನೀರಿನ ಇಳುವರಿ ಪ್ರತೀ ಗಂಟೆಗೆ ಒಂದು ಸಾವಿರ ಗ್ಯಾಲನ್‌ಗಳು ಇರಬೇಕೆಂದು ನಿಯಮವಿದ್ದು, ಜಿಲ್ಲೆಯಲ್ಲಿ ೧೯೯೭–೯೮ರಲ್ಲಿ ಕೊಳವೆ ಬಾವಿ ಯೋಜನೆಯಡಿ ಸೌಲಭ್ಯವನ್ನು ಪಡೆದ ಫಲಾನುಭವಿಗಳ ಸಂಖ್ಯೆ ಮತ್ತು ವೆಚ್ಚವನ್ನು ಇಲ್ಲಿ ಕೊಡಲಾಗಿದೆ. ೧೯೯೯ ಮತ್ತು ೨೦೦೦ ನೇ ಸಾಲುಗಳಲ್ಲಿ ಈ ಕಾರ್ಯಕ್ರಮವು ಅನುಷ್ಠಾನಗೊಂಡಿರುವುದಿಲ್ಲ.

**ಕೋಷ್ಟಕ ೧೬.೧೩ ಗಂಗಾಕಲ್ಯಾಣ (ಕೊಳವೆ ಬಾವಿ) ಯೋಜನೆ ವಿವರ**

| ವರ್ಷ | ಫಲಾನುಭವಿಗಳ ಸಂಖ್ಯೆ | ಕೊಳವೆ ಬಾವಿಗಳ ಸಂಖ್ಯೆ | ಸಹಾಯ ಧನ | ಸಾಲ | ಒಟ್ಟು |
|---|---|---|---|---|---|
| ೧೯೯೭–೯೮ | ೯೪೮ | ೩೮೧ | ೪೪೪.೮೯ | ೫.೦೦ | ೪೪೯.೮೯ |
| ೨೦೦೦–೦೧ | ೪೦ | ೦೮ | ೧೦.೧೨ | – | ೧೦.೧೨ |
| ೨೦೦೨–೦೨ | ೧೫ | ೬ | ೭.೫೯ | – | ೭.೫೯ |

**ಸ್ವಯಂ ಉದ್ಯೋಗ ಯೋಜನೆ:** ಈ ಜನಾಂಗದವರು ಸ್ವಯಂ ಉದ್ಯೋಗವನ್ನು ಕೈಗೊಳ್ಳುವಂತೆ ಪ್ರೋತ್ಸಾಹ ನೀಡುವ ಸಲುವಾಗಿ ಗರಿಷ್ಠ ರೂ.೫೦,೦೦೦ದವರೆಗೆ ಸಾಲ ಸೌಲಭ್ಯವನ್ನು ಗರಿಷ್ಠ ೧೦,೦೦೦ ರೂ. ಧನಸಹಾಯವನ್ನೂ, ಬ್ಯಾಂಕುಗಳ ಮೂಲಕ ನೀಡಲಾಗುವುದು. ಚರ್ಮೋದ್ಯಮ, ನೇಯ್ಗೆ, ರೇಷ್ಮೆ, ಆಟೋಮೊಬೈಲ್ ಅಂಗಡಿ, ಬೆರಳಚ್ಚು, ಸೈಕಲ್, ಆಟೋರಿಕ್ಷಾ, ಪೆಟ್ಟಿಗೆ ಅಂಗಡಿ, ಮೀನುಗಾರಿಕೆ, ಹಂದಿ ಸಾಗಾಣಿಕೆ ಮುಂತಾದ ಉದ್ಯೋಗಗಳನ್ನು ಕೈಗೊಳ್ಳಲು ಈ ಸಹಾಯ ನೀಡಲಾಗುತ್ತದೆ. ಜಿಲ್ಲೆಯಲ್ಲಿ ಕಳೆದ ಮೂರು ವರ್ಷಗಳಲ್ಲಿ ಈ ಯೋಜನೆಯಡಿ ಸಾಲ ಹಾಗೂ ಸಹಾಯ ಧನ ಪಡೆದವರ ಸಂಖ್ಯೆ ಮತ್ತು ವೆಚ್ಚವನ್ನು ಈ ಮುಂದೆ ನೀಡಲಾಗಿದೆ.

**ಕೋಷ್ಟಕ ೧೬.೧೪ ಸ್ವಯಂ ಉದ್ಯೋಗ ಯೋಜನೆ ವಿವರ**

(ಲಕ್ಷ ರೂ.ಗಳಲ್ಲಿ)

| ವರ್ಷ | ಫಲಾನುಭವಿಗಳ ಸಂಖ್ಯೆ | ಸಹಾಯಧನ | ಬ್ಯಾಂಕ್ ಸಾಲ | ಒಟ್ಟು |
|---|---|---|---|---|
| ೧೯೯೭–೯೮ | ೬೬೪ | ೩೨.೯೮ | ೪೪.೮೮ | ೭೭.೮೬ |
| ೧೯೯೮–೯೯ | ೫೪೫ | ೨೬.೯೬ | ೪೨.೪೫ | ೬೯.೪೧ |
| ೧೯೯೯–೨೦೦೦ | ೪೧೦ | ೧೭.೬೪ | ೩೮.೦೫ | ೫೫.೬೯ |
| ೨೦೦೦–೦೧ | ೩೮೧ | ೧೫.೨೮ | ೪೦.೯೧ | ೫೬.೧೯ |
| ೨೦೦೧–೦೨ | ೨೯೭ | ೧೫.೫೫ | ೩೪.೭೬ | ೫೦.೩೧ |

**ಐ.ಎಸ್.ಬಿ. (Industries Service & Business)ಯೋಜನೆ:** ಗ್ರಾಮಾಂತರ ಹಾಗೂ ನಗರ ಪ್ರದೇಶಗಳ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದ ವಿದ್ಯಾವಂತ ಮತ್ತು ಅವಿದ್ಯಾವಂತ ನಿರುದ್ಯೋಗಿಗಳು ಕೈಗಾರಿಕೆ, ವ್ಯಾಪಾರ ಮತ್ತು ಸೇವೆಗಳಂತಹ ಕ್ಷೇತ್ರಗಳಲ್ಲಿ ಸ್ವಯಂ ಉದ್ಯೋಗ ಕೈಗೊಳ್ಳಲು ಈ ಉದ್ಯಮಶೀಲ ಅಭಿವೃದ್ಧಿ ಯೋಜನೆಯಡಿ ಸಾಲ ಸೌಲಭ್ಯವನ್ನು ಕಲ್ಪಿಸಲಾಗಿದೆ. ಕೋಳಿ ಸಾಕಾಣಿಕೆ, ವಾಹನ ಖರೀದಿ, ಗುಡಿ ಕೈಗಾರಿಕೆ, ವೈದ್ಯಕೀಯ ಸೇವೆ, ವಕೀಲಿ ವೃತ್ತಿ, ಇಟ್ಟಿಗೆ ತಯಾರಿಕೆ, ರೇಷ್ಮೆ ನೂಲು ಬಿಚ್ಚುವಿಕೆ, ಮುದ್ರಣ ಯಂತ್ರಗಳ ಸ್ಥಾಪನೆ ಮುಂತಾದ ಉದ್ಯೋಗಗಳು ಈ ಯೋಜನೆಗೊಳಪಡುತ್ತವೆ. ಇವುಗಳಿಗೆ ವಾರ್ಷಿಕ ಶೇ ನಾಲ್ಕರ ಬಡ್ಡಿದರದಲ್ಲಿ ನಿಗದಿತ ಕಂತುಗಳಲ್ಲಿ ವಸೂಲಿ ಮಾಡುವ ಷರತ್ತಿನ ಮೇಲೆ ಗರಿಷ್ಠ ಒಂದು ಲಕ್ಷ ರೂ.ಗಳನ್ನು ಸಾಲವಾಗಿ ನೀಡಲಾಗುವುದು. ಯೋಜನಾ ವೆಚ್ಚವು ಒಂದು ಲಕ್ಷದೊಳಗಿದ್ದಲ್ಲಿ ಶೇ.೨೦ರಷ್ಟು ಅಂಚಿನ ಹಣ ಹಾಗೂ ರೂ. ೧೦,೦೦೦ ಸಹಾಯ ಧನವನ್ನು ನೀಡಲಾಗುವುದು. ಈ ಯೋಜನೆಯಡಿ ಮಂಡ್ಯ ಜಿಲ್ಲೆಯಲ್ಲಿ ಹಿಂದಿನ ಮೂರು ವರ್ಷಗಳಲ್ಲಿ ಸೌಲಭ್ಯ ಪಡೆದ ಫಲಾನುಭವಿಗಳು ಮತ್ತು ವೆಚ್ಚಗಳ ವಿವರಗಳು ಕೆಳಕಂಡಂತಿವೆ.

**ಕೋಷ್ಟಕ ೧೬.೧೫ ಐ.ಎಸ್.ಬಿ.ಯೋಜನೆಯಡಿ ಕಳೆದ ಐದು (೧೯೯೭–೯೮ ರಿಂದ ೨೦೦೧–೨೦೦೨ರವರೆಗಿನ) ವರ್ಷಗಳಲ್ಲಿ ಆದ ವೆಚ್ಚದ ವಿವರ**

(ಒದಗಿಸಲಾದ ಹಣ: ಲಕ್ಷ ರೂ.ಗಳಲ್ಲಿ)

| ವರ್ಷ | ಫಲಾನುಭವಿಗಳ ಸಂಖ್ಯೆ | ಸಹಾಯಧನ | ಸೀಮಾಂತ (ಮಾರ್ಜಿನಲ್) ಹಣ | ಬ್ಯಾಂಕ್ ಸಾಲ | ಒಟ್ಟು |
|---|---|---|---|---|---|
| ೧೯೯೭–೯೮ | ೪೭ | ೦.೧೨ | ೧೨.೫೬ | ೫೮.೦೧ | ೭೦.೫೭ |
| ೧೯೯೮–೯೯ | ೨೮ | ೦.೩೦ | ೧೪.೮೨ | ೬೦.೭೬ | ೭೫.೫೮ |
| ೧೯೯೯–೨೦೦೦ | ೧೬ | ೦.೧೦ | ೬.೬೩ | ೩೨.೪೪ | ೩೯.೦೭ |
| ೨೦೦೦–೦೧ | ೧೨ | – | ೫.೦೮ | ೨೦.೨೨ | ೨೫.೩ |
| ೨೦೦೧–೦೨ | ೧೫ | ೦.೬ | ೩.೦೬ | ೧೪.೨೨ | ೧೭.೨೮ |

**ಸಫಾಯಿ ಕರ್ಮಚಾರಿ ಪುನರ್ವಸತಿ ಯೋಜನೆ**

ಅಮಾನವೀಯ ಪದ್ಧತಿಯಾದ ತಲೆಮೇಲೆ ಮಲಹೊರುವ ಕೆಲಸದಲ್ಲಿ ನಿರತರಾಗಿದ್ದ ಸಫಾಯಿ ಕರ್ಮಚಾರಿ ಹಾಗೂ ಅವರ ಅವಲಂಬಿತರಿಗೆ ಪುನರ್ವಸತಿ ಕಲ್ಪಿಸಿ ಅವರಿಗೆ ಪರ್ಯಾಯ ಉದ್ಯೋಗ ಕೈಗೊಳ್ಳಲು ಈ ರಾಷ್ಟ್ರೀಯ ಯೋಜನೆಯಡಿ ಆರ್ಥಿಕ ಸೌಲಭ್ಯ ನೀಡಲಾಗುತ್ತದೆ. ಇದರಲ್ಲಿ ಶೇ.೫೦ ಭಾಗ ಸಹಾಯಧನ (ಗರಿಷ್ಟ ಮಿತಿ ರೂ.೧೦,೦೦೦) ಹಾಗೂ ಶೇ. ೧೫ ಭಾಗ (ಗರಿಷ್ಟ ಮಿತಿ ರೂ.೭,೫೦೦) ಅಂಚಿನ ಹಣವನ್ನು ಶೇ.ನಾಲ್ಕರ ಬಡ್ಡಿದರದಲ್ಲಿ ನೀಡಲಾಗುವುದು. ಉಳಿದ ಮೊತ್ತವನ್ನು ಬ್ಯಾಂಕ್‌ನವರು ಮಂಜೂರು ಮಾಡಬೇಕಾಗಿರುತ್ತದೆ.

ಈ ಯೋಜನೆಯಡಿ ೧೯೯೭-೯೮ ರಿಂದ ೨೦೦೧-೨೦೦೨ರವರೆಗೆ ಪ್ರಯೋಜನ ಪಡೆದ ಫಲಾನುಭವಿಗಳ ಸಂಖ್ಯೆ ಮತ್ತು ವೆಚ್ಚದ ವಿವರಗಳನ್ನು ಮುಂದಿನ ಕೋಷ್ಟಕದಲ್ಲಿ ನೀಡಲಾಗಿದೆ.

**ಕೋಷ್ಟಕ ೧೬.೧೬ ೧೯೯೭-೯೮ ರಿಂದ ೨೦೦೧-೨೦೦೨ರವರೆಗೆ ಪ್ರಯೋಜನ ಪಡೆದ ಫಲಾನುಭವಿಗಳ ಸಂಖ್ಯೆ ಮತ್ತು ವೆಚ್ಚದ ವಿವರ**

(ಲಕ್ಷ ರೂ.ಗಳಲ್ಲಿ)

| ವರ್ಷ | ಫಲಾನುಭವಿಗಳ ಸಂಖ್ಯೆ | ಸಹಾಯಧನ | ಸೀಮಾಂತ (ಮಾರ್ಜಿನಲ್) ಹಣ | ಬ್ಯಾಂಕ್ ಸಾಲ | ಒಟ್ಟು |
|---|---|---|---|---|---|
| ೧೯೯೭-೯೮ | ೨೬೧ | ೨೨.೦೫ | ೧೦.೨೧ | ೧೫.೨೯ | ೪೭.೫೫ |
| ೧೯೯೮-೯೯ | ೨೮೮ | ೨೪.೭೧ | ೭.೧೦ | ೧೭.೬೫ | ೪೯.೫೬ |
| ೧೯೯೯-೨೦೦೦ | ೯೩ | ೮.೯೦ | ೨.೬೭ | ೬.೦೬ | ೧೭.೬೩ |
| ೨೦೦೦-೦೧ | ೯೯ | ೮.೯೫ | ೨.೬೯ | ೬.೪೭ | ೧೮.೧೧ |
| ೨೦೦೧-೦೨ | ೯೯ | ೧೦.೮೫ | ೩.೧೨ | ೮.೫೩ | ೨೨.೫೦ |

**ವ್ಯಾಪಾರ ನೆರವು ಯೋಜನೆ :** ವ್ಯಾಪಾರಕ್ಕಾಗಿ ನೆರವು ನೀಡುವ ಯೋಜನೆಯಡಿ ಶೀಘ್ರಲಿಪಿ, ರೇಡಿಯೋ, ಟಿ.ವಿ., ವಾಹನ ಚಾಲನೆ ಹಾಗೂ ಕಂಪ್ಯೂಟರ್ ಪ್ರೋಗ್ರಾಮರ್ ಮುಂತಾದ ವಿಷಯಗಳಿಗೆ ಆಯ್ದ ಕೆಲವು ಸಂಸ್ಥೆಗಳ ಮೂಲಕ ತರಬೇತಿ ನೀಡುವ ಯೋಜನೆಯೂ, ದೇವದಾಸಿಯರಿಗೆ ಪುನರ್‌ವಸತಿ ಕಲ್ಪಿಸುವ ಯೋಜನೆಯೂ ಇವೆ.

**ಜಿಲ್ಲಾ ಕಾನೂನು ನೆರವು ಸಮಿತಿ:** ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದ ಜನರಿಗೆ ಉಚಿತ ಕಾನೂನು ನೆರವು ನೀಡುವ ಸಲುವಾಗಿ ಕಾನೂನು ನೆರವು ಸಮಿತಿಯು ೧೯೮೩ ರಿಂದ ಕಾರ್ಯ ನಿರ್ವಹಿಸುತ್ತಿದೆ. ಈ ಯೋಜನೆಯಡಿ ವಕೀಲರ ವಕಾಲತ್ತು ಶುಲ್ಕ ಹಾಗೂ ಕೋರ್ಟ್ ಸ್ಟ್ಯಾಂಪ್ ಶುಲ್ಕದ ವೆಚ್ಚವನ್ನು ಭರಿಸಲಾಗುತ್ತದೆ.

## ಹಿಂದುಳಿದ ವರ್ಗಗಳ ಕಲ್ಯಾಣ

ಕರ್ನಾಟಕದ ಸಾಮಾಜಿಕ ವ್ಯವಸ್ಥೆಯಲ್ಲಿ ಹಿಂದುಳಿದವರ ಏಳಿಗೆಗಾಗಿ ಅನೇಕ ಹೋರಾಟಗಳೂ, ಚಳವಳಿಗಳೂ ನಡೆದಿವೆ. ಇದಕ್ಕಾಗಿ ಸರ್ಕಾರದಿಂದ ಆಯೋಗಗಳು ನೇಮಕವಾಗಿವೆ. ಹನ್ನೆರಡನೆಯ ಶತಮಾನದಲ್ಲಿ ಬಸವಣ್ಣನವರು ಉತ್ತರ ಕರ್ನಾಟಕ ಭಾಗದಲ್ಲಿ ಸಮಾಜ ಸುಧಾರಣೆಗಾಗಿ ಚಳವಳಿ ನಡೆಸಿದರು. ಕಾಲಕ್ರಮೇಣ ಇತರ ಹಿಂದುಳಿದ ವರ್ಗದವರೂ ಅಧುನಿಕ ರೀತಿಯ ಶಿಕ್ಷಣ ಪಡೆದು ಸಂಘಟಿತಗೊಂಡು ಸಮಾನತೆಗಾಗಿ ಒತ್ತಾಯಿಸಲು ಪ್ರಾರಂಭಿಸಿದರು. ೧೯೧೮ರಲ್ಲಿ ಮೈಸೂರು ಸಂಸ್ಥಾನದ ಮಹಾರಾಜರು ನೇಮಿಸಿದ ಸರ್ ಲೇಸ್ಲೀ ಮಿಲ್ಲರ್ ಆಯೋಗವು ಸರ್ಕಾರಿ

ಸೇವೆಯಲ್ಲಿ ಶೇ.೨೫ರಷ್ಟು ಹುದ್ದೆಯನ್ನು ಬ್ರಾಹ್ಮಣೇತರರಿಗೆ ಮೀಸಲಿಡಬೇಕೆಂದು ಶಿಫಾರಸ್ಸು ಮಾಡಿತು. ಮುಂದುವರಿದ ಜನಾಂಗದ ಪ್ರಾಬಲ್ಯವನ್ನು ನಿಯಂತ್ರಿಸಲು ಮತ್ತು ಇತರ ಹಿಂದುಳಿದ ಜಾತಿಯವರಿಗೆ ಶಿಕ್ಷಣದ ಪ್ರಾಮುಖ್ಯತೆಯನ್ನು ಮನವರಿಕೆ ಮಾಡಿ ಅದನ್ನು ಪ್ರಚಾರಗೊಳಿಸಲು ರಾಜ್ಯದಲ್ಲಿ ಹಲವು ಸಂಘ ಸಂಸ್ಥೆಗಳು ಸ್ಥಾಪನೆಗೊಂಡವು. ಹಿಂದುಳಿದ ವರ್ಗಗಳನ್ನು ಗುರುತಿಸಿ ಅವರಿಗೆ ಶೈಕ್ಷಣಿಕ ಮತ್ತು ಉದ್ಯೋಗ ಕ್ಷೇತ್ರಗಳಲ್ಲಿ ಮೀಸಲಾತಿಯನ್ನು ನಿಗದಿಪಡಿಸುವ ಸಲುವಾಗಿ ಭಾರತ ಸರ್ಕಾರವು ೧೯೫೩ರಲ್ಲಿ ಕಾಕಾ ಕಾಲೇಕರ್ ಆಯೋಗವನ್ನು ನೇಮಕ ಮಾಡಿತು. ಆದರೆ ಈ ಆಯೋಗ ನೀಡಿದ ವರದಿ ಮತ್ತು ಶಿಫಾರಸ್ಸು ತೃಪ್ತಿಕರವಾಗಿರಲಿಲ್ಲವಾದ್ದರಿಂದ ಹಿಂದುಳಿದ ವರ್ಗಗಳ ಅಭಿವೃದ್ಧಿಗೆ ಆಯಾ ರಾಜ್ಯಗಳು ಸೂಕ್ತ ಆಯೋಗಗಳನ್ನು ರಚಿಸಿಕೊಳ್ಳಲು ಭಾರತ ಸರ್ಕಾರವು ಅದೇಶ ನೀಡಿತು. ಕರ್ನಾಟಕ ಸರ್ಕಾರವು ೧೯೫೮ರಲ್ಲಿ ಒಂದು ಆಜ್ಞೆಯನ್ನು ಹೊರಡಿಸಿ ಶಿಕ್ಷಣ ಸಂಸ್ಥೆಗಳಲ್ಲಿ ಶೇಕಡ ೭೫ರಷ್ಟು ಸ್ಥಾನಗಳನ್ನು, ಪರಿಶಿಷ್ಟ ಜಾತಿ ಪರಿಶಿಷ್ಟ ವರ್ಗ ಮತ್ತುಇತರ ಹಿಂದುಳಿದ ವರ್ಗಗಳಿಗಾಗಿ ಮೀಸಲಿಡುವಂತೆ ಆದೇಶಿಸಿತು. ಅನಂತರ ೧೯೫೯ರಲ್ಲಿ ಹೊರಡಿಸಲಾದ ಅದೇಶದಲ್ಲಿ ಹಿಂದುಳಿದ ವರ್ಗದವರಿಗೆ ವಿದ್ಯಾ ಸಂಸ್ಥೆಗಳಲ್ಲಿ ಶೇ.೬೫ ಮೀಸಲಾತಿ ನೀಡಬೇಕೆಂದು ಘೋಷಿಸಲಾಯಿತು. ಉಚ್ಚ ನ್ಯಾಯಾಲಯವು ಈ ಆದೇಶವನ್ನು ಅನೂರ್ಜಿತಗೊಳಿಸಿದ್ದರಿಂದ ಆರ್.ನಾಗನಗೌಡರ ಅಧ್ಯಕ್ಷತೆಯಲ್ಲಿ ೧೯೬೦ರಲ್ಲಿ ಕರ್ನಾಟಕ ಸರ್ಕಾರವು ಹಿಂದುಳಿದ ವರ್ಗಗಳ ಆಯೋಗವನ್ನು ಸ್ಥಾಪಿಸಿತು. ಈ ಸಮಿತಿಯ ಶಿಫಾರಸ್ಸಿನ ಮೇಲೆ ಸರ್ಕಾರವು ೧೯೬೨ರಲ್ಲಿ ಹೊರಡಿಸಿದ ಮೀಸಲಾತಿ ಆದೇಶವನ್ನು ಶ್ರೇಷ್ಠ ನ್ಯಾಯಾಲಯವು ೧೯೬೩ರಲ್ಲಿ ಅನೂರ್ಜಿತಗೊಳಿಸಿತು. ಆನಂತರ ಎಲ್.ಜಿ.ಹಾವನೂರ್‌ರವರ ಅಧ್ಯಕ್ಷತೆಯಲ್ಲಿ ೧೯೭೨ರಲ್ಲಿ ರಚಿತವಾದ ಕರ್ನಾಟಕ ಹಿಂದುಳಿದ ವರ್ಗಗಳ ಆಯೋಗವು, ಹಿಂದುಳಿದ ವರ್ಗಗಳನ್ನು ಗುರುತಿಸಲು ಅತ್ಯಂತ ಪ್ರಾಮಾಣಿಕ ಪ್ರಯತ್ನ ನಡೆಸಿ, ೧೯೭೫ರಲ್ಲಿ ತನ್ನ ವರದಿಯನ್ನು ಮಂಡಿಸಿತು. ಈ ಆಯೋಗದ ಶಿಫಾರಸ್ಸಿನ ಮೇರೆಗೆ ಸರ್ಕಾರವು ೧೯೭೭ರಲ್ಲಿ ಹಿಂದುಳಿದ ವರ್ಗಗಳ ಕಲ್ಯಾಣಕ್ಕಾಗಿಯೇ ಪ್ರತ್ಯೇಕವಾದ ಒಂದು ಇಲಾಖೆಯನ್ನು ಪ್ರಾರಂಭಿಸಿತು. ಅದುವರೆಗೆ, ಸಮಾಜ ಕಲ್ಯಾಣ ಇಲಾಖೆಯಲ್ಲಿಯೇ ನಿರ್ವಹಿಸಲಾಗುತ್ತಿದ್ದ ಕಾರ್ಯಕ್ರಮಗಳು ಈ ಇಲಾಖೆಗೆ ವರ್ಗಾವಣೆಗೊಂಡವು. ಹಾವನೂರು ಅಯೋಗದ ವರದಿಯನ್ನು ಆಧರಿಸಿ ಜಾರಿಗೊಳಿಸಲಾದ ಮೀಸಲಾತಿಯ ವಿರುದ್ಧ ಅನೇಕ ಪ್ರತಿಭಟನೆಗಳು ಹಾಗೂ ತೀರ್ಪುಗಳು ಹೊರಬಂದ ಕಾರಣ, ನ್ಯಾಯಮೂರ್ತಿ ಬಿ.ವೆಂಕಟಸ್ವಾಮಿ ಅವರ ಅಧ್ಯಕ್ಷತೆಯಲ್ಲಿ ೧೯೮೩ರಲ್ಲಿ, ಎರಡನೇ ಹಿಂದುಳಿದ ವರ್ಗಗಳ ಆಯೋಗವನ್ನು ರಚಿಸಲಾಯಿತು. ಈ ಆಯೋಗ ೧೯೮೬ರಲ್ಲಿ ತನ್ನ ವರದಿಯನ್ನು ಮಂಡಿಸಿತು. ಆದರೆ, ಈ ವರದಿಯ ವಿರುದ್ಧವೂ ಪ್ರತಿಭಟನೆಯಾದುದರಿಂದ ಸರ್ಕಾರವು ಅದನ್ನೂ ಜಾರಿಗೊಳಿಸಲಿಲ್ಲ. ಬದಲಿಗೆ ಹೊಸ ಆಯೋಗದಿಂದ ಮತ್ತೊಂದು ವರದಿ ಸಿದ್ಧಗೊಂಡು ಅನುಮೋದನೆಗೊಳ್ಳುವವರೆಗಿನ ಅವಧಿಗೆ, ಒಂದು ಮಧ್ಯಂತರ ಆಜ್ಞೆಯನ್ನು ಅಕ್ಟೋಬರ್ ೧೯೮೬ರಲ್ಲಿ ಹೊರಡಿಸಿತು. ಅನಂತರ ನ್ಯಾಯಮೂರ್ತಿ ಓ. ಚಿನ್ನಪ್ಪರೆಡ್ಡಿಯವರ ಅಧ್ಯಕ್ಷತೆಯಲ್ಲಿ ಮೂರನೇ ಹಿಂದುಳಿದ ವರ್ಗಗಳ ಏಕವ್ಯಕ್ತಿ ಆಯೋಗವನ್ನು ಮಾರ್ಚ್ ೧೯೮೮ರಲ್ಲಿ ರಚಿಸಿತು. ಈ ಆಯೋಗವು ಏಪ್ರಿಲ್ ೧೯೯೦ರಲ್ಲಿ ತನ್ನ ವರದಿಯನ್ನು ಸಲ್ಲಿಸಿತು. ಈ ವರದಿಯ ಆಧಾರದ ಮೇಲೆ ಪ್ರತಿ ಜಾತಿ, ಮತ ಮತ್ತು ಬುಡಕಟ್ಟುಗಳ ಸಾಮಾಜಿಕ ಮತ್ತು ಶೈಕ್ಷಣಿಕ ಹಿಂದುಳಿಕೆ, ಜೀವನ ಮಟ್ಟ, ಮುಂತಾದವನ್ನು ಗಮನದಲ್ಲಿರಿಸಿಕೊಂಡು ಏಪ್ರಿಲ್ ೧೯೯೪ ಮತ್ತು ಜುಲೈ ೧೯೯೪ರಲ್ಲಿ ಮೀಸಲಾತಿ ನಿಯಮಾವಳಿಗಳ ಕುರಿತಂತೆ ಎರಡು ಆದೇಶಗಳನ್ನು ಸರ್ಕಾರವು ಹೊರಡಿಸಿತು. ಮೀಸಲಾತಿ ಪ್ರಮಾಣವನ್ನು ಮೊದಲು ಶೇ.೫೭ಕ್ಕೂ ಅನಂತರ ಶೇ.೭೩ಕ್ಕೆ ಹೆಚ್ಚಿಸಿತು. ಆದರೆ ಇದರಿಂದ ಅಸಮಾಧಾನಗೊಂಡ ಹಲವರು ಭಾರತ ಸರ್ವೋಚ್ಚ ನ್ಯಾಯಾಲಯದಲ್ಲಿ ದಾವೆ ಹೂಡಿದರು. ರಾಜ್ಯಗಳಲ್ಲಿನ ಮೀಸಲಾತಿಯು ಯಾವುದೇ ಸಂದರ್ಭದಲ್ಲಿಯೂ ಶೇ.೫೦ರ ಪ್ರಮಾಣವನ್ನು ಮೀರಬಾರದೆಂದು ಸರ್ವೋಚ್ಚ ನ್ಯಾಯಾಲಯವು ಸೆಪ್ಟೆಂಬರ್ ೧೯೯೪ರಲ್ಲಿ

ಮಧ್ಯಂತರ ತೀರ್ಪು ನೀಡಿತು. ಆ ತೀರ್ಪಿನನ್ವಯ ಸರ್ಕಾರವು ಆದೇಶ ಸಂಖ್ಯೆ ೧೫೦ ಬಿಸಿಎ ೯೪ ದಿನಾಂಕ ೧೭-೯-೧೯೯೪ರ ಅನುಬಂಧದಲ್ಲಿ ಮುಂದೆ ತಿಳಿಸಿರುವಂತೆ ಪ್ರವರ್ಗವಾರು ಮೀಸಲಾತಿಯನ್ನು ನಿಗದಿಗೊಳಿಸಿದೆ. ಪ್ರವರ್ಗ ೧- ಶೇ ೪; ಪ್ರವರ್ಗ ೨ಎ -ಶೇ.೧೫; ಪ್ರವರ್ಗ ೨ಬಿ -ಶೇ.೪; ಪ್ರವರ್ಗ ೩ಎ-ಶೇ.೪; ಪ್ರವರ್ಗ ೩ ಬಿ-ಶೇ.೫; ಪರಿಶಿಷ್ಟ ಜಾತಿ-ಶೇ.೧೫; ಪರಿಶಿಷ್ಟ ಪಂಗಡ-ಶೇ.೩ ಹೀಗೆ ಎಲ್ಲಾ ಸೇರಿ ಒಟ್ಟು ಶೇ.೫೦.

ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಮತ್ತು ಪ್ರವರ್ಗ-೧ ರ ಅಭ್ಯರ್ಥಿಗಳನ್ನು ಹೊರತುಪಡಿಸಿ ರಾಜ್ಯಾಧೀನ ಸೇವೆಗಳಲ್ಲಿ, ರಾಜ್ಯ ಸರ್ಕಾರದ ಸ್ವಾಯತ್ತ ಸಂಸ್ಥೆಗಳಲ್ಲಿ, ಸಾರ್ವಜನಿಕ ಉದ್ಯಮಗಳಲ್ಲಿ ಸರ್ಕಾರದ ಅನುದಾನಿತ, ಮತ್ತು ಮಾನ್ಯತೆ ಪಡೆದ ಸಂಸ್ಥೆಗಳ ನೇಮಕಾತಿಯಲ್ಲಿ ಮೀಸಲಾತಿಯ ಪ್ರಯೋಜನ ಪಡೆಯಲು ಅಭ್ಯರ್ಥಿಯ ತಂದೆ, ತಾಯಿ ಅಥವಾ ಪೋಷಕರು ಈ ಕೆಳಕಂಡ ಉದ್ಯೋಗ ಅಥವಾ ಸ್ಥಿರಾಸ್ತಿಯನ್ನು ಹೊಂದಿದ್ದಲ್ಲಿ ಈ ಸೌಲಭ್ಯಕ್ಕೆ ಅರ್ಹರಾಗಿರುವುದಿಲ್ಲ. ೧) ಅಭ್ಯರ್ಥಿಯ ತಂದೆ ತಾಯಿ ಅಥವಾ ಪೋಷಕರು ಸರ್ಕಾರದ 'ಎ' ಮತ್ತು ' ಬಿ' ಶ್ರೇಣಿಯ ಅಧಿಕಾರಿಗಳಾಗಿ ಸೇವೆ ಸಲ್ಲಿಸುತ್ತಿದ್ದಲ್ಲಿ, ಅಥವಾ ಸಾರ್ವಜನಿಕ ಉದ್ಯಮಗಳಲ್ಲಿ ತತ್ಸಮನಾದ ಹುದ್ದೆಗಳನ್ನು ಹೊಂದಿದ್ದಲ್ಲಿ, ಅಥವಾ ಖಾಸಗಿ ಕೈಗಾರಿಕಾ ಸಂಸ್ಥೆಗಳ ಉದ್ಯೋಗಿಗಳಾಗಿದ್ದು, 'ಬಿ' ಶ್ರೇಣಿಯ ಅಧಿಕಾರಿಯ ವೇತನ ಶ್ರೇಣಿಗಿಂತ ಕಡಿಮೆ ವೇತನ ಶ್ರೇಣಿಯನ್ನು ಪಡೆಯುತ್ತಿದ್ದಲ್ಲಿ; ೨) ಆದಾಯ ತೆರಿಗೆ ಪಾವತಿದಾರರಾಗಿದ್ದಲ್ಲಿ; ೩) ಮಾರಾಟ ತೆರಿಗೆ ಪಾವತಿದಾರರಾಗಿದ್ದಲ್ಲಿ; ೪) ಎಂಟು ಹೆಕ್ಟೇರ್ ಮಳೆ ಆಧಾರಿತ ಅಥವಾ ಒಣ ಭೂಮಿ ಅಥವಾ ಸಮಾನಾಂತರ ತರಿ/ಬಾಗಾಯ್ತು ಜಮೀನು (ಭೂಸುಧಾರಣಾ ಕಾಯ್ದೆ ಮೀರೆಗೆ) ಹೊಂದಿದ್ದಲ್ಲಿ; ಮೇಲ್ಕಂಡ ವರ್ಗಗಳಡಿ ಉದ್ಯೋಗಸ್ಥರು, ಜಮೀನುದಾರರು, ಮೀಸಲಾತಿಯ ಪ್ರಯೋಜನ ಪಡೆಯುವಂತಿಲ್ಲ.

**ಕಲ್ಯಾಣ ಕಾರ್ಯಕ್ರಮಗಳು:** ಹಿಂದುಳಿದ ವರ್ಗಗಳ ಇಲಾಖೆಯು ಜಿಲ್ಲೆಯ ಹಿಂದುಳಿದ ವರ್ಗಗಳ ಮತ್ತು ಅಲ್ಪಸಂಖ್ಯಾತರ ಶೈಕ್ಷಣಿಕ ಆರ್ಥಿಕ ಹಾಗೂ ಸಾಮಾಜಿಕ ಅಭಿವೃದ್ಧಿಗಾಗಿ ಹಲವಾರು ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದ್ದು, ಇವನ್ನು ಜಿಲ್ಲಾ ಹಿಂದುಳಿದ ವರ್ಗಗಳ ಅಧಿಕಾರಿಯ ಮೂಲಕ ಅನುಷ್ಠಾನಗೊಳಿಸುತ್ತದೆ.

**ಮೆಟ್ರಿಕ್ ಪೂರ್ವ ವಿದ್ಯಾರ್ಥಿ ನಿಲಯಗಳು:** ಮಾಧ್ಯಮಿಕ ಮತ್ತು ಪ್ರೌಢ ಶಾಲಾ ಶಿಕ್ಷಣ ಪಡೆಯಲು ದೂರದ ಊರುಗಳಿಂದ ಶಿಕ್ಷಣ ಸಂಸ್ಥೆಗಳಿರುವ ಸ್ಥಳಕ್ಕೆ ಬಂದು ಹೋಗುವಂತಹ, ಆರ್ಥಿಕವಾಗಿ ಹಿಂದುಳಿದ ವರ್ಗಗಳಿಗೆ ಅನುಕೂಲ ಕಲ್ಪಿಸಿ ಕೊಡುವ ಉದ್ದೇಶದಿಂದ ಈ ನಿಲಯಗಳನ್ನು ಇಲಾಖೆಯಿಂದ ನಡೆಸಲಾಗುತ್ತಿದೆ. ಐದರಿಂದ ಹತ್ತನೇ ತರಗತಿಗಳಲ್ಲಿ ವ್ಯಾಸಂಗ ಮಾಡುತ್ತಿರುವ ಶಾಲಾ ವಿದ್ಯಾರ್ಥಿಗಳಿಗೆ ಮೆಟ್ರಿಕ್-ಪೂರ್ವ ನಿಲಯಗಳಲ್ಲಿ ಪ್ರವೇಶ ನೀಡಲಾಗುವುದು. ತಿಂಗಳಿಗೆ ರೂಪಾಯಿ ೪೦೦ರ ವೆಚ್ಚದಲ್ಲಿ ಹತ್ತು ತಿಂಗಳ ಅವಧಿಗೆ ಆಹಾರ ಪೂರೈಕೆ ; ರೂಪಾಯಿ ೫೦ರ ವೆಚ್ಚದಲ್ಲಿ ಸೋಪು ಮತ್ತು ಎಣ್ಣೆ ಇತ್ಯಾದಿಗಳ ಪೂರೈಕೆ; ಪ್ರತೀ ನಿಲಯಕ್ಕೆ ಮಾಹೆಯಾನ ರೂಪಾಯಿ ೧೦೦ರ ವೆಚ್ಚದಲ್ಲಿ ವೈದ್ಯಕೀಯ ಸೌಲಭ್ಯ; ರೂಪಾಯಿ ೭೦೦ರ ವೆಚ್ಚದಲ್ಲಿ ಪಠ್ಯ ಪುಸ್ತಕ ಮತ್ತು ಲೇಖನ ಸಾಮಗ್ರಿಗಳ ಪೂರೈಕೆ; ರೂಪಾಯಿ ೩೦೦ರ ವೆಚ್ಚದಲ್ಲಿ ಎರಡು ಜೊತೆ ಸಮವಸ್ತ್ರಗಳ ಪೂರೈಕೆ; ರೂಪಾಯಿ ೪೦೦ರ ವೆಚ್ಚದಲ್ಲಿ ಹಾಸಿಗೆ, ಹೊದಿಕೆ ಸಾಮಗ್ರಿಗಳ ಪೂರೈಕೆ; ಪಬ್ಲಿಕ್ ಪರೀಕ್ಷೆಗಳಲ್ಲಿ ಪ್ರಥಮ ದರ್ಜೆಯಲ್ಲಿ ಉತ್ತೀರ್ಣರಾದ ವಿದ್ಯಾರ್ಥಿಗಳಿಗೆ ಪ್ರತಿ ವಿದ್ಯಾರ್ಥಿಗೆ ರೂ.೭೫ ರಿಂದ ೫೦೦ರವರೆಗೆ ಪ್ರೋತ್ಸಾಹ ಧನ-ಇವೇ ಮುಂತಾದ ಇನ್ನೂ ಕೆಲವು ಸೌಲಭ್ಯಗಳನ್ನು ಈ ನಿಲಯಗಳಲ್ಲಿ ನಿಲಯಾರ್ಥಿಗಳಿಗೆ ಒದಗಿಸಿ ಕೊಡಲಾಗುತ್ತದೆ. ಜಿಲ್ಲೆಯಲ್ಲಿ ೪೧ ಮೆಟ್ರಿಕ್ ಪೂರ್ವ ಬಾಲಕರ ವಿದ್ಯಾರ್ಥಿ ನಿಲಯಗಳೂ, ಎಂಟು ಬಾಲಕಿಯರ ಮೆಟ್ರಿಕ್ ಪೂರ್ವ ನಿಲಯಗಳೂ ಇದ್ದು, ೧೯೯೭-೯೮ ರಿಂದ ೨೦೦೧-೦೨ರವರಗೆ ವಿದ್ಯಾರ್ಥಿ ನಿಲಯಗಳ ಪ್ರಯೋಜನ ಪಡೆದ ಬಾಲಕ ಬಾಲಕಿಯರ ಸಂಖ್ಯೆ ಮತ್ತು ಖರ್ಚಿನ ವಿವರಗಳನ್ನು ಕೆಳಗೆ ಕೊಡಲಾಗಿದೆ.

**ಕೋಷ್ಟಕ ೧೬.೧೭ ೧೯೯೭-೯೮ ರಿಂದ ೨೦೦೧-೦೨ರವರಗೆ ವಿದ್ಯಾರ್ಥಿ ನಿಲಯಗಳ ಪ್ರಯೋಜನ ಪಡೆದ ಬಾಲಕ ಬಾಲಕಿಯರ ಸಂಖ್ಯೆ ಮತ್ತು ಖರ್ಚಿನ ವಿವರ**

| ವರ್ಷ | ಬಾಲಕರ ವಿದ್ಯಾರ್ಥಿ ನಿಲಯಗಳ ಸಂಖ್ಯೆ | ಬಾಲಕಿಯರ ವಿದ್ಯಾರ್ಥಿ ನಿಲಯಗಳ ಸಂಖ್ಯೆ | ಬಾಲಕರ ಸಂಖ್ಯೆ | ಬಾಲಕಿಯರ ಸಂಖ್ಯೆ | ಒಟ್ಟು ನಿಲಯಗಳ ಸಂಖ್ಯೆ | ಒಟ್ಟು ವಿದ್ಯಾರ್ಥಿಗಳ ಸಂಖ್ಯೆ | ಆದ ಖರ್ಚು (ಲಕ್ಷರೂ.ಗಳಲ್ಲಿ) |
|---|---|---|---|---|---|---|---|
| ೧೯೯೭–೯೮ | ೩೬ | ೮ | ೧೯೩೮ | ೩೨೫ | ೪೪ | ೨೨೬೩ | ೧೦೪.೬೦ |
| ೧೯೯೮–೯೯ | ೩೬ | ೮ | ೧೯೩೮ | ೩೨೫ | ೪೪ | ೨೨೬೩ | ೧೩೯.೭೫ |
| ೧೯೯೯–೦೦ | ೩೬ | ೮ | ೧೯೩೮ | ೩೨೫ | ೪೪ | ೨೨೬೩ | ೧೭೮.೪೫ |
| ೨೦೦೦–೦೧ | ೪೧ | ೧೦ | ೨೧೩೫ | ೪೯೫ | ೫೧ | ೨೬೩೦ | ೧೯೫.೨೯ |
| ೨೦೦೧–೦೨ | ೪೧ | ೧೦ | ೨೧೩೫ | ೪೯೫ | ೫೧ | ೨೬೩೦ | ೨೩೩.೯೮ |

**ನವೋದಯ ಮಾದರಿ ವಸತಿ ಶಾಲೆ, ಶ್ರೀರಂಗಪಟ್ಟಣ:** ಐದರಿಂದ ಹನ್ನೆರಡು ವರ್ಷ ವಯೋಮಿತಿಯ ಐದರಿಂದ ಹತ್ತನೇ ತರಗತಿಗಳಲ್ಲಿ ವ್ಯಾಸಂಗ ಮಾಡುತ್ತಿರುವ ಹಿಂದುಳಿದ ಮತ್ತು ಅಲ್ಪ ಸಂಖ್ಯಾತರ ಜನಾಂಗಕ್ಕೆ ಸೇರಿದ ಪ್ರತಿಭಾವಂತ ಮಕ್ಕಳು ತಮ್ಮ ಶಿಕ್ಷಣ ಮುಂದುವರಿಸಲು ಶ್ರೀರಂಗಪಟ್ಟಣದಲ್ಲಿ ನವೋದಯ ಶಾಲೆ ಪ್ರಾರಂಭವಾಯಿತು. ವಿದ್ಯಾರ್ಥಿ ನಿಲಯ ಸೌಲಭ್ಯವನ್ನು ಕಲ್ಪಿಸಿರುವ ಇಲ್ಲಿ ಪ್ರತೀ ವಿದ್ಯಾರ್ಥಿಗೆ ತಿಂಗಳಿಗೆ ರೂ.೩೫೦/–ರ ವೆಚ್ಚದಲ್ಲಿ ಹತ್ತು ತಿಂಗಳ ಅವಧಿಗೆ ಆಹಾರ ಪೂರೈಕೆ; ಪ್ರತಿ ವಿದ್ಯಾರ್ಥಿಗೆ ತಿಂಗಳಿಗೆ ರೂ. ೧೨೫/–ರ ದರದಲ್ಲಿ ಹತ್ತು ತಿಂಗಳ ಅವಧಿಗೆ ಸೋಪು, ಎಣ್ಣೆ, ಪುಸ್ತಕ, ಮತ್ತು ಲೇಖನ ಸಾಮಗ್ರಿಗಳ ಪೂರೈಕೆ; ವರ್ಷಕ್ಕೆ ಪ್ರತೀ ವಿದ್ಯಾರ್ಥಿಗೆ ರೂಪಾಯಿ. ೩೫೦/– ದರದಲ್ಲಿ ಸಮವಸ್ತ್ರಗಳ ಪೂರೈಕೆ ಮಾಡಲಾಗುತ್ತದೆ. ೧೯೯೯–೨೦೦೦ನೇ ಸಾಲಿನಲ್ಲಿ ಈ ವಸತಿ ಶಾಲೆಗಾಗಿ ೬೮೫ ಲಕ್ಷ ಒದಗಿಸಿದ್ದು ಅದರಲ್ಲಿ ರೂ.೧೨.೧೦ ಲಕ್ಷ ಖರ್ಚು ಮಾಡಲಾಗಿದೆ. ಒಟ್ಟು ೨೦೮ ವಿದ್ಯಾರ್ಥಿಗಳು ಇದರ ಪ್ರಯೋಜನ ಪಡೆದಿದ್ದಾರೆ. (ಆಧಾರಃ ಹಿಂದುಳಿದ ವರ್ಗಗಳ ನಿರ್ದೇಶನಾಲಯ)

**ಮೆಟ್ರಿಕ್ ನಂತರದ ವಿದ್ಯಾರ್ಥಿ ನಿಲಯಗಳು :** ಪಿ.ಯು.ಸಿ., ಟಿ.ಸಿ.ಹೆಚ್., ಐ.ಟಿ.ಐ., ಡಿಪ್ಲೋಮ, ಪದವಿ, ಸ್ನಾತಕೋತ್ತರ, ವೈದ್ಯಕೀಯ, ಎಂಜಿನಿಯರಿಂಗ್ ಹಾಗೂ ಇತರೆ ತಾಂತ್ರಿಕ ಶಿಕ್ಷಣಗಳಲ್ಲಿ ವ್ಯಾಸಂಗ ಮುಂದುವರಿಸಲು ಅನುಕೂಲವಿಲ್ಲದ ಸ್ಥಳಗಳಿಂದ ಬರುವ ಹಿಂದುಳಿದ ವರ್ಗದ ವಿದ್ಯಾರ್ಥಿಗಳಿಗೆ ನೆರವು ನೀಡುವ ಉದ್ದೇಶದಿಂದ, ಅಂತಹ ಕಾಲೇಜುಗಳು ನಡೆಯುತ್ತಿರುವ ಸ್ಥಳಗಳಲ್ಲಿ ಮೆಟ್ರಿಕ್ ನಂತರದ ಬಾಲಕ/ಬಾಲಕಿಯರ ವಿದ್ಯಾರ್ಥಿ ನಿಲಯಗಳನ್ನು ಈ ಇಲಾಖೆಯ ವತಿಯಿಂದ ನಡೆಸಲಾಗುತ್ತಿದೆ. ಪ್ರತಿ ವಿದ್ಯಾರ್ಥಿಗೆ ತಿಂಗಳಿಗೆ ರೂ.೪೦೦ರ ವೆಚ್ಚದಲ್ಲಿ ಆಹಾರ ಪೂರೈಕೆ ತಿಂಗಳಿಗೆ ರೂ.೧,೦೦೦ರ ವೆಚ್ಚದಲ್ಲಿ ೧೦ ತಿಂಗಳ ಅವಧಿಗೆ ದಿನಪತ್ರಿಕೆಗಳ ಪೂರೈಕೆ; ಎರಡು ವರ್ಷಕ್ಕೊಮ್ಮೆ ಪ್ರತೀ ವಿದ್ಯಾರ್ಥಿ ನಿಲಯಕ್ಕೆ ರೂ.೬೦೦ ಗಳ ವೆಚ್ಚದಲ್ಲಿ ಕ್ರೀಡಾ ಸಾಮಗ್ರಿಗಳ ಪೂರೈಕೆ; ಪಬ್ಲಿಕ್ ಪರೀಕ್ಷೆಗಳಲ್ಲಿ ಪ್ರಥಮ ದರ್ಜೆಯಲ್ಲಿ ಉತ್ತೀರ್ಣರಾದ ವಿದ್ಯಾರ್ಥಿಗಳಿಗೆ ಆಯ್ದ ಕೋರ್ಸ್‌ಗಳಿಗೆ ನಿಗದಿಪಡಿಸಿದ ಮೊತ್ತಕ್ಕನುಗುಣವಾಗಿ ರೂ.೨೦೦/– ರಿಂದ ರೂ.೫೦೦/– ರವರಗೆ ಪ್ರೋತ್ಸಾಹ ಧನ ನೀಡಲಾಗುತ್ತದೆ. ಈ ಜಿಲ್ಲೆಯಲ್ಲಿ ಒಂಬತ್ತು ಮೆಟ್ರಿಕ್ ನಂತರದ ಬಾಲಕರ ವಿದ್ಯಾರ್ಥಿ ನಿಲಯಗಳೂ, ಮೂರು ಬಾಲಕಿಯರ ಮೆಟ್ರಿಕ್ ನಂತರದ ನಿಲಯಗಳೂ ಇದ್ದು, ಕಳೆದ ಐದು ವರ್ಷಗಳಲ್ಲಿ ಈ ನಿಲಯಗಳ ಪ್ರಯೋಜನ ಪಡೆದ ಬಾಲಕ ಬಾಲಕಿಯರ ಸಂಖ್ಯೆ ಮತ್ತು ಖರ್ಚಿನ ವಿವರಗಳನ್ನು ಕೆಳಗೆ ಕೊಡಲಾಗಿದೆ.

**ಕೋಷ್ಟಕ ೧೬.೧೮ ಕಳೆದ ಐದು ವರ್ಷಗಳಲ್ಲಿ ನಿಲಯಗಳ ಪ್ರಯೋಜನ ಪಡೆದ ಬಾಲಕ/ಬಾಲಕಿಯರ ವಿವರ**

| ಕ್ರ.ಸಂ. | ವರ್ಷ | ಬಾಲಕರ ವಿದ್ಯಾರ್ಥಿ ನಿಲಯಗಳ ಸಂಖ್ಯೆ | ಬಾಲಕಿಯರ ವಿದ್ಯಾರ್ಥಿ ನಿಲಯಗಳ ಸಂಖ್ಯೆ | ಬಾಲಕರ ಸಂಖ್ಯೆ | ಬಾಲಕಿಯರ ಸಂಖ್ಯೆ | ಒಟ್ಟು ನಿಲಯಗಳು ಸಂಖ್ಯೆ | ಒಟ್ಟು ವಿದ್ಯಾರ್ಥಿಗಳ ಸಂಖ್ಯೆ | ಆದ ಖರ್ಚು (ಲಕ್ಷರೂ.ಗಳಲ್ಲಿ) |
|---|---|---|---|---|---|---|---|---|
| ೧ | ೧೯೯೭–೯೮ | ೯ | ೫೭೫ | ೩ | ೧೫೦ | ೧೨ | ೭೨೫ | ೩೧.೩೬ |
| ೨ | ೧೯೯೮–೯೯ | ೯ | ೫೭೫ | ೩ | ೧೫೦ | ೧೨ | ೭೨೫ | ೪೩.೦೩ |
| ೩ | ೧೯೯೯–೨೦೦೦ | ೯ | ೫೭೫ | ೩ | ೧೫೦ | ೧೨ | ೭೨೫ | ೬೨.೭೪ |
| ೪ | ೨೦೦೦–೦೧ | ೧೦ | ೬೭೫ | ೪ | ೨೦೦ | ೧೫ | ೮೭೫ | ೬೧.೦೦ |
| ೫ | ೨೦೦೧–೦೨ | ೧೦ | ೬೭೫ | ೪ | ೨೦೦ | ೧೫ | ೮೭೫ | ೮೧.೭೭ |

**ಅನುದಾನಿತ ವಿದ್ಯಾರ್ಥಿ ನಿಲಯಗಳು :** ಖಾಸಗಿ ಸಂಸ್ಥೆಯವರು ಸರ್ಕಾರದ ಮಾನ್ಯತೆ ಪಡೆದು, ಹಿಂದುಳಿದ ವರ್ಗಕ್ಕೆ ಸೇರಿದ ವಿದ್ಯಾರ್ಥಿಗಳಿಗಾಗಿ ನಡೆಸುವ ಮೆಟ್ರಿಕ್ ಪೂರ್ವ ವಿದ್ಯಾರ್ಥಿ ನಿಲಯಗಳಿಗೆ ಪ್ರೋತ್ಸಾಹ ಹಾಗೂ ನೆರವು ನೀಡುವ ಉದ್ದೇಶದಿಂದ ಆಹಾರದ ವೆಚ್ಚಕ್ಕೆಂದು ಪ್ರತೀ ವಿದ್ಯಾರ್ಥಿಗೆ ತಿಂಗಳಿಗೆ ರೂ.೩೫೦/-ರ ದರದಲ್ಲಿ ಹತ್ತು ತಿಂಗಳ ಅವಧಿಗೆ, ಈ ಇಲಾಖೆಯಿಂದ ನಿಲಯದ ಸಂಖ್ಯಾಬಲಕ್ಕನುಗುಣವಾಗಿ ಸಹಾಯಧನವನ್ನು ಮಂಜೂರು ಮಾಡಲಾಗುವುದು. ಜಿಲ್ಲೆಯಲ್ಲಿ ಇಂತಹ ಏಳು ಖಾಸಗಿ ವಿದ್ಯಾರ್ಥಿ ನಿಲಯಗಳು ನಡೆಸಲ್ಪಡುತ್ತಿವೆ.

**ಕೋಷ್ಟಕ ೧೬.೧೯ ಖಾಸಗಿ ಅನುದಾನಿತ ವಿದ್ಯಾರ್ಥಿ ನಿಲಯಗಳು**

| ಕ್ರ.ಸಂ | ವರ್ಷ | ಬಾಲಕರ ವಿದ್ಯಾರ್ಥಿ ನಿಲಯಗಳು | | ಬಾಲಕಿಯರ ವಿದ್ಯಾರ್ಥಿ ನಿಲಯಗಳು | | ಒಟ್ಟು ವಿದ್ಯಾರ್ಥಿ ನಿಲಯಗಳು | | ಆದ ವೆಚ್ಚ (ಲಕ್ಷ ರೂ. ಗಳಲ್ಲಿ) |
|---|---|---|---|---|---|---|---|---|
| | | ಸಂಖ್ಯೆ | ಸಂಖ್ಯಾಬಲ | ಸಂಖ್ಯೆ | ಸಂಖ್ಯಾಬಲ | ಸಂಖ್ಯೆ | ಸಂಖ್ಯಾಬಲ | |
| ೧ | ೧೯೯೭–೯೮ | ೪ | * | * | * | * | * | ೧೧.೮೬ |
| ೨ | ೧೯೯೮–೯೯ | ೪ | * | * | * | * | * | ೧೨.೬೫ |
| ೩ | ೧೯೯೯–೨೦೦೦ | ೪ | * | * | * | * | * | ೧೨.೮೮ |

* : ಉಳಿದ ಅಂಕಿ–ಅಂಶಗಳು ಲಭ್ಯವಿರುವುದಿಲ್ಲ.

**ಮೆಟ್ರಿಕ್ ಪೂರ್ವ ವಿದ್ಯಾರ್ಥಿ ವೇತನ :** ಪಿ.ಯು.ಸಿ., ಟಿ.ಸಿ.ಹೆಚ್., ಸ್ನಾತಕೊತ್ತರ ವೈದ್ಯಕೀಯ, ಎಂಜಿನಿಯರಿಂಗ್ ಹಾಗೂ ಇತರೆ ತಾಂತ್ರಿಕ ಶಿಕ್ಷಣ ಕೋರ್ಸ್‌ಗಳಲ್ಲಿ ವ್ಯಾಸಂಗ ಮಾಡುತ್ತಿರುವ ಹಿಂದುಳಿದ ವರ್ಗದ ವಿದ್ಯಾರ್ಥಿಗಳಿಗೆ ಉತ್ತೇಜನ ನೀಡುವ ಉದ್ದೇಶದಿಂದ, ಸರ್ಕಾರವು ವಿವಿಧ ಕೋರ್ಸುಗಳಿಗೆ ನಿಗದಿ ಪಡಿಸಿದ ದರದನ್ವಯ ವರ್ಷಕ್ಕೆ ರೂಪಾಯಿ ೩೦೦/- ರೂಪಾಯಿಗಳಿಂದ ೫೦೦/-ರೂ.ವರೆಗೆ ವಿದ್ಯಾರ್ಥಿ ವೇತನವನ್ನು ಇಲಾಖೆಯ ಮೂಲಕ ನೀಡುತ್ತದೆ. ಪ್ರವರ್ಗ ಒಂದಕ್ಕೆ ಸೇರಿದ ವಿದ್ಯಾರ್ಥಿಗಳನ್ನು ಹೊರತುಪಡಿಸಿ, ಉಳಿದವರ ವಾರ್ಷಿಕ ವರಮಾನ ರೂಪಾಯಿ ೧೫,೦೦೦ಗಳಿಗೆ ಮೀರಿರದಿದ್ದಲ್ಲಿ, ಸರ್ಕಾರದ ಇತರೆ ಯಾವುದೇ ಇಲಾಖೆಯಿಂದ ನಡೆಸಲ್ಪಡುತ್ತಿರುವ ಇಲ್ಲವೇ ಅನುದಾನಿತ ಖಾಸಗಿ ನಿಲಯಗಳಲ್ಲಿ ಪ್ರವೇಶ ಪಡೆದಿರದಿದ್ದರೆ ಹಾಗೂ ಬೇರೆ ಯಾವುದೇ ವಿದ್ಯಾರ್ಥಿ ವೇತನವನ್ನು ಪಡೆಯದಿದ್ದಲ್ಲಿ ಮತ್ತು ಹಿಂದಿನ ವಾರ್ಷಿಕ ಪರೀಕ್ಷೆಯಲ್ಲಿ ಉತ್ತೀರ್ಣನಾಗಿದ್ದಲ್ಲಿ, ಅಂತಹ

ವಿದ್ಯಾರ್ಥಿಯು ಈ ವಿದ್ಯಾರ್ಥಿ ವೇತನವನ್ನು ಪಡೆಯಲು ಅರ್ಹನೆಂದು ಇಲಾಖೆಯು ಪರಿಗಣಿಸುತ್ತದೆ. ಕಳೆದ ನಾಲ್ಕು ವರ್ಷಗಳಲ್ಲಿ ಈ ವಿದ್ಯಾರ್ಥಿ ವೇತನದ ಫಲಾನುಭವಿಗಳ ಸಂಖ್ಯೆ ಮತ್ತು ಖರ್ಚಿನ ವಿವರಗಳನ್ನು ಈ ಮುಂದೆ ಕೊಡಲಾಗಿದೆ.

**ಕೋಷ್ಟಕ ೧೬.೨೦ ೧೯೯೮–೯೯ ರಿಂದ ೨೦೦೧–೦೨ನೇ ಸಾಲುಗಳ ಖರ್ಚಿನ ವಿವರ**

| ಪ್ರವರ್ಗ | ವರ್ಷ | ಖರ್ಚಿನ ಮೊತ್ತ (ಲಕ್ಷ ರೂ.ಗಳಲ್ಲಿ) | ಫಲಾನುಭವಿಗಳ ಸಂಖ್ಯೆ |
|---|---|---|---|
| ೨ಎ, ೨ಬಿ, ೩ಎ, ೩ಬಿ | ೧೯೯೮–೯೯ | ೧೬.೮೨ | ೭,೪೬೩ |
| ೨ಎ, ೨ಬಿ, ೩ಎ, ೩ಬಿ | ೧೯೯೯–೨೦೦೦ | ೧೬.೮೩ | ೭,೫೬೮ |
| ೨ಎ, ೨ಬಿ, ೩ಎ, ೩ಬಿ | ೨೦೦೦–೦೧ | ೧೨.೪೩ | ೧೫,೨೯೦ |
| ೨ಎ, ೨ಬಿ, ೩ಎ, ೩ಬಿ | ೨೦೦೧–೦೨ | ೧೯.೦೯ | ೧೮,೩೮೭ |
| ವರ್ಗ – ೧ (ಬಿ.ಟಿ.) | ೨೦೦೦–೦೧ | ೦.೮೭ | ೯೬೪ |
| ವರ್ಗ – ೧ (ಬಿ.ಟಿ.) | ೨೦೦೧–೦೨ | ೧.೪೨ | ೧,೬೨೨ |

**ಹೆಚ್ಚುವರಿ ಭೋಜನ ವೆಚ್ಚ ನೀಡಿಕೆ:** ವಿವಿಧ ಮೆಟ್ರಿಕ್ ನಂತರದ ಕೋರ್ಸುಗಳಲ್ಲಿ ವ್ಯಾಸಂಗ ಮಾಡುತ್ತಿರುವ ಹಿಂದುಳಿದ ವರ್ಗಗಳ ಪ್ರವರ್ಗ ಒಂದಕ್ಕೆ ಸೇರಿದ ವಿದ್ಯಾರ್ಥಿಗಳಿಗೆ, ಶಿಕ್ಷಣ ಸಂಸ್ಥೆಗಳಲ್ಲಿ ಶೇ.೭೫ರಷ್ಟು ಹಾಜರಾತಿ ಇದ್ದು ತಮ್ಮ ಅನುಕೂಲಕ್ಕೆ ತಕ್ಕಂತೆ ಊಟ ಮತ್ತು ವಸತಿ ವ್ಯವಸ್ಥೆಯನ್ನು ಮಾಡಿಕೊಂಡಿದ್ದಲ್ಲಿ, ಅಂತಹ ಪ್ರತೀ ವಿದ್ಯಾರ್ಥಿಗೆ ಮಾಹೆಯಾನ ರೂ.೨೦೦ ರಂತೆ ಹತ್ತು ತಿಂಗಳ ಅವಧಿಗೆ ಭೋಜನ ವೆಚ್ಚವನ್ನು ನೀಡಲಾಗುವುದು. ಸರ್ಕಾರದ ಇತರೆ ಯಾವುದೇ ಇಲಾಖೆಯು ನಡೆಸುತ್ತಿರುವ ಅಥವಾ ಅನುದಾನಿತ ಖಾಸಗಿ ನಿಲಯಗಳಲ್ಲಿ ಪ್ರವೇಶ ಪಡೆದಿರದೆ, ಬೇರೆ ಯಾವುದೇ ವಿದ್ಯಾರ್ಥಿ ವೇತನವನ್ನು ಪಡೆಯುತ್ತಿಲ್ಲದಿದ್ದಲ್ಲಿ, ಅಂತಹ ವಿದ್ಯಾರ್ಥಿಯು ಈ ಹೆಚ್ಚುವರಿ ಭೋಜನ ವೆಚ್ಚವನ್ನು ಪಡೆಯಲು ಅರ್ಹನೆಂದು ಇಲಾಖೆಯು ಪರಿಗಣಿಸುತ್ತದೆ. ಕಳೆದ ನಾಲ್ಕು ವರ್ಷಗಳಲ್ಲಿ ಈ ಹೆಚ್ಚುವರಿ ಭೋಜನ ವೆಚ್ಚದ ಫಲಾನುಭವಿಗಳ ಸಂಖ್ಯೆ ಮತ್ತು ಖರ್ಚಿನ ವಿವರಗಳನ್ನು ಕೆಳಗೆ ನಮೂದಿಸಲಾದ ಕೋಷ್ಟಕದಲ್ಲಿ ನೀಡಿದೆ.

**ಕೋಷ್ಟಕ ೧೬.೨೧ ಹೆಚ್ಚುವರಿ ಭೋಜನ ವೆಚ್ಚದ ಫಲಾನುಭವಿಗಳ ವಿವರ (೧೯೯೮–೯೯ ರಿಂದ ೨೦೦೧–೦೨ರವರೆಗೆ)**

| ವರ್ಷ | ವೆಚ್ಚ (ಲಕ್ಷ ರೂ.ಗಳಲ್ಲಿ) | ಫಲಾನುಭವಿಗಳ ಸಂಖ್ಯೆ |
|---|---|---|
| ೧೯೯೮–೯೯ | ೩.೦೮೪ | ೨೦೫ |
| ೧೯೯೯–೨೦೦೦ | ೩.೦೭೮ | ೧೮೬ |
| ೨೦೦೦–೦೧ | ೦.೦೮ | ೦೭ |
| ೨೦೦೧–೦೨ | ೨.೫೨ | ೧೨೯ |

**ಪ್ರೋತ್ಸಾಹ ಧನ ನೀಡಿಕೆ:** ಪಬ್ಲಿಕ್ ಪರೀಕ್ಷೆಗಳಲ್ಲಿ ಪ್ರಥಮ ದರ್ಜೆಯಲ್ಲಿ ಉತ್ತೀರ್ಣರಾದ ಮೆಟ್ರಿಕ್ ಪೂರ್ವ ವಿದ್ಯಾರ್ಥಿಗಳಿಗೆ ರೂ.೨೦೦ರಂತೆ, ಮೆಟ್ರಿಕ್ ನಂತರದ ವಿದ್ಯಾರ್ಥಿಗಳಿಗೆ ಆಯಾ ಕೋರ್ಸುಗಳಿಗನುಗುಣವಾಗಿ ರೂ.೨೦೦

ರಿಂದ ರೂ.೫೦೦ ರವರೆಗೆ ಪ್ರೋತ್ಸಾಹ ಧನ ನೀಡಲಾಗುತ್ತದೆ. ಜಿಲ್ಲೆಯಲ್ಲಿ ಕಳೆದ ನಾಲ್ಕು ವರ್ಷಗಳಲ್ಲಿ ಪ್ರಥಮ ದರ್ಜೆಯಲ್ಲಿ ತೇರ್ಗಡೆ ಹೊಂದಿದ ಹಾಗೂ ಪ್ರೋತ್ಸಾಹ ಧನ ಪಡೆದ ಫಲಾನುಭವಿಗಳ ಸಂಖ್ಯೆ ಹಾಗೂ ಆದ ವೆಚ್ಚವನ್ನು ಮುಂದಿನ ಕೋಷ್ಟಕದಲ್ಲಿ ನೀಡಲಾಗಿದೆ.

**ಕೋಷ್ಟಕ ೧೬.೨೨ ಪ್ರೋತ್ಸಾಹ ಧನ ಪಡೆದ ಫಲಾನುಭವಿಗಳ (೧೯೯೮-೯೯ ರಿಂದ ೨೦೦೧-೦೨ ರವರೆಗೆ) ವಿವರ**

| ವರ್ಷ | ವೆಚ್ಚ (ಲಕ್ಷ ರೂ.ಗಳಲ್ಲಿ) | ಫಲಾನುಭವಿಗಳ ಸಂಖ್ಯೆ |
|---|---|---|
| ೧೯೯೮-೯೯ | ೦.೧೬೮ | ೧೦ |
| ೧೯೯೯-೨೦೦೦ | ೦.೩೦೪ | ೨೯ |
| ೨೦೦೦-೦೧ | ೦.೫೧ | ೨೦೯ |
| ೨೦೦೧-೦೨ | ೦.೩೭ | ೧೯೮ |

ರಾಜ್ಯ ವಲಯ ಹಾಗೂ ಜಿಲ್ಲಾ ವಲಯ ಯೋಜನೆಗಳಡಿ ಕಾನೂನು ಪದವೀಧರರಿಗೆ ಹಿರಿಯ ವಕೀಲರಲ್ಲಿ ತರಬೇತಿ ಪಡೆಯಲು ತರಬೇತಿ ಭತ್ಯೆ ಹಾಗೂ ಮಾಂಗಲ್ಯ ಭಾಗ್ಯ; ರಾಜ್ಯ ವಲಯ ಯೋಜನೆಯಡಿ ಶಾಲಾ ಕಾಲೇಜುಗಳ ಶುಲ್ಕದಿಂದ ರಿಯಾಯಿತಿ, ಬೆರಳಚ್ಚು ಮತ್ತು ಶೀಘ್ರಲಿಪಿ ತರಬೇತಿ ಪಡೆಯುತ್ತಿರುವವರಿಗೆ ತರಬೇತಿ ಭತ್ಯೆ ನೀಡುವ ಯೋಜನೆಗಳೂ ಈ ಇಲಾಖೆಯ ಮೂಲಕ ಅನುಷ್ಠಾನಗೊಳಿಸಲ್ಪಡುತ್ತಿವೆ. ಕಳೆದ ಎರಡು ವರ್ಷದ ಖರ್ಚಿನ ವಿವರಗಳು ಹೀಗಿವೆ.

**ಕೋಷ್ಟಕ ೧೬.೨೩ ಕಳೆದ ಎರಡು ವರ್ಷದ ಖರ್ಚಿನ ವಿವರ**

| ಕ್ರ.ಸಂ. | ಕಾರ್ಯಕ್ರಮದ ಹೆಸರು | ಒದಗಿಸಿದ ಆಯವ್ಯಯ (ಲಕ್ಷ ರೂ.ಗಳಲ್ಲಿ) | ಖರ್ಚು (ಲಕ್ಷ ರೂ.ಗಳಲ್ಲಿ) | ಫಲಾನುಭವಿಗಳ ಸಂಖ್ಯೆ |
|---|---|---|---|---|
| ೧. | ಕಾನೂನು ಪದವೀಧರರಿಗೆ ತರಬೇತಿ ಭತ್ಯೆ | | | |
| | ೨೦೦೦-೦೧ | ೧.೨೦ | ೧.೦೧ | ೧೨ |
| | ೨೦೦೧-೦೨ | ೧.೨೦ | ೦.೮೨ | ೦೮ |
| ೨. | ಮಾಂಗಲ್ಯ ಭಾಗ್ಯ | | | |
| | ೨೦೦೦-೦೧ | – | ೧.೦೦ | ೨೦ |
| | ೨೦೦೧-೦೨ | – | ೦.೬೫ | ೧೩ |
| ೩. | ಶುಲ್ಕಗಳ ರಿಯಾಯಿತಿ | | | |
| | ೨೦೦೦-೦೧ | ೧೬.೭೭ | ೧೬.೭೫ | ೯೩.೪೯ |
| | ೨೦೦೧-೦೨ | ೧೮.೪೧ | ೧೬.೦೯ | ೭೫೧೦ |
| ೪. | ಬೆರಳಚ್ಚು ಮತ್ತು ಶೀಘ್ರಲಿಪಿ ತರಬೇತಿ ಭತ್ಯೆ | | | |
| | ೨೦೦೦-೦೧ | ೦.೩೦ | ೦.೩೦ | ೭೭ |
| | ೨೦೦೧-೦೨ | ೦.೧೩ | ೦.೧೦ | ೫೭ |
| ೫. | ಅನಾಥಾಲಯಗಳಿಗೆ ಸಹಾಯ ಧನ | | | |
| | ೨೦೦೦-೦೧ | ೨.೯೩ | ೪.೭೬ | ೨೭೫ |
| | ೨೦೦೧-೦೨ | ೨.೯೩ | ೨.೫೧ | ೨೭೫ |

೨೦೦೧-೦೨ನೇ ಸಾಲಿನಲ್ಲಿ ಜಿಲ್ಲಾ ವಲಯ ಯೋಜನೆಯಡಿ ಆಶ್ರಮ ಶಾಲೆಗಳಿಗೆ ೦.೯೯ ಲಕ್ಷ ರೂ., ಮೆಟ್ರಿಕ್ ನಂತರದ ವಿದ್ಯಾರ್ಥಿನಿಲಯಗಳಿಗೆ ೩೭.೨೧ ಲಕ್ಷ ರೂ.ಗಳನ್ನು ವೆಚ್ಚ ಮಾಡಲಾಗಿತ್ತು.

## ಅಲ್ಪ ಸಂಖ್ಯಾತರ ಕಲ್ಯಾಣ

ರಾಜ್ಯದಲ್ಲಿ ಮತೀಯ ಅಲ್ಪ ಸಂಖ್ಯಾತರ ಜನಸಂಖ್ಯೆಯು ೧೯೯೧ರ ಜನಗಣತಿಯ ಪ್ರಕಾರ ೬೫.೨೦ ಲಕ್ಷ ಇದ್ದು, ಇದು ಒಟ್ಟು ಜನಸಂಖ್ಯೆಯ ಶೇ.೧೪.೪೫ ರಷ್ಟಿದೆ. ಇದರಲ್ಲಿ ಮುಸ್ಲಿಮರು ೫೨.೩೪ ಲಕ್ಷ ; ಕ್ರಿಶ್ಚಿಯನ್ನರು; ೮.೫೯ ಲಕ್ಷ; ಜೈನರು ೩.೨೬ ಲಕ್ಷ; ಬೌದ್ಧರು ೦.೭೩ ಲಕ್ಷ ಮತ್ತು ಸಿಖ್ಖರು ೦.೧೮ ಲಕ್ಷ ಇದ್ದಾರೆ. ಇತ್ತೀಚಿನವರೆಗೆ ಮತೀಯ ಅಲ್ಪ ಸಂಖ್ಯಾತರ ಏಳಿಗೆಗೆ ಸಂಬಂಧಿಸಿದ ಕಾರ್ಯಕ್ರಮಗಳನ್ನು ಹಿಂದುಳಿದ ವರ್ಗಗಳ ಮತ್ತು ಅಲ್ಪ ಸಂಖ್ಯಾತರ ಇಲಾಖೆಯ ಮೂಲಕ ಕಾರ್ಯಗತಗೊಳಿಸಲಾಗುತ್ತಿತ್ತು. ಕರ್ನಾಟಕ ಸರ್ಕಾರವು ೧೯೯೮ರ ಡಿಸೆಂಬರ್ ಒಂಬತ್ತರ ಆದೇಶದಲ್ಲಿ ಅಲ್ಪ ಸಂಖ್ಯಾತರ ಕಲ್ಯಾಣ ನಿರ್ದೇಶನಾಲಯಕ್ಕೆ ಈ ಜವಾಬ್ದಾರಿಯನ್ನು ವಹಿಸಿದ್ದು, ಅದರಂತೆ ಈ ನಿರ್ದೇಶನಾಲಯವು ೧೯೯೯ರ ಮೇ ೨೦ರಿಂದ ಕಾರ್ಯಾರಂಭ ಮಾಡಿದೆ. ಜಿಲ್ಲಾ ಮಟ್ಟದಲ್ಲಿ ಹಿಂದುಳಿದ ವರ್ಗಗಳ ಇಲಾಖಾಧಿಕಾರಿಗಳೇ, ಈ ನಿರ್ದೇಶನಾಲಯದ ಕಾರ್ಯಕ್ರಮಗಳನ್ನು ಅನುಷ್ಠಾನಕ್ಕೆ ತರುವ ಜವಾಬ್ದಾರಿಯನ್ನು ಹೊಂದಿರುತ್ತಾರೆ.

### ಕಾರ್ಯಕ್ರಮಗಳು

**ಕಾನೂನು ಪದವೀಧರರಿಗೆ ತರಬೇತಿ ಭತ್ಯೆ:** ರಾಜ್ಯದ ಪ್ರತೀ ಜಿಲ್ಲೆಗೂ ಇಬ್ಬರಂತೆ ಮತೀಯ ಅಲ್ಪ ಸಂಖ್ಯಾತ ಕಾನೂನು ಪದವೀಧರರನ್ನು ಆಯ್ಕೆ ಮಾಡಿ, ಅನುಭವಿ ವಕೀಲರಿಂದ ನಾಲ್ಕು ವರ್ಷಗಳ ಕಾಲ ತರಬೇತಿ ಕೊಡಿಸಲಾಗುತ್ತದೆ ಮತ್ತು ತರಬೇತಿಯ ಅವಧಿಯಲ್ಲಿ ತಿಂಗಳಿಗೆ ೧,೦೦೦ ರೂಪಾಯಿಗಳಂತೆ ಪ್ರತೀ ಅಭ್ಯರ್ಥಿಗೂ ತರಬೇತಿ ಭತ್ಯೆಯನ್ನು ನೀಡಲಾಗುತ್ತದೆ. ಮಂಡ್ಯ ಜಿಲ್ಲೆಯಲ್ಲಿ ೧೯೯೯-೨೦೦೧ನೇ ಸಾಲುಗಳಲ್ಲಿ ಒಟ್ಟು ನಾಲ್ವರು ಅಲ್ಪ ಸಂಖ್ಯಾತ ಅಭ್ಯರ್ಥಿಗಳು ಇದರ ಪ್ರಯೋಜನ ಪಡೆದಿದ್ದು, ಇದಕ್ಕಾಗಿ ಒಟ್ಟು ರೂಪಾಯಿ ೩೪,೭೫೦ಗಳನ್ನು ವೆಚ್ಚ ಮಾಡಲಾಗಿದೆ. ೨೦೦೧-೦೨ನೇ ಸಾಲಿನಲ್ಲಿ ಮೂರು ಅಭ್ಯರ್ಥಿಗಳು ತರಬೇತಿ ಪಡೆದಿದ್ದು, ಇವರಿಗೆ ರೂ.೩೭,೦೦೦ ವೆಚ್ಚ ಮಾಡಲಾಗಿದೆ.

**ಐ.ಟಿ.ಐ/ಡಿಪ್ಲೋಮಾ ವಿದ್ಯಾರ್ಥಿಗಳಿಗೆ ಶಿಷ್ಯವೇತನ :** ಐಟಿಐ/ ಡಿಪ್ಲೋಮಾ ತರಗತಿಗಳಲ್ಲಿ ವ್ಯಾಸಂಗ ಮಾಡುತ್ತಿರುವ ಅಲ್ಪಸಂಖ್ಯಾತ ವಿದ್ಯಾರ್ಥಿಗಳಿಗೆ ತಿಂಗಳಿಗೆ ರೂ.೧೫೦ ರಂತೆ ಹತ್ತು ತಿಂಗಳಿಗೆ ಶಿಷ್ಯ ವೇತನವನ್ನು ಮಂಜೂರು ಮಾಡಲಾಗುತ್ತದೆ. ಅದರಂತೆ ಈ ಜಿಲ್ಲೆಯಲ್ಲಿ ೧೯೯೯-೨೦೦೦ನೇ ಸಾಲಿನಲ್ಲಿ ಒಂಬತ್ತು ವಿದ್ಯಾರ್ಥಿಗಳೂ, ೨೦೦೦-೨೦೦೧ನೇ ಸಾಲಿನಲ್ಲಿ ೨೨ ವಿದ್ಯಾರ್ಥಿಗಳೂ ಇದರ ಪ್ರಯೋಜನ ಪಡೆದಿದ್ದು, ಇದಕ್ಕಾಗಿ ಕ್ರಮವಾಗಿ ರೂ.೧೧,೦೦೦ ಮತ್ತು ರೂ.೨೩,೨೫೦ಗಳನ್ನು ಖರ್ಚು ಮಾಡಲಾಗಿದೆ. ೨೦೦೦ದ ಅಕ್ಟೋಬರ್‌ನಲ್ಲಿ, ಒಂದರಿಂದ ಹತ್ತನೇ ತರಗತಿಯವರೆಗೆ ಓದುತ್ತಿರುವ ೩,೪೫೯ ವಿದ್ಯಾರ್ಥಿಗಳೊಂದಿಗೆ ೩೯ ಖಾಸಗಿ ಅನಾಥಾಲಯಗಳು ಈ ಇಲಾಖೆಗೆ ವರ್ಗಾವಣೆಗೊಂಡಿದ್ದು, ಈ ಮಕ್ಕಳಿಗೆ ರೂ.೧೫೦/- ರಂತೆ ಭೋಜನ ವೆಚ್ಚ ಮಂಜೂರಾತಿ, ಮೊರಾರ್ಜಿ ದೇಸಾಯಿ ವಸತಿ ಶಾಲೆಗಳು, ಮೆಟ್ರಿಕ್ ನಂತರದ ವಿದ್ಯಾರ್ಥಿನಿಲಯಗಳ ನಿರ್ವಹಣೆ, ಅಲ್ಪಸಂಖ್ಯಾತರಿಗಾಗಿ ಸಮುದಾಯ ಭವನಗಳ ನಿರ್ಮಾಣ, ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಹಾಜರಾಗುವ ವಿದ್ಯಾರ್ಥಿಗಳಿಗೆ ತರಬೇತಿ ಭತ್ಯೆಯೊಂದಿಗೆ ತರಬೇತಿ ನೀಡುವುದೇ ಇತ್ಯಾದಿ ಕಾರ್ಯಕ್ರಮಗಳು ಅಲ್ಪ ಸಂಖ್ಯಾತರ ಇಲಾಖೆಯ ಮೂಲಕ ಅನುಷ್ಠಾನಗೊಳ್ಳುತ್ತವೆ. ಅಲ್ಪ ಸಂಖ್ಯಾತರ ಆರ್ಥಿಕ ಅಭಿವೃದ್ಧಿ ಕಾರ್ಯಕ್ರಮಗಳನ್ನು ೧೯೮೬ರಿಂದ ಕರ್ನಾಟಕ ಅಲ್ಪ ಸಂಖ್ಯಾತರ ಅಭಿವೃದ್ಧಿ ನಿಗಮವು ಜಾರಿಗೊಳಿಸುತ್ತಿದೆ.

## ಮಹಿಳೆಯರ ಮತ್ತು ಮಕ್ಕಳ ಕಲ್ಯಾಣ

೧೯೮೭ಕ್ಕೆ ಮೊದಲು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿಗಾಗಿ ಸಮಾಜ ಕಲ್ಯಾಣ ಇಲಾಖೆಯು ಹಲವಾರು ಕಾರ್ಯಕ್ರಮಗಳನ್ನು ರೂಪಿಸಿಕೊಂಡು ಜಾರಿಗೊಳಿಸುತ್ತಿತ್ತು. ಸಮಾಜದಲ್ಲಿ ಮಹಿಳೆಯರ ಹಾಗೂ ಮಕ್ಕಳ ಸ್ಥಾನಮಾನಗಳನ್ನು ಗಣನೆಗೆ ತೆಗೆದುಕೊಂಡು ಅವರುಗಳಿಗೆ ಸಂಬಂಧಿಸಿದ ಗಂಭೀರ ಸಾಮಾಜಿಕ ಸಮಸ್ಯೆಗಳನ್ನು ಪರಿಹರಿಸುವ ಉದ್ದೇಶದಿಂದ ಒಂದು ಪ್ರತ್ಯೇಕ ಇಲಾಖೆಯನ್ನೇ ತೆರೆಯುವ ಅಂಶವನ್ನು ಸರ್ಕಾರವು ಮನಗಂಡು, ಅದರಂತೆ ೧೯೮೭ರಲ್ಲಿ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯನ್ನು ಸ್ಥಾಪಿಸಲಾಯಿತು. ಮಹಿಳೆಯರನ್ನು ಆರ್ಥಿಕವಾಗಿ ಸಬಲಗೊಳಿಸುವ ಮೂಲಕ ಅವರಿಗೆ ಸಮಾನತೆ, ಸಾಮಾಜಿಕ ನ್ಯಾಯ ಮತ್ತು ಕಾನೂನಿನನ್ವಯ ಲಭ್ಯವಾಗಬೇಕಾದ ಹಕ್ಕು ಭಾದ್ಯತೆಗಳನ್ನು ದೊರಕಿಸಿಕೊಡುವ ಪ್ರಯತ್ನವನ್ನು ಈ ಇಲಾಖೆ ಮಾಡುತ್ತಿದೆ. ಮಹಿಳೆಯರ ಪ್ರತಿಭೆ ಮತ್ತು ಸಾಮರ್ಥ್ಯಗಳನ್ನು, ಮಕ್ಕಳ ಪೋಷಣೆಗೆ ಮತ್ತು ಮನೆಗೆಲಸಕ್ಕಷ್ಟೇ ಸೀಮಿತಗೊಳಿಸದೇ ಉನ್ನತ ಶಿಕ್ಷಣ, ಸಂಸ್ಕೃತಿ, ವಿಜ್ಞಾನ, ತಾಂತ್ರಿಕ ಜ್ಞಾನ, ಸಾಹಿತ್ಯ, ಕರಕುಶಲತೆ ಮುಂತಾದ ಸಮಾಜದ ಇತರ ಕ್ಷೇತ್ರಗಳಲ್ಲೂ ತೊಡಗಿಸಿ, ಸಮಾಜದ ಅಭಿವೃದ್ಧಿಗೆ ಅವರೂ ಕಾರಣರಾಗುವಂತೆ ಮಾಡುವುದೂ ಈ ಇಲಾಖೆಯ ಉದ್ದೇಶವಾಗಿದೆ. ಆದ್ದರಿಂದ ಮಹಿಳೆಯರ ಜೀವನಮಟ್ಟವನ್ನು ಹೆಚ್ಚಿಸಲು ಆದಾಯೋತ್ಪನ್ನ ಕ್ಷೇತ್ರ ಕುಶಲತೆಗಳಲ್ಲಿ ತರಬೇತಿ ನೀಡಲು ಹಾಗೂ ದುರ್ಬಲ ವರ್ಗಗಳ ಆದಾಯವನ್ನು ವೃದ್ಧಿಸಲು ಪ್ರಾಮುಖ್ಯತೆ ನೀಡಲಾಗುತ್ತಿದೆ. ಈ ನಿಟ್ಟಿನಲ್ಲಿ ಕೆಲಸ ಮಾಡುವ ನೋಂದಾಯಿತ ಸ್ವಯಂಸೇವಾ ಸಂಸ್ಥೆಗಳಿಗೆ ಇಲಾಖೆಯು ನೆರವು ನೀಡಿ ಪ್ರೋತ್ಸಾಹಿಸುತ್ತಿದೆ.

**ಸಮಗ್ರ ಬಾಲ ವಿಕಾಸ ಯೋಜನೆ:** ಈ ಯೋಜನೆಯನ್ನು ೧೯೭೭-೭೮ರಲ್ಲಿ ಜಿಲ್ಲೆಯ ಶ್ರೀರಂಗಪಟ್ಟಣ ತಾಲೂಕಿನಲ್ಲಿ ಮೊದಲು ಪ್ರಾರಂಭಿಸಲಾಯಿತು. ಪೋಷಕಾಂಶದ ಕೊರತೆ ಇರುವ ಆರು ವರ್ಷದೊಳಗಿನ ಮಕ್ಕಳಿಗೂ, ಗರ್ಭಿಣಿಯರಿಗೂ ಮತ್ತು ಬಾಣಂತಿಯರಿಗೂ ವಿಶೇಷ ಪೌಷ್ಟಿಕ ಆಹಾರವನ್ನು ಈ ಯೋಜನೆಯಡಿ ಅಂಗನವಾಡಿಗಳ ಮೂಲಕ ವಿತರಣೆ ಮಾಡಲಾಗುವುದು. ಅಲ್ಲದೆ ಮೂರರಿಂದ ಆರು ವರ್ಷ ವಯೋಮಿತಿ ಇರುವ ಮಕ್ಕಳಿಗೆ ಅನೌಪಚಾರಿಕವಾದ ಉಚಿತ ಶಿಕ್ಷಣವನ್ನೂ ನೀಡಲಾಗುವುದು. ಜಿಲ್ಲೆಯಲ್ಲಿ ಈ ಯೋಜನೆ ಪ್ರಾರಂಭಗೊಂಡಾಗ, ೧೦೦ ಕೇಂದ್ರಗಳಲ್ಲಿ ೬,೨೨೦ ಮಕ್ಕಳು ಮತ್ತು ಸ್ತ್ರೀಯರಿಗೆ, ಅಂಗನವಾಡಿಗಳ ಮೂಲಕ, ೪,೬೬೫ ಲಕ್ಷ ರೂಪಾಯಿಗಳ ವೆಚ್ಚದಲ್ಲಿ ಪೌಷ್ಟಿಕ ಆಹಾರವನ್ನು ವಿತರಣೆ ಮಾಡಲಾಯಿತು. ೧೯೯೭-೯೮ ರಿಂದ ೨೦೦೧-೦೨ರವರೆಗೆ ಈ ಯೋಜನೆಯ ಸೌಲಭ್ಯ ಪಡೆದ ಫಲಾನುಭವಿಗಳ ವಿವರಗಳನ್ನು ಮುಂದಿನ ಕೋಷ್ಟಕದಲ್ಲಿ ನೀಡಲಾಗಿದೆ.

**ಕೋಷ್ಟಕ ೧೬.೨೪ ಯೋಜನೆಯ ಸೌಲಭ್ಯ ಪಡೆದ ಫಲಾನುಭವಿಗಳ ವಿವರ**

| ಫಲಾನುಭವಿಗಳು | ೧೯೯೭-೯೮ | ೧೯೯೮-೯೯ | ೧೯೯೯-೨೦೦೦ | ೨೦೦೦-೦೧ | ೨೦೦೧-೦೨ |
|---|---|---|---|---|---|
| ೩-೬ ವರ್ಷದ ಮಕ್ಕಳು | ೪೭,೮೫೯ | ೪೫,೧೧೫ | ೪೪,೯೪೧ | ೪೪,೭೬೧ | ೪೧,೮೨೪ |
| ೬ ವರ್ಷದ ಮಕ್ಕಳು | ೪೭,೭೪೦ | ೪೫,೨೫೯ | ೫೦,೬೧೯ | ೪೮,೬೬೫ | ೪೭,೭೧೯ |
| ಗರ್ಭಿಣಿಯರು | ೮,೭೫೯ | ೮,೭೦೬ | ೯,೨೪೬ | ೮,೪೧೦ | ೮,೮೧೯ |
| ಬಾಣಂತಿಯರು | ೯,೮೧೩ | ೧೭,೩೫೯ | ೯,೦೦೬ | ೮,೫೮೬ | ೮,೪೮೪ |

**ನಿರ್ಗತಿಕ ತಬ್ಬಲಿ ಮಕ್ಕಳ ರಕ್ಷಣೆ:** ಕೇಂದ್ರ ಸರ್ಕಾರದ ಈ ಯೋಜನೆಯಡಿ ಮಕ್ಕಳ ಸೇವಾ ಕ್ಷೇತ್ರದಲ್ಲಿ ಕನಿಷ್ಠ ಮೂರು ವರ್ಷ ಕಾರ್ಯ ನಿರ್ವಹಿಸಿರುವ ನೋಂದಾಯಿತ ಸ್ವಯಂ ಸೇವಾ ಸಂಸ್ಥೆಗಳಿಗೆ, ತಲಾ ೨೫ ಮಕ್ಕಳಿಗೆ ಒಂದರಂತೆ ಕುಟೀರಗಳನ್ನು ತೆರೆಯಲು ಅನುಮತಿ ನೀಡಲಾಗುತ್ತದೆ. ಇದನ್ನು ನಡೆಸುವ ಸಂಸ್ಥೆಗಳಿಗೆ ಪ್ರತೀಯೊಂದು

ಮಗುವಿಗೆ ರೂ.೪೦ರಂತೆ ಬಾಡಿಗೆಯನ್ನು ಕೊಡಲಾಗುವುದು. ಐದರಿಂದ ಹನ್ನೆರಡು ವಯೋಮಾನದ ನಿರ್ಗತಿಕ ಮತ್ತು ತಬ್ಬಲಿ ಮಕ್ಕಳಿಗೆ ರಕ್ಷಣೆ ಹಾಗೂ ಪುನರ್‌ವಸತಿಗಾಗಿ ಪ್ರವೇಶ ನೀಡಲಾಗುವುದು. ಈ ಯೋಜನೆಯ ಪ್ರಕಾರ ಅನುಮೋದಿತ ವೆಚ್ಚದ ಶೇ.೯೦ ರಷ್ಟನ್ನು ಸರ್ಕಾರವು ನೀಡುತ್ತದೆ. ಉಳಿದ ಶೇ.ಹತ್ತರಷ್ಟನ್ನು ಸಂಸ್ಥೆಯು ಭರಿಸಬೇಕಾಗುತ್ತದೆ. ಈ ಯೋಜನೆಯು ಜಿಲ್ಲೆಯ ಎರಡು ತಾಲೂಕುಗಳಲ್ಲಿ ೧೯೯೨-೯೩ರಿಂದ ಆರಂಭಗೊಂಡಿದೆ. ಪ್ರಾರಂಭದಲ್ಲಿ ಐದು ಹೆಣ್ಣು ಮಕ್ಕಳು ಮತ್ತು ಇಪ್ಪತ್ತು ಗಂಡು ಮಕ್ಕಳು ಇದರ ಪ್ರಯೋಜನ ಪಡೆದಿದ್ದಾರೆ. ಜಿಲ್ಲೆಯಲ್ಲಿನ ನಾಗಮಂಗಲ ಮತ್ತು ಮಂಡ್ಯ ತಾಲೂಕುಗಳಲ್ಲಿ ಇಂಥ ಕುಟೀರಗಳನ್ನು ಸ್ಥಾಪಿಸಲು ಸರ್ಕಾರದ ನೆರವು ಲಭಿಸಿದೆ. ಈ ಯೋಜನೆಯಡಿ ಪ್ರತೀ ಮಗುವಿಗೆ ಪ್ರತೀ ತಿಂಗಳಿಗೆ ರೂ.೨೫೦ರಂತೆ ಅನುದಾನ ನೀಡಲಾಗುತ್ತದೆ. ೧೯೯೮-೯೯ರ ಸಾಲಿನಲ್ಲಿ ೪೨ ಹೆಣ್ಣು ಮಕ್ಕಳು ಹಾಗೂ ೬೩ ಗಂಡು ಮಕ್ಕಳು ಇದರ ಸೌಲಭ್ಯ ಪಡೆದಿದ್ದು, ಸರ್ಕಾರವು ಇದಕ್ಕಾಗಿ ಮೂರು ಲಕ್ಷ ರೂಪಾಯಿ ಖರ್ಚು ಮಾಡಿದೆ. ೧೯೯೯-೨೦೦೦ನೇ ಸಾಲಿನಲ್ಲಿ ಇಂತಹ ಐದು ಕುಟೀರಗಳು ಜಿಲ್ಲೆಯಲ್ಲಿ ಕಾರ್ಯ ನಿರ್ವಹಿಸುತ್ತಿದ್ದು, ೧೨೫ ಮಕ್ಕಳಿಗೆ ರೂ.೩.೨೦ಲಕ್ಷ ಖರ್ಚು ಮಾಡಲಾಗಿದೆ. (ಆಧಾರ: ಜಿ.ಪಂ.ವಾರ್ಷಿಕ ಆಡಳಿತ ವರದಿ-ಮಂಡ್ಯ)

**ವಿಶೇಷ ಪೌಷ್ಟಿಕ ಆಹಾರ ಕಾರ್ಯಕ್ರಮ/ವಿಶೇಷ ಘಟಕ ಯೋಜನೆ :** ಎಳೆ ಮಕ್ಕಳ ಪೌಷ್ಟಿಕತೆ ಮಟ್ಟದ ಹೆಚ್ಚಳ, ಆರೋಗ್ಯ ಸ್ಥಿತಿ ಸುಧಾರಣೆ,ಮಾನಸಿಕ, ಸಾಮಾಜಿಕ ಮತ್ತು ದೈಹಿಕವಾಗಿ ಸಮರ್ಪಕ ಬೆಳವಣಿಗೆಗೆ ಸಹಾಯ ನೀಡುವಿಕೆ, ಶಿಶುಮರಣ ದರ ಕುಗ್ಗಿಸುವಿಕೆ ಹಾಗೂ ಮಗುವಿನ ಸರ್ವಾಂಗೀಣ ಅಭಿವೃದ್ಧಿ ಮೊದಲಾದ ಉದ್ದೇಶಗಳಿಂದ ಈ ಯೋಜನೆಯನ್ನು ಪ್ರಾರಂಭಿಸಲಾಯಿತು. ಸಮಗ್ರ ಶಿಶು ಅಭಿವೃದ್ಧಿ ಯೋಜನೆಯ ಫಲಾನುಭವಿಗಳಿಗೆ ೩೦೦ ರಿಂದ ೩೫೦ ಕ್ಯಾಲರಿ ಶಕ್ತಿ ೧೦ ರಿಂದ ೧೨ ಗ್ರಾಂ ಪ್ರೋಟೀನ್. ಮೂರರಿಂದ ನಾಲ್ಕು ಗ್ರಾಂ ಖನಿಜಾಂಶಗಳ ಜೊತೆಗೆ ಕೊಬ್ಬು ಮತ್ತು ಪೌಷ್ಟಿಕಾಂಶಗಳನ್ನು ಒದಗಿಸುವ ಉದ್ದೇಶದಿಂದ ತಲಾ ರೂ.೧೨೫ನಲ್ಲಿ ಪೂರಕ ಪೌಷ್ಟಿಕ ಆಹಾರವನ್ನು ವರ್ಷದಲ್ಲಿ ೩೦೦ ದಿನಗಳು ನೀಡಲಾಗುತ್ತದೆ. ೧೯೯೭-೯೮ರಿಂದ ೨೦೦೧-೦೨ರವರೆಗೆ ಈ ಯೋಜನೆಯಡಿ ಮಾಡಲಾದ ಖರ್ಚುಗಳ ವಿವರಗಳನ್ನು ಈ ಮುಂದೆ ನೀಡಲಾಗಿದೆ.

**ಕೋಷ್ಟಕ ೧೬.೨೫ ಯೋಜನೆಯಡಿ ಮಾಡಲಾದ ಖರ್ಚುಗಳ ವಿವರ**

| ವರ್ಷ | ಫಲಾನುಭವಿಗಳು | ವೆಚ್ಚ (ಲಕ್ಷ ರೂ.ಗಳಲ್ಲಿ) |
|---|---|---|
| ೧೯೯೭-೯೮ | ೧,೧೪,೧೭೧ | ೩೮೪.೮೧ |
| ೧೯೯೮-೯೯ | ೧,೧೬,೪೩೯ | ೩೪೦.೮೩ |
| ೧೯೯೯-೨೦೦೦ | ೧,೧೩,೮೧೨ | ೩೩೬.೮೯ |
| ೨೦೦೦-೦೧ | ೧,೧೦,೪೨೨ | ೩೫೨.೬೫ |
| ೨೦೦೧-೦೨ | ೧,೦೬,೮೪೬ | ೩೩೨.೩೩ |

**ಕೋಷ್ಟಕ ೧೬.೨೬ ವಿಶೇಷ ಘಟಕ ಯೋಜನೆಯಡಿ ಕಳೆದ ನಾಲ್ಕು ವರ್ಷಗಳಲ್ಲಿ ಸೌಲಭ್ಯ ಪಡೆದವರ ಸಂಖ್ಯೆ ಮತ್ತು ವೆಚ್ಚದ ವಿವರ**

| ವರ್ಷ | ಫಲಾನುಭವಿಗಳು | ವೆಚ್ಚ (ಲಕ್ಷ ರೂ.ಗಳಲ್ಲಿ) |
|---|---|---|
| ೧೯೯೭-೯೮ | ೪೦೦೦ | ೫.೯೯ |
| ೧೯೯೮-೯೯ | - | ೭.೪೪ |
| ೧೯೯೯-೨೦೦೦ | - | ೫.೭೨ |
| ೨೦೦೦-೦೧ | ೧೦,೩೩೯ | ೩೮.೪೨ |

**ಉದ್ಯೋಗಸ್ಥ ಮಹಿಳೆಯರ ಮಕ್ಕಳ ಶಿಶು ಪಾಲನಾ ಕೇಂದ್ರಗಳು:** ವ್ಯವಸಾಯ ಹಾಗೂ ಇನ್ನಿತರ ವೃತ್ತಿನಿರತ ಮಹಿಳೆಯರ ಮೂರು ವರ್ಷದೊಳಗಿನ ಮಕ್ಕಳಿಗೆ ಗ್ರಾಮಾಂತರ ಹಾಗೂ ನಗರದ ಪ್ರದೇಶಗಳಲ್ಲಿ ಆಶ್ರಯ ನೀಡಲು ಶಿಶುಪಾಲನಾ ಕೇಂದ್ರಗಳನ್ನು ಪ್ರಾರಂಭಿಸುವಂತಹ ಸ್ವಯಂ ಸೇವಾ ಸಂಸ್ಥೆಗಳಿಗೆ ಮತ್ತು ಮಹಿಳಾ ಮಂಡಳಿಗಳಿಗೆ ಧನಸಹಾಯ ನೀಡುವುದು ಈ ಯೋಜನೆಯ ಉದ್ದೇಶವಾಗಿರುತ್ತದೆ. ಮೂರು ವರ್ಷಕ್ಕಿಂತ ಕಡಿಮೆ ವಯಸ್ಸಿನ ಮಕ್ಕಳ ಪಾಲನೆ, ಮಕ್ಕಳನ್ನು ನೈಸರ್ಗಿಕ ಆಪತ್ತುಗಳಿಂದ ರಕ್ಷಿಸುವುದು, ಪೂರಕ ಪೌಷ್ಟಿಕ ಆಹಾರ ನೀಡುವುದು, ಮಕ್ಕಳಲ್ಲಿ ಶಾಲೆ ಬಿಡುವ ಅಭ್ಯಾಸ ತಪ್ಪಿಸುವುದು ಮತ್ತು ಮಹಿಳೆಯರ ಸಾಕ್ಷರತೆಯನ್ನು ಹೆಚ್ಚಿಸುವುದು ಸಹ ಈ ಯೋಜನೆಯ ಉದ್ದೇಶ. ಕರ್ನಾಟಕ ಸೊಸೈಟೀಸ್ ರಿಜಿಸ್ಟ್ರೇಶನ್ ಆ್ಯಕ್ಟ್ ೧೯೬೦ರನ್ವಯ ನೋಂದಣಿಯಾದ ಹಾಗೂ ಅಗತ್ಯ ಸಿಬ್ಬಂದಿ ಮತ್ತಿತರ ಸೌಲಭ್ಯಗಳನ್ನೂ, ಸಾಧನಗಳನ್ನೂ ಹೊಂದಿರುವ ಸ್ವಯಂ ಸೇವಾ ಸಂಸ್ಥೆಗಳು ಈ ಯೋಜನೆಯಡಿ ಅನುದಾನ ಪಡೆಯಲು ಅರ್ಹವಾಗಿರುತ್ತವೆ. ಜಿಲ್ಲೆಯಲ್ಲಿ ಈ ಯೋಜನೆ ೧೯೯೨–೯೩ ರಲ್ಲಿ ಆರಂಭಗೊಂಡಿತು. ಆರಂಭದಲ್ಲಿ ೫೦ ಮಕ್ಕಳಿಗೆ ೧.೦೨ ಲಕ್ಷ ರೂ.ಗಳನ್ನು ಖರ್ಚು ಮಾಡಲಾಗಿತ್ತು. ಕಳೆದ ಐದು ವರ್ಷಗಳಲ್ಲಿ (೧೯೯೭–೯೮ ರಿಂದ ೨೦೦೧–೨೦೦೨ರವರೆಗೆ) ಈ ಯೋಜನೆಯಡಿ ಸೌಲಭ್ಯ ಪಡೆದ ಶಿಶುಪಾಲನಾ ಕೇಂದ್ರಗಳ ಸಂಖ್ಯೆ ಮತ್ತು ವೆಚ್ಚದ ವಿವರಗಳನ್ನು ಈ ಮುಂದೆ ನೀಡಲಾಗಿದೆ.

**ಕೋಷ್ಟಕ ೧೬.೨೭ ಶಿಶುಪಾಲನಾ ಕೇಂದ್ರಗಳ ಸಂಖ್ಯೆ ಮತ್ತು ವೆಚ್ಚದ ವಿವರ**

| ವರ್ಷ | ಕೇಂದ್ರಗಳ ಸಂಖ್ಯೆ | ಮಕ್ಕಳ ಸಂಖ್ಯೆ | ವೆಚ್ಚ (ಲಕ್ಷ ರೂ.ಗಳಲ್ಲಿ) |
|---|---|---|---|
| ೧೯೯೭–೯೮ | ೧೧ | – | ೧.೪೫ |
| ೧೯೯೮–೯೯ | ೧೧ | – | ೩.೦೦ |
| ೧೯೯೯–೨೦೦೦ | ೧೧ | ೨೭೫ | ೩.೦೦ |
| ೨೦೦೦–೦೧ | ೧೧ | – | ೪.೧೦ |
| ೨೦೦೧–೦೨ | ೧೧ | – | ೪.೪೦ |

**ಗ್ರಾಮಾಂತರ ಪ್ರದೇಶದ ಹೆಣ್ಣು ಮಕ್ಕಳಿಗೆ ಹಾಜರಾತಿ ವೇತನ :** ಶಾಲೆಗೆ ಹೋಗುವ ಗ್ರಾಮಾಂತರ ಹೆಣ್ಣು ಮಕ್ಕಳು ಶಾಲೆ ಬಿಡುವುದನ್ನು ತಪ್ಪಿಸಲು ಹಾಗೂ ಮಹಿಳೆಯರ ಸಾಕ್ಷರತೆಯನ್ನು ಹೆಚ್ಚಿಸಲು, ಈ ಯೋಜನೆಯಡಿ ಆರ್ಥಿಕ ಸಹಾಯ ನೀಡಲಾಗುತ್ತದೆ. ಗ್ರಾಮೀಣ ಪ್ರದೇಶದಲ್ಲಿ ಅದರಲ್ಲೂ ಹೆಣ್ಣು ಮಕ್ಕಳು ಶಿಕ್ಷಣವನ್ನು ಮುಂದುವರಿಸಲು ಸಹಾಯಕವಾಗುವಂತೆ ಈ ಯೋಜನೆಯನ್ನು ರೂಪಿಸಲಾಗಿದೆ. ಆದ್ದರಿಂದ ಮಹಿಳಾ ಕಡ್ಡಾಯ ಶಿಕ್ಷಣವನ್ನು ಪ್ರೋತ್ಸಾಹಿಸುವಲ್ಲಿ ಇದು ಪ್ರಮುಖ ಹೆಜ್ಜೆಯಾಗಿದೆ. ೨೦,೦೦೦ ಜನಸಂಖ್ಯೆಗಿಂತ ಕಡಿಮೆ ಇರುವ ಗ್ರಾಮದಲ್ಲಿನ ಹೆಣ್ಣು ಮಕ್ಕಳಿಗೆ ಈ ಶಿಷ್ಯ ವೇತನ ಲಭಿಸುತ್ತದೆ. ಶೇ ೮೦ ಹಾಜರಾತಿಯನ್ನೂ ಶೇ.೪೦ ಅಂಕಗಳನ್ನೂ ಪಡೆದು ಉತ್ತೀರ್ಣರಾದ, ಐದನೇ ತರಗತಿಯಿಂದ ಏಳನೇ ತರಗತಿಯ ಗ್ರಾಮೀಣ ಹೆಣ್ಣು ಮಕ್ಕಳಿಗೆ ತಿಂಗಳಿಗೆ ೨೫ ರೂಪಾಯಿಗಳಂತೆ, ಎಂಟನೇ ತರಗತಿಯಿಂದ ಹತ್ತನೇ ತರಗತಿಯ ಹೆಣ್ಣು ಮಕ್ಕಳಿಗೆ ತಿಂಗಳಿಗೆ ಐವತ್ತು ರೂಪಾಯಿಗಳಂತೆ, ವರ್ಷದಲ್ಲಿ ಹತ್ತು ತಿಂಗಳ ವಿದ್ಯಾರ್ಥಿ ವೇತನವನ್ನು ನೀಡಲಾಗುವುದು. ಈ ಯೋಜನೆಯಲ್ಲಿ ಸೌಲಭ್ಯ ಪಡೆಯುವ ಅಭ್ಯರ್ಥಿಯ ಕುಟುಂಬದ ವಾರ್ಷಿಕ ವರಮಾನ ೧೦,೦೦೦ ರೂಪಾಯಿಗಳಿಗೆ ಮೀರಬಾರದು. ಹಿಂದಿನ ಐದು ವರ್ಷಗಳಲ್ಲಿ ಜಿಲ್ಲೆಯಲ್ಲಿ ಈ ಯೋಜನೆಯ ಫಲಾನುಭವಿಗಳ ಸಂಖ್ಯೆ ಮತ್ತು ಅದ ವೆಚ್ಚವನ್ನು ಮುಂದಿನ ಪಟ್ಟಿಯಲ್ಲಿ ನೀಡಲಾಗಿದೆ.

**ಕೋಷ್ಟಕ ೧೬.೨೮ ಫಲಾನುಭವಿಗಳ ಸಂಖ್ಯೆ ಮತ್ತು ವೆಚ್ಚಗಳ ವಿವರ**

| ವರ್ಷ | ಫಲಾನುಭವಿಗಳ ಸಂಖ್ಯೆ | ವೆಚ್ಚ (ಲಕ್ಷ ರೂ.ಗಳಲ್ಲಿ) |
|---|---|---|
| ೧೯೯೭–೯೮ | ೩,೦೦೨ | ೧೦.೦೦ |
| ೧೯೯೮–೯೯ | ೨,೧೪೭ | ೮.೦೦ |
| ೧೯೯೯–೨೦೦೦ | ೩,೨೮೬ | ೧೧.೦೦ |
| ೨೦೦೦–೦೧ | ೩,೯೦೦ | ೧೪.೫೦ |
| ೨೦೦೧–೦೨ | ೪,೩೯೧ | ೧೪.೦೦ |

**ಗೃಹ ಕಲ್ಯಾಣ (ಮನೆ ಬೆಳಕು) ಯೋಜನೆ :** ಈ ಯೋಜನೆಯಡಿ ನಗರಪ್ರದೇಶಗಳ ದುರ್ಬಲ ವರ್ಗದ ಮಹಿಳೆಯರು ಸಣ್ಣ ಪ್ರಮಾಣದ ಕೈಗಾರಿಕೆಗಳನ್ನು ಆರಂಭಿಸಲು ಇಲಾಖೆಯು ನೆರವು ನೀಡುತ್ತದೆ. ರಾಷ್ಟ್ರೀಕೃತ ಬ್ಯಾಂಕುಗಳು ನೀಡುವ ಸಾಲದ ಶೇ.೨೫ರಷ್ಟನ್ನು ರಿಯಾಯಿತಿ ದರದಲ್ಲಿ, ಮಹಿಳೆಯರು ಆದಾಯ ತರುವ ಉತ್ಪಾದನಾ ಚಟುವಟಿಕೆಗಳನ್ನು ಕೈಗೊಳ್ಳುವ ಸಲುವಾಗಿ ನೀಡಲಾಗುತ್ತದೆ. ಈ ಯೋಜನೆಯು ಜಿಲ್ಲೆಯಲ್ಲಿ ೨೨–೮–೧೯೮೨ರಲ್ಲಿ ಪ್ರಾರಂಭವಾಗಿದ್ದು, ೯೨–೯೩ ರಲ್ಲಿ ೬೦ ಫಲಾನುಭವಿಗಳಿಗೆ ೬೭,೦೭೫ ರೂ.ಗಳನ್ನು ವೆಚ್ಚ ಮಾಡಲಾಗಿದೆ. ೧೯೯೭–೯೮ ನೇ ಸಾಲಿನಿಂದ ೨೦೦೧–೦೨ನೇ ಸಾಲಿನವರೆಗೆ ಈ ಯೋಜನೆಯಡಿ ನೆರವು ಪಡೆದ ಹಾಗೂ ಭರಿಸಲಾದ ವೆಚ್ಚದ ವಿವರಗಳನ್ನು ಈ ಮುಂದಿನ ಕೋಷ್ಟಕದಲ್ಲಿ ನೀಡಲಾಗಿದೆ.

**ಕೋಷ್ಟಕ ೧೬.೨೯ ಯೋಜನೆಯಡಿ ನೆರವು ಪಡೆದ ಹಾಗೂ ಭರಿಸಲಾದ ವೆಚ್ಚದ ವಿವರ**

| ಕ್ರ. ಸಂ | ವರ್ಷ | ಗುರಿ | | ಸಾಧನೆ | |
|---|---|---|---|---|---|
| | | ಭೌತಿಕ | ಆರ್ಥಿಕ | ಸಹಾಯಧನ ಪಡೆದ ಫಲಾನುಭವಿಗಳ ಸಂಖ್ಯೆ | ಭರಿಸಿದ ವೆಚ್ಚ |
| ೧ | ೧೯೯೨–೯೩ | ೬೦ | ೭೫,೦೦೦ | ೬೦ | ೬೭,೦೭೫ |
| ೨ | ೧೯೯೭–೯೮ | ೬೦ | ೧,೫೦,೦೦೦ | ೭೭ | ೩,೪೮,೦೦೦ |
| ೩ | ೧೯೯೮–೯೯ | ೭೮ | ೨,೭೮,೦೦೦ | ೬೧ | ೨,೭೩,೦೦೦ |
| ೪ | ೧೯೯೯–೨೦೦೦ | ೭೮ | ೩,೫೭,೦೦೦ | ೭೮ | ೩,೫೯,೦೦೦ |
| ೫ | ೨೦೦೦–೦೧ | ೭೦ | ೩,೫೦,೦೦೦ | ೮೧ | ೪,೦೫,೦೦೦ |
| ೫ | ೨೦೦೧–೦೨ | ೯೬ | ೪,೮೦,೦೦೦ | ೧೦೫ | ೫,೧೩,೦೦೦ |

**ವೃತ್ತಿ ತರಬೇತಿ ಪಡೆಯುವ ಮಹಿಳೆಯರಿಗೆ ಆರ್ಥಿಕ ಸಹಾಯ:** ಮಹಿಳೆಯರ ಸ್ಥಾನಮಾನ ಹೆಚ್ಚಿಸಿ, ಅವರನ್ನು ಆರ್ಥಿಕವಾಗಿ ಸ್ವಾವಲಂಬಿಗಳನ್ನಾಗಿ ಮಾಡಲು, ಆರ್ಥಿಕವಾಗಿ ಹಿಂದುಳಿದ ಮಹಿಳೆಯರಿಗೆ ಅಗತ್ಯವಾದ ನೈಪುಣ್ಯತೆ, ಕೌಶಲ್ಯಗಳನ್ನು ಒದಗಿಸಲು ನೆರವಾಗುವಂತೆ, ಟಿ.ವಿ. ಮತ್ತು ರೇಡಿಯೋ ಭಾಗಗಳ ಜೋಡಣೆ, ಗಡಿಯಾರ ರಚನೆ, ಬೆರಳಚ್ಚು ಹಾಗೂ ಮೋಟಾರ್ ರಿವೈಂಡಿಂಗ್ ಮುಂತಾದ ಕೆಲಸಗಳಲ್ಲಿ ತರಬೇತಿ ನೀಡುವ ಉದ್ದೇಶದಿಂದ ಆರ್ಥಿಕ ಸಹಾಯವನ್ನು, ಈ ಯೋಜನೆಯಡಿ ನೀಡಲಾಗುವುದು. ಕುಟುಂಬದ ವಾರ್ಷಿಕ ಆದಾಯ ರೂ.೧೧,೦೦೦/– ಗಳಿಗಿಂತ ಕಡಿಮೆ ಇರುವ, ೧೫ ರಿಂದ ೪೫ ವರ್ಷ ವಯಸ್ಸಿನ ಮಹಿಳೆಯರು, ಮೊದಲ ಪ್ರಯತ್ನದಲ್ಲೇ ಅರ್ಹತಾ

ಪರೀಕ್ಷೆಯಲ್ಲಿ ಉತ್ತೀರ್ಣರಾದರೆ, ವಸತಿ ನಿಲಯದ ಖರ್ಚಿಗೆ ರೂ.೨೫೦/– ಮಿತಿಯೊಳಗೆ ೧೦ ತಿಂಗಳಿಗೆ ಇಲಾಖೆಯಿಂದ ಸಹಾಯಧನ ನೀಡಲಾಗುವುದು.

**ಅಂಗನವಾಡಿ ಕಾರ್ಯಕರ್ತೆಯರಿಗೆ ತರಬೇತಿ:** ಅಂಗನವಾಡಿ ತರಬೇತಿ ಕೇಂದ್ರಗಳಲ್ಲಿ ಹೊಸದಾಗಿ ನೇಮಕಗೊಂಡ ಕಾರ್ಯಕರ್ತೆಯರಿಗೆ ಮಾತ್ರ ಮೂರು ತಿಂಗಳ ಜೆ.ಟಿ.ಸಿ. ತರಬೇತಿ ಹಾಗೂ ಆರು ದಿನಗಳ ಪುನಶ್ಚೇತನ ತರಬೇತಿಗಳನ್ನು ನೀಡಲಾಗುತ್ತದೆ. ಈ ಜಿಲ್ಲೆಯಲ್ಲಿ ಅಂಗನವಾಡಿ ತರಬೇತಿ ಕೇಂದ್ರ ಜುಲೈ ೧೯೯೪ ರಲ್ಲಿ ಪ್ರಾರಂಭಗೊಂಡಿದ್ದು ಈವರೆಗೆ ೫೦ ಅಂಗನವಾಡಿ ಸಹಾಯಕಿಯರಿಗೆ ಓರಿಯಂಟೇಶನ್ ತರಬೇತಿ ನೀಡಲಾಗಿದ್ದು, ಇದಕ್ಕಾಗಿ ೧೦,೫೦೦ ರೂ.ಗಳನ್ನು ಖರ್ಚು ಮಾಡಲಾಗಿದೆ.

ಜಿಲ್ಲೆಯಲ್ಲಿ ಒಟ್ಟು ೧,೬೬೫ ಅಂಗನವಾಡಿ ಕೇಂದ್ರಗಳಿದ್ದು, ಸೌಲಭ್ಯ ಪಡೆದ ಒಟ್ಟು ಫಲಾನುಭವಿಗಳ ವಿವರಗಳನ್ನು ಈ ಮುಂದೆ ಕೊಡಲಾಗಿದೆ.

**ಕೋಷ್ಟಕ ೧೬.೩೦ ಜಿಲ್ಲೆಯ ಅಂಗನವಾಡಿ ಕೇಂದ್ರಗಳ ತಾಲ್ಲೂಕುವಾರು ಸಂಖ್ಯೆ ಮತ್ತು ಫಲಾನುಭವಿಗಳ ಸಂಖ್ಯೆ**

| ತಾಲ್ಲೂಕು | ಅಂಗನವಾಡಿ ಕೇಂದ್ರಗಳು | ಫಲಾನುಭವಿಗಳು |
|---|---|---|
| ಶ್ರೀರಂಗಪಟ್ಟಣ | ೧೪೬ | ೮, ೯೬೧ |
| ಪಾಂಡವಪುರ | ೧೫೯ | ೯,೬೨೮ |
| ನಾಗಮಂಗಲ | ೧೭೩ | ೧೦,೯೪೭ |
| ಮಳವಳ್ಳಿ | ೨೫೨ | ೨೫,೮೪೮ |
| ಮದ್ದೂರು | ೩೨೨ | ೨೨,೩೧೪ |
| ಮಂಡ್ಯ | ೩೮೨ | ೨೨,೨೬೨ |
| ಕೆ.ಆರ್.ಪೇಟೆ | ೨೨೪ | ೧೫,೦೦೨ |
| ಒಟ್ಟು | ೧,೬೫೫ | ೧,೧೪,೯೬೨ |

**ಕೃಷಿ ಕಾರ್ಮಿಕ ಮಹಿಳೆಯರಿಗೆ ಮತ್ತು ಕೈಮಗ್ಗ ನೇಕಾರರಿಗೆ ಹೆರಿಗೆ ಭತ್ಯೆ ಯೋಜನೆ:** ಭೂ ರಹಿತ ಕೃಷಿ ಕಾರ್ಮಿಕ ಮಹಿಳೆಯರಿಗೆ ಮತ್ತು ಕೈಮಗ್ಗ ಮಹಿಳಾ ನೇಕಾರರಿಗೆ ಹೆರಿಗೆ ಭತ್ಯೆಯನ್ನು ನೀಡುವ ನಿಯಮಾವಳಿಯನ್ನು ರಾಜ್ಯ ಸರ್ಕಾರವು ೧೯೮೪ರಲ್ಲಿ ಜಾರಿಗೆ ತಂದಿತು. ಈ ನಿಯಮಾವಳಿಯು ದಿನಗೂಲಿ ಅಥವಾ ಗುತ್ತಿಗೆ ಮೇರೆಗೆ ಕೆಲಸ ಮಾಡುತ್ತಿರುವ ಕಾರ್ಮಿಕರಿಗೆ ಅನ್ವಯಿಸುತ್ತದೆ. ಅರ್ಜಿದಾರ ಮಹಿಳೆಯ ಪತಿಯು ಕನಿಷ್ಟ ಪಕ್ಷ ಸತತವಾಗಿ ಮೂರು ವರ್ಷಗಳ ಕಾಲ ಕರ್ನಾಟಕದ ನಿವಾಸಿಯಾಗಿರಬೇಕು. ಈ ಭತ್ಯೆಯನ್ನು ಮೊದಲ ಎರಡು ಮಕ್ಕಳಿಗೆ ಮಾಸಿಕ ರೂ.೧೦೦ ರಂತೆ ಹೆರಿಗೆಯ ಪೂರ್ವ ಮತ್ತು ನಂತರದ ಅವಧಿಯನ್ನು ಸೇರಿಸಿಕೊಂಡು ಮೂರು ತಿಂಗಳಿಗೆ ಮಾತ್ರ ನೀಡಲಾಗುತ್ತದೆ. ಮಂಡ್ಯ ಜಿಲ್ಲೆಯಲ್ಲಿ ೧೯೯೭–೧೯೯೮ ನೇ ಸಾಲಿನಿಂದ ೯೯–೨೦೦೦ ನೇ ಸಾಲಿನವರೆಗೆ ಈ ಸೌಲಭ್ಯವನ್ನು ಪಡೆದ ಫಲಾನುಭವಿಗಳ ಮತ್ತು ಖರ್ಚಿನ ವಿವರಗಳನ್ನು ಈ ಮುಂದೆ ನೀಡಲಾಗಿದೆ.

**ಕೋಷ್ಟಕ ೧೬.೩೧ ಯೋಜನೆಯಡಿ ಸೌಲಭ್ಯವನ್ನು ಪಡೆದ ಫಲಾನುಭವಿಗಳು ಮತ್ತು ಖರ್ಚಿನ ವಿವರ**

| ವರ್ಷ | ಫಲಾನುಭವಿಗಳು | ವೆಚ್ಚ |
|---|---|---|
| ೧೯೯೭-೧೯೯೮ | ೫೬೨ | ೧,೬೮,೬೦೦ |
| ೧೯೯೮-೯೯ | ೫೬೪ | ೨,೬೭,೧೦೦ |
| ೧೯೯೯-೨೦೦೦ | ೫೫೮ | ೩,೦೭,೦೦೦ |

**ಬಾಲಮಂದಿರಗಳು:** ಬಾಲ ನ್ಯಾಯಾಲಯ ಮತ್ತು ಬಾಲಕಲ್ಯಾಣ ಮಂಡಳಿಗಳಿಂದ ಕಳುಹಿಸಲ್ಪಟ್ಟ ಮಕ್ಕಳಿಗೆ ಪುನರ್ ವಸತಿ ಕಲ್ಪಿಸುವ ಸಲುವಾಗಿ ಬಾಲಮಂದಿರಗಳಲ್ಲಿ ಸೇರಿಸಿ ಏಳನೇ ತರಗತಿಯವರೆಗೆ ಶಿಕ್ಷಣ ನೀಡಲಾಗುತ್ತದೆ. ಇದರ ಜೊತೆಗೆ ಮರಗೆಲಸ, ನೇಯ್ಗೆ, ಬಟ್ಟೆ ಹೊಲಿಯುವುದು, ಮುದ್ರಣ, ಚಪ್ಪಲಿ ತಯಾರಿಕೆ ಮೊದಲಾದ ಕುಶಲ ಕಲೆಗಳಲ್ಲಿ ವೃತ್ತಿ ಪರ ತರಬೇತಿಯನ್ನೂ ನೀಡಲಾಗುವುದು. ಪ್ರೌಢ ಶಾಲೆಗಳಲ್ಲಿ ಓದುತ್ತಿರುವ ಮಕ್ಕಳನ್ನು ಕ್ರಮಬದ್ಧವಾಗಿ ತರಗತಿಗಳಿಗೆ ಹಾಜರಾಗುವ ಸಲುವಾಗಿ ಶಾಲೆಗೆ ಕಳುಹಿಸಿಕೊಡಲಾಗುತ್ತದೆ. ಮಂಡ್ಯ ಜಿಲ್ಲೆಯ ಅಶೋಕ ನಗರದ ಶಿವನಂಜಪ್ಪ ಪಾರ್ಕ್‌ನಲ್ಲಿರುವ ಬಾಲಮಂದಿರವು ೨೦೦೦-೨೦೦೧ ನೇ ಸಾಲಿನಿಂದ ಕಾರ್ಯ ನಿರ್ವಹಿಸುತ್ತಿದೆ.

**ವೀಕ್ಷಣಾಲಯಗಳು (ಆಬ್ಸರ್‌ವೇಶನ್ ಹೋಂ) :** ನಿರ್ಲಕ್ಷ್ಯಕ್ಕೆ ಇಲ್ಲವೇ/ಮೋಸಕ್ಕೊಳಗಾದ ಮಕ್ಕಳನ್ನು ಪೋಲಿಸ್ ಮತ್ತು ಸ್ವಯಂ ಸೇವಾ ಸಂಸ್ಥೆಗಳ ಮೇರೆಗೆ ವೀಕ್ಷಣಾಲಯಕ್ಕೆ ದಾಖಲು ಮಾಡಿಕೊಳ್ಳಲಾಗುತ್ತದೆ. ಸದರಿ ಮಕ್ಕಳು ಬೆಳೆದ ವಾತಾವರಣ ಅವರ ನಡವಳಿಕೆ ಮತ್ತು ಪೂರ್ವೋತ್ತರಗಳನ್ನು ತಿಳಿಯುವ ಸಲುವಾಗಿ ಪರಿವೀಕ್ಷಣಾಧಿಕಾರಿಗಳು ವಿವರವಾದ ತನಿಖೆಯನ್ನು ನಡೆಸಲು ಅಂತಹ ಮಕ್ಕಳನ್ನು ಮೂರು ತಿಂಗಳ ಕಾಲ ವೀಕ್ಷಣಾಲಯದಲ್ಲಿ ನೆಲೆಗೊಳಿಸಿ ಗಮನಿಸುತ್ತಾರೆ. ಬಾಲಾಪರಾಧಿಗಳನ್ನು ಬಾಲ ನ್ಯಾಯಾಲಯದ ಮುಂದೆ ಮತ್ತು ಇತರೆ ಮಕ್ಕಳನ್ನು ಬಾಲ ಕಲ್ಯಾಣ ಮಂಡಳಿಯ ಮುಂದೆ ಹಾಜರುಪಡಿಸಿ ಅವರ ಪುನರ್‌ವಸತಿಯ ಬಗ್ಗೆ ನಿರ್ಣಯವನ್ನು ತೆಗೆದುಕೊಳ್ಳಲಾಗುತ್ತದೆ. ಬಾಲನ್ಯಾಯ ಕಾಯ್ದೆ ೧೯೮೬ ರ ಪ್ರಕಾರ, ಇಲಾಖೆಯಿಂದ ಇಂತಹ ೨೦ ವೀಕ್ಷಣಾಲಯಗಳನ್ನು ರಾಜ್ಯದಲ್ಲಿ ನಡೆಸಲಾಗುತ್ತಿದ್ದು, ಅವುಗಳಲ್ಲಿ ಒಂದು ಮಂಡ್ಯದಲ್ಲಿ ಕಾರ್ಯನಿರ್ವಹಿಸುತ್ತಿದೆ. ಮಂಡ್ಯದ ವೀಕ್ಷಣಾಲಯದಲ್ಲಿ ಕಳೆದ ಐದು ವರ್ಷಗಳಲ್ಲಿ ದಾಖಲಾದ ಮಕ್ಕಳಲ್ಲಿ ಹದಿನೆಂಟು ಮಕ್ಕಳು ಪರಿವರ್ತಿತಗೊಂಡಿದ್ದು, ೧೨೭ ಮಕ್ಕಳು ಬಿಡುಗಡೆಯಾಗಿದ್ದಾರೆ. ೧೯೯೭-೯೮ರಿಂದ ೨೦೦೧-೦೨ರ ಅವಧಿಯಲ್ಲಿ ಈ ವೀಕ್ಷಣಾಲಯದ ತನಿಖೆಗೆ ಒಳಪಟ್ಟ ಮಕ್ಕಳ ವಿವರಗಳನ್ನು ಇಲ್ಲಿ ನೀಡಲಾಗಿದೆ.

**ಕೋಷ್ಟಕ ೧೬.೩೨ ವೀಕ್ಷಣಾಲಯದ ತನಿಖೆಗೆ ಒಳಪಟ್ಟ ಮಕ್ಕಳ ವಿವರ**

| ವರ್ಷ | ಪ್ರಾರಂಭದ ಮಕ್ಕಳ ಸಂಖ್ಯೆ | | ದಾಖಲಾದ ಮಕ್ಕಳ ಸಂಖ್ಯೆ | | ಪರಿವರ್ತಿತ ಮಕ್ಕಳ ಸಂಖ್ಯೆ | | ಬಿಡುಗಡೆಯಾದ ಮಕ್ಕಳ ಸಂಖ್ಯೆ | | ತಪ್ಪಿಸಿಕೊಂಡ ಮಕ್ಕಳ ಸಂಖ್ಯೆ | | ವರ್ಷದ ಅಂತ್ಯದಲ್ಲಿದ್ದ ಮಕ್ಕಳ ಸಂಖ್ಯೆ | |
|---|---|---|---|---|---|---|---|---|---|---|---|---|
| | ಗಂಡು | ಹೆಣ್ಣು | ಗಂಡು | ಹೆಣ್ಣು | ಗಂಡು | ಹೆಣ್ಣು | ಗಂಡು | ಹೆಣ್ಣು | ಗಂಡು | ಹೆಣ್ಣು | ಗಂಡು | ಹೆಣ್ಣು |
| ೧೯೯೭-೯೮ | ೦೭ | ೦೧ | ೪೬ | ೦೫ | ೦೬ | ೦೧ | ೩೯ | ೦೫ | ೦೦ | ೦೦ | ೦೮ | ೦೦ |
| ೧೯೯೮-೯೯ | ೦೮ | ೦೦ | ೪೨ | ೦೪ | ೦೬ | ೦೦ | ೩೬ | ೦೩ | ೦೦ | ೦೦ | ೦೮ | ೦೧ |
| ೯೯-೨೦೦೦ | ೦೮ | ೦೧ | ೫೧ | ೦೪ | ೦೪ | ೦೧ | ೪೧ | ೦೩ | ೦೨ | ೦೦ | ೧೧ | ೦೧ |
| ೨೦೦೦-೦೧ | ೧೨ | ೦೧ | ೬೨ | ೧೦ | ೦೯ | ೦೫ | ೫೧ | ೦೫ | – | – | ೧೫ | – |
| ೨೦೦೧-೦೨ | ೧೫ | ೦೧ | ೭೫ | ೦೮ | ೧೮ | ೦೨ | ೬೧ | ೦೭ | ೦೧ | – | ೧೧ | ೦೦ |

**ಮಹಿಳಾ ಮಂಡಳಿಗಳು :** ಮಂಡ್ಯ ಜಿಲ್ಲೆಯಲ್ಲಿ ೨೭ಕ್ಕೂ ಹೆಚ್ಚು ಮಹಿಳಾ ಮಂಡಳಿಗಳು ಹಾಗೂ ಮಹಿಳಾ ಸಂಘ ಸಂಸ್ಥೆಗಳು ಕಾರ್ಯ ನಿರ್ವಹಿಸುತ್ತಿವೆ. ಮಹಿಳೆಯರಿಗೆ ಹೊಲಿಗೆ ಮತ್ತು ನೇಯ್ಗೆ ತರಬೇತಿ ನೀಡುವುದು. ನೇತ್ರ ಶಸ್ತ್ರ ಚಿಕಿತ್ಸಾ ಶಿಬಿರ, ಸಾಂಸ್ಕೃತಿಕ ಕಾರ್ಯಕ್ರಮ, ಡ್ವಾಕ್ರಾದಲ್ಲಿ ರೆಡಿಮೇಡ್ ಬಟ್ಟೆ ತಯಾರಿಕೆ ರೇಡಿಯೋದಲ್ಲಿ ಸ್ವಾವಲಂಬನಾ ಮಾರ್ಗ ಇತ್ಯಾದಿಗಳನ್ನು ಕುರಿತು ಕಾರ್ಯಕ್ರಮ ಮುಂತಾದವನ್ನು ಈ ಮಂಡಳಿಗಳು ನಿರ್ವಹಿಸುತ್ತವೆ. ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯಿಂದ ಅವುಗಳಿಗೆ ಅನುದಾನವನ್ನು ನೀಡಲಾಗುತ್ತದೆ. ಈ ಜಿಲ್ಲೆಯಲ್ಲಿರುವ ಮಹಿಳಾ ಮಂಡಳಿ ಹಾಗೂ ಸಂಘಸಂಸ್ಥೆಗಳ ಹೆಸರುಗಳನ್ನು ಈ ಮುಂದೆ ನೀಡಲಾಗಿದೆ.

**ಮಂಡ್ಯ ತಾಲೂಕು:** ಮಂಡ್ಯ ಜಿಲ್ಲಾ ವಿವಿಧೋದ್ದೇಶ ಸಹಕಾರ ಸಂಘ (ರಿ), ಮಂಡ್ಯ; ಸ್ಫೂರ್ತಿ ಮಹಿಳಾ ಮಂಡಳಿ ಚಿಕ್ಕೇಗೌಡನ ಬಡಾವಣೆ, ಮಂಡ್ಯ ; ಯಶಸ್ವಿ ಮಹಿಳಾ ಮಂಡಳಿ, ತಾವರೆಗೆರೆ, ಮಂಡ್ಯ; ಜ್ಯೋತಿ ಮಹಿಳಾ ಮಂಡಳಿ, ಅರಕೇಶ್ವರನಗರ, ಮಂಡ್ಯ; ಸಹನಾ ಮಹಿಳಾ ಮತ್ತು ಯುವತಿ ಮಂಡಳಿ, ಬೋವಿಕಾಲೋನಿ, ಮಂಡ್ಯ ; ಶಾಶ್ವತಿ ಮಹಿಳಾ ಮಂಡಳಿ, ಚೀರನಹಳ್ಳಿರಸ್ತೆ, ಮಂಡ್ಯ; ಬಾಂಧವ್ಯ ಮಹಿಳಾ ಮಂಡಳಿ, ಗಾಂಧಿನಗರ, ಮಂಡ್ಯ; ಶಾಂತಿ ಮಹಿಳಾ ಸಮಾಜ, ಕ್ಯಾತನಗೆರೆ; ಮಾತೃಶ್ರೀ ಮಹಿಳಾ ಮಂಡಳಿ, ಇಂಡವಾಳು; ವಿದ್ಯಾ ಮಹಿಳಾ ಸಮಾಜ, ಬಸರಾಳು ; **ಮದ್ದೂರು ತಾಲೂಕು** :- ಭಾರತಿ ಮಹಿಳಾ ಸಮಾಜ, ಭಾರತೀನಗರ; ಮದ್ದೂರಮ್ಮ ಮಹಿಳಾ ಮಂಡಳಿ, ಮದ್ದೂರು ಟೌನ್; ಕಾವೇರಿ ಮಹಿಳಾ ಮಂಡಳಿ, ಅಣ್ಣೂರು; **ಮಳವಳ್ಳಿ ತಾಲೂಕು** : ರೋಹಿಣಿ ಮಹಿಳಾ ಮಂಡಳಿ, ಭ್ರಮರಾಂಬ ಮಹಿಳಾ ಸಮಾಜ, ಬೆಳಕವಾಡಿ; ಅಂಬಿಕಾ ಮಹಿಳಾಮಂಡಳಿ, ಬೆನಮನಹಳ್ಳಿ; ಪಾರ್ವತಿ ಮಹಿಳಾ ಸಮಾಜ, ಪೂರಿಗಾಲಿ; ಜಾಗೃತಿ ಮಹಿಳಾ ಒಕ್ಕೂಟ, ಬೆನಮನಹಳ್ಳಿ; **ಶ್ರೀರಂಗಪಟ್ಟಣ ತಾಲೂಕು** : ರಂಗನಾಯಕಿ ಮಹಿಳಾ ಸಮಾಜ, ಶ್ರೀರಂಗಪಟ್ಟಣ, ರಿವರ್ ವ್ಯಾಲಿ ಗ್ರಾಮೀಣ ಅಭಿವೃದ್ಧಿ ಸಂಸ್ಥೆ, ಶ್ರೀರಂಗಪಟ್ಟಣ, ಸಂಯುಕ್ತ ಮಹಿಳಾ ಮಂಡಳಿ, ಶ್ರೀರಂಗಪಟ್ಟಣ ಹಾಗೂ ಪಾಲಹಳ್ಳಿ; ಮಹಿಳಾ ಮೀನುಗಾರರ ವಿವಿಧೋದ್ದೇಶ ಸಹಕಾರ ಸಂಘ, ಗಂಜಾಂ, ಶ್ರೀರಂಗಪಟ್ಟಣ; **ಪಾಂಡವಪುರ ತಾಲೂಕು** : ಕಲ್ಪನಾ ಮಹಿಳಾ ಮಂಡಳಿ, ಕ್ಯಾತನಹಳ್ಳಿ; ಮಹಿಳಾ ಕೈಗಾರಿಕಾ ವಿವಿಧೋದ್ದೇಶ ಸಹಕಾರ ಸಂಘ (ರಿ) ಕ್ಯಾತನಹಳ್ಳಿ; ಇಂದಿರಾ ಮಹಿಳಾ ಒಕ್ಕೂಟ, ಪಾಂಡವಪುರ, **ಕೆ.ಆರ್.ಪೇಟೆ ತಾಲೂಕು** : ಪ್ರತಿಭಾ ಮಹಿಳಾ ಮಂಡಳಿ, ಹೊಸಹೊಳಲು; ತಾಲೂಕು ಮಹಿಳಾ ಒಕ್ಕೂಟ ಹೊಸಹೊಳಲು; ಪ್ರತಿಭಾ ಮಹಿಳಾ ವಿವಿಧೋದ್ದೇಶ ಸಹಕಾರ ಸಂಘ, ಹೊಸಹೊಳಲು

(ಆಧಾರ: ಜಿಲ್ಲಾ ಕಚೇರಿ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ)

## ಅಂಗವಿಕಲರ ಕಲ್ಯಾಣ

ಸ್ವಾತಂತ್ರ್ಯಾನಂತರ ಕೇಂದ್ರ ಹಾಗೂ ರಾಜ್ಯ ಸರಕಾರಗಳಿಂದ ಅಂಗವಿಕಲರ ಕಲ್ಯಾಣಕ್ಕಾಗಿ ಅನೇಕ ಕಾರ್ಯಕ್ರಮಗಳನ್ನು ರೂಪಿಸಲಾಗಿದೆ. ಅಂಗವಿಕಲರೂ ಎಲ್ಲರಂತೆ ಬದುಕುವುದಕ್ಕೆ ಅಗತ್ಯವಾದ ನೆರವು ನೀಡುವುದು ಮತ್ತು ಅವರಿಗೆ ಬಾಳಿನಲ್ಲಿ ಸಮಾನ ಅವಕಾಶಗಳನ್ನು ಕಲ್ಪಿಸಿಕೊಡುವ ಮೂಲಭೂತ ಹೊಣೆ, ತನ್ನದೆಂಬುದನ್ನು ಮನಗಂಡ, ರಾಜ್ಯ ಸರ್ಕಾರವು ೧-೮-೮೮ ರಂದು ಅಂಗವಿಕಲರ ಕಲ್ಯಾಣಕ್ಕಾಗಿಯೇ ಪ್ರತ್ಯೇಕ ಇಲಾಖೆಯನ್ನು ಸ್ಥಾಪಿಸಿದೆ. ಅಲ್ಲಿಯವರೆಗೂ ಇದಕ್ಕೆ ಸಂಬಂಧಿಸಿದ ಕಾರ್ಯಕ್ರಮಗಳನ್ನು ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯಿಂದ ಜಾರಿಗೊಳಿಸಲಾಗುತ್ತಿತ್ತು. ದೇಹದ ಯಾವುದಾದರೂ ಒಂದು ಅಥವಾ ಹೆಚ್ಚು ಅಂಗಗಳು ಊನವಾಗಿದ್ದು, ಅದರಿಂದ ಅವರ ಶಕ್ತಿ ಸಾಮರ್ಥ್ಯಗಳು ದುರ್ಬಲಗೊಂಡಿದ್ದರೆ, ಅಥವಾ ಯಾವುದೇ ವ್ಯಕ್ತಿ ತನ್ನ ದೈನಂದಿನ ಕ್ರಿಯೆಗಳನ್ನು ಸ್ವತಃ ಮಾಡಿಕೊಳ್ಳಲು ಅಸಮರ್ಥನಾಗಿದ್ದರೆ, ಅಂತಹ ವ್ಯಕ್ತಿಯನ್ನು ಅಂಗವಿಕಲನೆಂದು ಪರಿಗಣಿಸಲಾಗುತ್ತದೆ. ಅಂಗವಿಕಲತೆಯಲ್ಲಿ ದೈಹಿಕ ಅಂಗವಿಕಲರು, ದೃಷ್ಟಿ ದೋಷವುಳ್ಳವರು, ಶ್ರವಣ ದೋಷವುಳ್ಳವರು, ಬುದ್ಧಿಮಾಂದ್ಯರು,

ಕುಷ್ಠರೋಗ ನಿವಾರಿತ ಅಂಗವಿಕಲರು, ಮಾನಸಿಕವಾಗಿ ಅಸ್ವಸ್ಥರು ಮತ್ತು ಬಹು ಅಂಗವಿಕಲತೆಯುಳ್ಳವರು ಎಂದು ವರ್ಗೀಕರಣ ಮಾಡಲಾಗಿದೆ.

ಅಂಗವಿಕಲರಿಗೆ ಶಿಕ್ಷಣ, ಉದ್ಯೋಗ, ತರಬೇತಿ ಮತ್ತು ಪುನರ್ವಸತಿ, ಸಾಮಾಜಿಕ ಭದ್ರತೆ ಹಾಗೂ ಇತರ ಸೌಲಭ್ಯಗಳನ್ನು ಕಲ್ಪಿಸಿ, ಅಂಗವಿಕಲರೂ ತಮ್ಮ ಸಾಮರ್ಥ್ಯವನ್ನು ಎಲ್ಲಾ ಕ್ಷೇತ್ರಗಳಲ್ಲೂ ಪೂರ್ಣವಾಗಿ ಬಳಸಲು ಅವಕಾಶ ಕಲ್ಪಿಸಿಕೊಟ್ಟು ದೇಶದ ಕ್ರಿಯಾಶೀಲ ಪ್ರಜೆಗಳಾಗಲು ಅನುವು ಮಾಡಿಕೊಡಬೇಕೆಂಬ ಉದ್ದೇಶದಿಂದ, ಅಂಗವಿಕಲ ವ್ಯಕ್ತಿಗಳ (ಸಮಾನ ಅವಕಾಶ, ಹಕ್ಕುಗಳ ಸಂರಕ್ಷಣೆ ಮತ್ತು ಪೂರ್ಣ ಭಾಗವಹಿಸುವಿಕೆ)_ ಅಧಿನಿಯಮ ೧೯೯೫ರ ಕಾಯಿದೆಯನ್ನು ಮಾಡಲಾಗಿದೆ. ನಗರ ಪ್ರದೇಶದಲ್ಲಿರುವವರಿಗೆ ಪೋಷಕರ ಆದಾಯ ಮಿತಿ ೨೪,೦೦೦ರೂಪಾಯಿಗಳು, ಗ್ರಾಮಾಂತರ ಪ್ರದೇಶದಲ್ಲಿರುವವರಿಗೆ ವಾರ್ಷಿಕ ಆದಾಯ ಮಿತಿ ೧೧,೫೦೦ ರೂಪಾಯಿಗಳು, ಎಂದೂ ನಿಗದಿಪಡಿಸಿದ್ದು ಈ ಮಿತಿಯೊಳಗಿರುವವರು ಇದರ ಪ್ರಯೋಜನವನ್ನು ಪಡೆಯಬಹುದು.

**ವಿದ್ಯಾರ್ಥಿ ವೇತನ :** ಸಂಗೀತ, ವರ್ಣಚಿತ್ರ, ಛಾಯಾಚಿತ್ರ, ರೇಖಾಚಿತ್ರ, ಮತ್ತಿತರ ಕಲೆಗಳಲ್ಲಿ ತರಬೇತಿ ಪಡೆಯುತ್ತಿರುವ ಹಾಗೂ ಒಂದರಿಂದ ಎಂಟನೇ ತರಗತಿಯಲ್ಲಿ ಓದುತ್ತಿದ್ದು, ಕುಟುಂಬದ ವಾರ್ಷಿಕ ಆದಾಯ ೧೦,೦೦೦ ರೂ.ಗಳಿಗಿಂತ ಕಡಿಮೆ ಇರುವ ಮಕ್ಕಳಿಗೆ, ರಾಜ್ಯ ಸರ್ಕಾರವು ರೂ.೨೫ ರಿಂದ ೩೫ ರವರೆಗೆ ವಿದ್ಯಾರ್ಥಿ ವೇತನವನ್ನು ನೀಡುತ್ತದೆ. ಇದೇ ರೀತಿ ಒಂಬತ್ತರಿಂದ ಸ್ನಾತಕೋತ್ತರದವರೆಗಿನ ತರಗತಿಗಳಲ್ಲಿ ಓದುತ್ತಿರುವ ವಿದ್ಯಾರ್ಥಿಗಳಿಗೂ ಅವರ ಅಧ್ಯಯನದ ತರಗತಿಗಳನ್ನು ಅವಲಂಬಿಸಿ ರೂಪಾಯಿ ೩೫ ರಿಂದ ರೂಪಾಯಿ ೨೪೦ ರವರೆಗೆ ಕೇಂದ್ರ ಸರ್ಕಾರದಿಂದ ವಿದ್ಯಾರ್ಥಿ ವೇತನ ನೀಡಲು ಅವಕಾಶವಿದೆ. ವಿದ್ಯಾರ್ಥಿ ವೇತನದ ಜೊತೆಗೆ ಅಂಥ ವಿದ್ಯಾರ್ಥಿಗಳಿಗಾಗಿ, ಓದುವ ಭತ್ಯೆಯನ್ನೂ ಮತ್ತು ಶಸ್ತ್ರಚಿಕಿತ್ಸೆಗೊಳಗಾದ ಅಂಗವಿಕಲ ವಿದ್ಯಾರ್ಥಿಗಳಿಗೆ ಸಾರಿಗೆ ಭತ್ಯೆಯನ್ನೂ ನೀಡಲಾಗುವುದು. ಈ ಯೋಜನೆಯು ಜಿಲ್ಲೆಯಲ್ಲಿ ೧೯೮೪-೮೫ ರಲ್ಲಿ ಪ್ರಾರಂಭವಾಗಿ ೨೦೦೧-೦೨ ರವರೆಗೆ ವಿದ್ಯಾರ್ಥಿ ವೇತನದ ಸೌಲಭ್ಯ ಪಡೆದವರ ಸಂಖ್ಯೆ ಮತ್ತು ವೆಚ್ಚದ ವಿವರವನ್ನು ಮುಂದಿನ ಪಟ್ಟಿಯಲ್ಲಿ ಕೊಡಲಾಗಿದೆ.

**ಕೋಷ್ಟಕ ೧೬.೩೩ ವಿದ್ಯಾರ್ಥಿ ವೇತನದ ಸೌಲಭ್ಯ ಪಡೆದವರ ಸಂಖ್ಯೆ ಮತ್ತು ವೆಚ್ಚದ ವಿವರ**

| ವರ್ಷ | ರಾಜ್ಯ ಸರ್ಕಾರದ ವಿದ್ಯಾರ್ಥಿ ವೇತನ | | ಕೇಂದ್ರ ಸರ್ಕಾರದ ವಿದ್ಯಾರ್ಥಿ ವೇತನ | |
|---|---|---|---|---|
| | ಫಲಾನುಭವಿಗಳು | ವೆಚ್ಚ (ರೂ.ಗಳಲ್ಲಿ) | ಫಲಾನುಭವಿಗಳು | ವೆಚ್ಚ (ರೂ.ಗಳಲ್ಲಿ) |
| ೧೯೯೭-೯೮ | ೫೫೭ | ೧,೫೭,೯೫೦-೦೦ | ೧೬೮ | ೧,೪೯,೪೫೦-೦೦ |
| ೧೯೯೮-೯೯ | ೭೨೦ | ೩,೪೦,೭೦೦-೦೦ | - | - |
| ೧೯೯೯-೨೦೦೦ | ೬೦೯ | ೨,೬೩,೮೬೦-೦೦ | - | - |
| ೨೦೦೦-೦೧ | ೬೦೦ | ೩,೦೦,೦೦೦-೦೦ | ೪೯೪ | ೩,೦೦,೦೦೦-೦೦ |
| ೨೦೦೧-೦೨ | ೫೪೬ | ೪,೮೨,೦೦೦-೦೦ | ೪೯೮ | ೪,೮೨,೦೦೦-೦೦ |

**ಪ್ರತಿಭಾವಂತ ಅಂಗವಿಕಲ ವಿದ್ಯಾರ್ಥಿಗಳಿಗೆ ಬಹುಮಾನ ಯೋಜನೆ :** ಶೇ.೬೦ಕ್ಕಿಂತ ಹೆಚ್ಚು ಅಂಕಗಳಿಸಿ ತೇರ್ಗಡೆಯಾದ ಪ್ರತಿಭಾವಂತ ಅಂಗವಿಕಲರನ್ನು ಪ್ರೋತ್ಸಾಹಿಸಲು ಬಹುಮಾನ ನೀಡುವ ವಿಶಿಷ್ಟ ಯೋಜನೆಯನ್ನೂ ಇಲಾಖೆಯು ಅನುಷ್ಠಾಗೊಳಿಸುತ್ತಿದೆ. ಎಸ್.ಎಸ್.ಎಲ್.ಸಿ. ಪಾಸಾದವರಿಗೆ ರೂ.೫೦೦; ಪಿ.ಯು.ಸಿ. ಪಾಸಾದವರಿಗೆ

ರೂ.೭೦೦; ಸ್ನಾತಕೋತ್ತರ ಪದವಿ ಮತ್ತು ವೈದ್ಯಕೀಯ ಪದವಿಗಳಲ್ಲಿ ಪಾಸಾದವರಿಗೆ ರೂ.೧೫೦೦ ರಂತೆ ಈ ಬಹುಮಾನವನ್ನು ನೀಡಲಾಗುತ್ತದೆ. ಈ ನಿಟ್ಟಿನಲ್ಲಿ ೧೯೯೯–೨೦೦೦ ರಲ್ಲಿ ಜಿಲ್ಲೆಯಲ್ಲಿ ಹತ್ತೊಂಬತ್ತು ಫಲಾನುಭವಿಗಳಿಗಾಗಿ ೧೧,೫೦೦ ರೂ.ಗಳನ್ನು ಖರ್ಚು ಮಾಡಲಾಗಿದೆ.

**ಸ್ವಯಂ ಉದ್ಯೋಗ ಯೋಜನೆ (ಆಧಾರ ಯೋಜನೆ):** ಮೂಲಧನ ಯೋಜನೆಯಡಿ ಸ್ವಯಂ ಉದ್ಯೋಗ ಆರಂಭಿಸಲು ಕರ್ನಾಟಕ ರಾಜ್ಯ ಹಣಕಾಸು ನಿಗಮದ ಮೂಲಕ ರೂ.೫೦,೦೦೦ದವರೆಗೆ ಸಾಲಸೌಲಭ್ಯ ಹಾಗೂ ಇಲಾಖೆಯಿಂದ ಈ ಸಾಲದಲ್ಲಿ ಶೇಕಡ ೨೫ರಷ್ಟು ಅಥವಾ ಗರಿಷ್ಟ ೬೨೫೦ ರೂ.ಗಳ ಸಹಾಯಧನ ಲಭ್ಯವಿರುತ್ತದೆ. ೯೯–೨೦೦೦ನೇ ಸಾಲಿನಲ್ಲಿ ಬ್ರೇಲ್ ಸಲಕರಣೆ ಮತ್ತು ಬ್ರೇಲ್ ವಾಚ್‌ಗಳ ಹಂಚಿಕೆಗಾಗಿ, ೨೨ ಫಲಾನುಭವಿಗಳಿಗೆ ೭೨,೭೨೦ ರೂ.ಗಳ ಧನಸಹಾಯ, ಟೆಲಿಫೋನ್ ಬೂತ್‌ಗಳ ವಿತರಣೆ ಹಾಗೂ ಬ್ರೇಲ್ ಪ್ಲೇಟ್ಸ್ ಹಂಚಿಕೆಗಾಗಿ ಒಬ್ಬ ವ್ಯಕ್ತಿಗೆ ೧೨೦೦೦ ರೂ.ಗಳನ್ನು ಖರ್ಚು ಮಾಡಲಾಗಿದೆ.

**ಪುನರ್ವಸತಿ ಯೋಜನೆ :** ಅಂಗವಿಕಲರ ಆರ್ಥಿಕ ಪುನರ್ವಸತಿಗಾಗಿ ಈ ಯೋಜನೆಯನ್ನು ೧೯೯೨ರ ಮೇ ತಿಂಗಳಲ್ಲಿ ರಾಜ್ಯದಲ್ಲಿ ಪ್ರಾರಂಭಿಸಲಾಗಿದೆ. ಅಗತ್ಯವಿರುವ ಸಾಧನ ಸಲಕರಣೆಗಳನ್ನು ಖರೀದಿಸಲು ಈ ಯೋಜನೆಯಡಿ ಆರ್ಥಿಕ ನೆರವು ನೀಡಲಾಗುತ್ತದೆ. ಕುಟುಂಬದ ವಾರ್ಷಿಕ ಆದಾಯ ಗ್ರಾಮೀಣರಿಗೆ ರೂ.೧೧,೫೦೦ ಮತ್ತು ನಗರವಾಸಿಗಳಿಗೆ ರೂ.೨೪,೦೦೦ ದೊಳಗೆ ಇದ್ದಲ್ಲಿ ಅಂತಹವರು ಈ ಧನಸಹಾಯ ಪಡೆಯಲು ಅರ್ಹರಾಗುತ್ತಾರೆ. ರಾಜೀವ್ ಪೂರ್ಣಾಂಗ ಯೋಜನೆಯಡಿ ಅಂಗವಿಕಲರಿಗೆ ದೂರವಾಣಿ ಬೂತ್‌ಗಳನ್ನು ವಿತರಣೆ ಮಾಡಲೂ ನೆರವು ನೀಡಲಾಗುತ್ತದೆ. ನಾಗಮಂಗಲ ತಾಲೂಕಿನಲ್ಲಿ ಒಬ್ಬ ಅಂಗವಿಕಲನಿಗೆ ರೂ.೧೨೦೦೦ ವೆಚ್ಚದಲ್ಲಿ ೯೯–೨೦೦೦ ಸಾಲಿನಲ್ಲಿ ಈ ನೆರವನ್ನು ನೀಡಲಾಗಿದೆ.

**ಸ್ವಯಂ ಉದ್ಯೋಗ ಆಧಾರ ಯೋಜನೆ :** ಅಂಗವಿಕಲರು ಸ್ವಯಂ ಉದ್ಯೋಗ ಕೈಗೊಂಡು ಸಣ್ಣ ವ್ಯಾಪಾರದಲ್ಲಿ ಜೀವನ ಸಾಗಿಸಲು ಅನುಕೂಲವಾಗುವಂತೆ 'ಆಧಾರ' ಎಂಬ ಹೊಸ ಯೋಜನೆಯನ್ನು ಅನುಷ್ಠಾನಕ್ಕೆ ತರಲಾಗಿದೆ. ಇದರಲ್ಲಿ ಪ್ರತಿ ಫಲಾನುಭವಿಗೂ ರೂ.೬೦೦೦ ಗಳ ಉಚಿತ ಪೆಟ್ಟಿಗೆ ಅಂಗಡಿ ಹಾಗೂ ರೂ.೬೦೦೦ ಗಳ ನಿರ್ವಹಣಾ ಬಂಡವಾಳವನ್ನು ಸಾಲದ ರೂಪದಲ್ಲಿ ನೀಡಲಾಗುತ್ತದೆ. ೧೯೯೭–೯೮ನೇ ಸಾಲಿನಿಂದ ೨೦೦೧–೦೨ನೇ ಸಾಲಿನವರೆಗೆ ಈ ಕಾರ್ಯಕ್ರಮದಡಿ ನೆರವು ಪಡೆದವರ ಸಂಖ್ಯೆ ಮತ್ತು ಮಾಡಲಾದ ಖರ್ಚಿನ ವಿವರಗಳು ಹೀಗಿವೆ.

**ಕೋಷ್ಟಕ ೧೬.೫೪ ಯೋಜನೆಯಡಿ ನೆರವು ಪಡೆದವರ ಸಂಖ್ಯೆ ಮತ್ತು ಖರ್ಚಿನ ವಿವರ**

| ವರ್ಷ | ಫಲಾನುಭವಿಗಳ ಸಂಖ್ಯೆ | ವೆಚ್ಚ (ಲಕ್ಷ ರೂ.ಗಳಲ್ಲಿ) |
|---|---|---|
| ೧೯೯೭–೯೮ | ೭೦ | ೭.೦೦ |
| ೧೯೯೮–೯೯ | ೨೦ | ೨.೦೦ |
| ೧೯೯೯–೨೦೦೦ | ೫೦ | ೫.೬೦ |
| ೨೦೦೦–೦೧ | ೫೮ | ೪.೫೨ |
| ೨೦೦೧–೦೨ | ೫೦ | ೫.೬೦ |

**ಬುದ್ಧಿಮಾಂದ್ಯ ಮಕ್ಕಳ ಪೋಷಕರಿಗೆ ವಿಮಾ ಯೋಜನೆ :** ಈ ಯೋಜನೆಯಡಿ ಬುದ್ಧಿಮಾಂದ್ಯ ಮಕ್ಕಳ ತಂದೆ–ತಾಯಿ ಅಥವಾ ಪೋಷಕರಿಗೆ ಜೀವವಿಮಾ ನಿಗಮದ ಮೂಲಕ ಜೀವವಿಮೆ ಮಾಡಿಸಲಾಗುತ್ತದೆ. ತಂದೆ

ತಾಯಿ ಅಥವಾ ಪೋಷಕರ ಮರಣದ ನಂತರ ಮಕ್ಕಳಿಗೆ ರೂ.೧೫೦ ರಿಂದ ರೂ.೨೦೦ ರವರೆಗೆ ಮಾಸಿಕ ಧನ ಸಹಾಯವನ್ನು ಜೀವವಿಮಾ ನಿಗಮವು ನೀಡುತ್ತದೆ. ಮಂಡ್ಯ ಜಿಲ್ಲೆಯಲ್ಲಿ ೧೯೯೭-೯೮ ನೇ ಸಾಲಿನಲ್ಲಿ ೯೬ ಮಕ್ಕಳು, ೯೯-೨೦೦೦ ನೇ ಸಾಲಿನಲ್ಲಿ ೧೦೬ ಮಕ್ಕಳು ಈ ಸೌಲಭ್ಯವನ್ನು ಪಡೆದಿದ್ದಾರೆ.

**ತಾಂತ್ರಿಕ ಶಿಕ್ಷಣ ಪ್ರವೇಶಕ್ಕೆ ಮೀಸಲಾತಿ:** ಪ್ರತಿಭಾವಂತ ಅಂಗವಿಕಲ ವಿದ್ಯಾರ್ಥಿಗಳಿಗೆ ಉತ್ತಮ ಭವಿಷ್ಯವನ್ನು ರೂಪಿಸಲು ವೃತ್ತಿಪರ ಶಿಕ್ಷಣಗಳಾದ ಇಂಜಿನಿಯರಿಂಗ್ ಹಾಗೂ ಡಿಪ್ಲೋಮೊಗಳಂತಹ ತಾಂತ್ರಿಕ ಶಿಕ್ಷಣ ಪ್ರವೇಶಗಳಲ್ಲಿ ಕೆಲವು ಸ್ಥಾನಗಳನ್ನು ಇವರಿಗಾಗಿ ಮೀಸಲಿಡಲಾಗಿದೆ.

**ನೇಮಕಾತಿಯಲ್ಲಿ ಮೀಸಲಾತಿ:** ಭಾರತ ಸರ್ಕಾರವು ಅಂಗವಿಕಲರಿಗಾಗಿ ಸರ್ಕಾರದ ನೇಮಕಾತಿಯಲ್ಲಿ ಶೇ.ಮೂರರಂತೆ ಹುದ್ದೆಗಳನ್ನು ಮೀಸಲಾಗಿರಿಸಿತು. ಅದರಂತೆ ರಾಜ್ಯ ಸರಕಾರವು ಡಿಸೆಂಬರ್ ೧೯೮೬ ರಿಂದ ಜೂನ್ ೧೯೯೫ರವರೆಗೆ ಶೇ.ನಾಲ್ಕರಂತೆಯೂ, ೨೦.೬.೧೯೯೫ ರಿಂದ ಈವರೆಗೆ ಶೇ. ಐದರಂತೆ, ಸಿ. ಮತ್ತು ಡಿ ದರ್ಜೆಯ ಹುದ್ದೆಗಳನ್ನು ಅಂಗವಿಕಲರಿಗಾಗಿ ಮೀಸಲಿರಿಸುವಂತೆ ಆದೇಶ ಹೊರಡಿಸಿದೆ. ಈ ಆದೇಶದನ್ವಯ ಎಲ್ಲಾ ವಿಧದ ಅಂಗವಿಕಲರು ನಿರ್ವಹಿಸಬಹುದಾದ ಹುದ್ದೆಗಳನ್ನು ಗುರುತಿಸಲಾಗಿದೆ. ಈ ಎಲ್ಲಾ ಸೌಲಭ್ಯಗಳಲ್ಲದೆ, ಅಂಗವಿಕಲರ ಚಲನವಲನಗಳನ್ನು ಸುಧಾರಿಸಲು, ಸರ್ಕಾರವು ಸಾಧನ ಸಲಕರಣೆಗಳ ಪೂರೈಕೆಗಾಗಿ ನೆರವು ನೀಡುತ್ತದೆ. ಜೀವನೋಪಾಯಕ್ಕೆ ಮಾರ್ಗವಿಲ್ಲದ ಅಂಗವಿಕಲರು ತಿಂಗಳಿಗೆ ರೂ.೫೦ ನಿರ್ವಹಣಾ ಭತ್ಯೆಯನ್ನೂ ಪಡೆಯಬಹುದಾಗಿದೆ. ತಜ್ಞ ವೈದ್ಯರ ಸಲಹೆಯ ಮೇರೆಗೆ ಶ್ರವಣ ಸಾಧನ, ಬ್ರೇಲ್ ಗಡಿಯಾರ, ತ್ರಿಚಕ್ರ ವಾಹನ, ಕ್ರಚ್ಚಸ್, ಕ್ಯಾಲಿಪರ್ಸ್, ಗಾಲಿಕುರ್ಚಿ, ಕೃತಕ ಅಂಗಾಂಗ ಮೊದಲಾದ ಸಾಧನ ಸಲಕರಣೆಗಳನ್ನು ಅಂಗವಿಕಲರಿಗೆ, ಅವರ ವಾರ್ಷಿಕ ವರಮಾನ ಮಿತಿಗೆ ಒಳಪಟ್ಟು ಉಚಿತವಾಗಿ ಒದಗಿಸಲಾಗುತ್ತದೆ. ಸರ್ಕಾರವು ಕೆಲವು ಜಿಲ್ಲೆಗಳಲ್ಲಿ ಇವರಿಗಾಗಿ ವಸತಿ ಗೃಹಗಳನ್ನೂ ಪ್ರಾರಂಭಿಸಿದ್ದು, ಅಂಗವಿಕಲರು ಅವುಗಳ ಪ್ರಯೋಜನ ಪಡೆಯತೊಡಗಿದ್ದಾರೆ.

### ಇತರ ಕಲ್ಯಾಣ ಯೋಜನೆಗಳು

**ಕಡಿಮೆ ದರದಲ್ಲಿ ಬಟ್ಟೆ ವಿತರಣೆ ಯೋಜನೆ :** ಕರ್ನಾಟಕ ಸರ್ಕಾರವು ೧೯೮೫ರ ೧೫ನೇ ಆಗಸ್ಟ್ ರಂದು ಬಡತನ ರೇಖೆಯಿಂದ ಕೆಳಮಟ್ಟದಲ್ಲಿರುವ ದುರ್ಬಲ ವರ್ಗದ, ೧೯ ವರ್ಷಕ್ಕೆ ಮೇಲ್ಪಟ್ಟ ಗಂಡಸರಿಗೆ ಮತ್ತು ಹೆಂಗಸರಿಗೆ ಕಡಿಮೆ ದರದಲ್ಲಿ ಬಟ್ಟೆ ವಿತರಣೆ ಯೋಜನೆಯನ್ನು ಅನುಷ್ಠಾನಗೊಳಿಸಿತ್ತು. ಮಂಡ್ಯ ಜಿಲ್ಲೆಯಲ್ಲಿ ಈ ಯೋಜನೆಯನ್ನು, ೧೯೮೫ರ ನವೆಂಬರ್ ತಿಂಗಳಿನಿಂದ ಜಾರಿಗೆ ತರಲಾಗಿದೆ. ಈ ಯೋಜನೆಯಂತೆ ಗಂಡಸರಿಗೆ ೨೫ ರೂಪಾಯಿಗೆ ಒಂದು ಜೊತೆ ಪಂಚೆ (ಧೋತಿ) ಮತ್ತು ಒಂದು ಷರ್ಟ್ ಬಟ್ಟೆಯನ್ನೂ, ಹೆಂಗಸರಿಗೆ ೨೫ ರೂಪಾಯಿಗೆ ಒಂದು ಜೊತೆ ಸೀರೆ ಮತ್ತು ಒಂದು ಜೊತೆ ರವಿಕೆ ಬಟ್ಟೆಗಳನ್ನೂ ವಿತರಿಸಲಾಗುತ್ತಿದ್ದು, ಸಮಗ್ರ ಗ್ರಾಮೀಣ ಅಭಿವೃದ್ಧಿ ಯೋಜನೆಯಡಿ ಬರುವ ಹಾಗೂ ಹಸಿರು ಪಡಿತರ ಚೀಟಿಯ ಸೌಲಭ್ಯವನ್ನು ಪಡೆದ ಎಲ್ಲರಿಗೂ ಈ ಯೋಜನೆಯು ಅನ್ವಯವಾಗುತ್ತದೆ.

೯೭-೯೮ನೇ ಸಾಲಿನಲ್ಲಿ ಒಟ್ಟು ೫೧,೮೦೦ ಪುರುಷರಿಗೆ ಧೋತಿ – ಅಂಗಿವಸ್ತ್ರವನ್ನು ಹಾಗೂ ೭೪,೦೦೦ ಮಹಿಳೆಯರಿಗೆ ಸೀರೆ ರವಿಕೆಗಳನ್ನು ವಿತರಿಸಲಾಗಿದ್ದು, ವಿತರಣೆಯ ವಿವರ ಈ ಮುಂದಿನಂತಿದೆ.

**ಕೋಷ್ಟಕ ೧೬.೩೫ ಕಡಿಮೆ ದರದ ಬಟ್ಟೆ ವಿತರಣೆ ವಿವರ**

| ತಾಲೂಕುಗಳು | ವಿತರಣೆ ವಿವರ | | ಸರ್ಕಾರದ ವೆಚ್ಚ |
|---|---|---|---|
| | ಧೋತಿ | ಸೀರೆ | |
| ಮಂಡ್ಯ | ೪,೧೦೦ | ೧೨,೦೦೦ | ೫,೮೦,೦೦೦ |
| ಶ್ರೀರಂಗಪಟ್ಟಣ | ೭,೫೦೦ | ೧೨,೦೦೦ | ೬,೨೪,೦೦೦ |
| ಕೃಷ್ಣರಾಜ ಪೇಟೆ | ೨,೧೦೦ | ೧೦,೦೦೦ | ೪,೨೦,೦೦೦ |
| ನಾಗಮಂಗಲ | ೧೪,೧೦೦ | ೧೦,೦೦೦ | ೭,೦೮,೦೦೦ |
| ಪಾಂಡವಪುರ | ೨,೧೦೦ | ೧೦,೦೦೦ | ೪,೨೦,೦೦೦ |
| ಮಳವಳ್ಳಿ | ೧೦,೮೦೦ | ೧೦,೦೦೦ | ೬,೨೯,೦೦೦ |
| ಮದ್ದೂರು | ೧೧,೧೦೦ | ೧೦,೦೦೦ | ೬,೩೬,೦೦೦ |
| ಒಟ್ಟು | ೫೧,೮೦೦ | ೭೪,೦೦೦ | ೪೦,೧೭,೦೦೦ |

೧೯೯೮–೯೯ ನೇ ಸಾಲಿನಲ್ಲಿ ಮದ್ದೂರು ತಾಲೂಕಿನಲ್ಲಿ ಒಟ್ಟು ೩೦೦೦ ಪುರುಷರಿಗೆ ಧೋತಿ, ಅಂಗಿವಸ್ತ್ರವನ್ನು ಹಾಗೂ ೯,೦೦೦ ಮಹಿಳೆಯರಿಗೆ ಸೀರೆ ಮತ್ತು ರವಿಕೆಯನ್ನು ವಿತರಿಸಲಾಗಿದೆ.

೧೯೯೯–೨೦೦೦ನೇ ಸಾಲಿನಲ್ಲಿ ಜಿಲ್ಲೆಯ ಮೂರು ತಾಲೂಕುಗಳಲ್ಲಿ ಒಟ್ಟು ೧೫೦೦೦ ಪುರುಷರಿಗೆ ಧೋತಿ, ಅಂಗಿವಸ್ತ್ರವನ್ನು ಹಾಗೂ ೨೧,೦೦೦ ಮಹಿಳೆಯರಿಗೆ ಸೀರೆ ಮತ್ತು ರವಿಕೆಯನ್ನು ವಿತರಿಸಲಾಗಿದ್ದು, ಅದರ ವಿವರ ಮುಂದಿನಂತಿದೆ.

**ಕೋಷ್ಟಕ ೧೬.೩೬ ಕಡಿಮೆ ದರದ ಬಟ್ಟೆ ವಿತರಣೆ ವಿವರ**

| ತಾಲೂಕುಗಳ ಸಂಖ್ಯೆ | ವಿತರಣೆ ವಿವರ | | ಸರ್ಕಾರದ ವೆಚ್ಚ |
|---|---|---|---|
| | ಧೋತಿ | ಸೀರೆ | |
| ಕೃಷ್ಣರಾಜ ಪೇಟೆ | ೬,೦೦೦ | ೬,೦೦೦ | ೪,೫೪,೦೦೦–೦೦ |
| ನಾಗಮಂಗಲ | ೬,೦೦೦ | ೬,೦೦೦ | ೪,೫೩,೦೦೦–೦೦ |
| ಪಾಂಡವಪುರ | ೩,೦೦೦ | ೯,೦೦೦ | ೫,೦೩,೦೦೦–೦೦ |
| ಒಟ್ಟು | ೧೫,೦೦೦ | ೨೧,೦೦೦ | ೧೪,೧೦,೦೦೦–೦೦ |

**ಬಡತನ ರೇಖೆಗಿಂತ ಕೆಳಗಿರುವ ಕುಟುಂಬಗಳಿಗೆ ವಿಶೇಷ ಪಡಿತರ ಚೀಟಿಗಳು:** ಗ್ರಾಮಾಂತರ ಪ್ರದೇಶಗಳಲ್ಲಿ ಕಡು ಬಡವರನ್ನು ಗುರುತಿಸಿ, ಅವರಿಗೆ ಕಡಿಮೆ ದರದಲ್ಲಿ ಆಹಾರ ಧಾನ್ಯಗಳನ್ನು ಕೊಳ್ಳಲು ಅನುಕೂಲವಾಗುವಂತೆ ಹಸಿರು ಬಣ್ಣದ ಪಡಿತರ ಚೀಟಿಯನ್ನು ಒದಗಿಸುವ ಯೋಜನೆಯನ್ನು ಕರ್ನಾಟಕ ಸರ್ಕಾರವು ೧೯೮೭ರ ನವೆಂಬರ್ ಒಂದರಿಂದ ಆರಂಭಿಸಿತು. ಮುಂದೆ ಈ ಪಡಿತರ ಚೀಟಿ ತ್ರಿವರ್ಣದ್ದಾಯಿತು. ಮಂಡ್ಯ ಜಿಲ್ಲೆಯಲ್ಲಿ ತ್ರಿವರ್ಣ ಪಡಿತರ ಚೀಟಿ ಸೌಲಭ್ಯವನ್ನು ೧೯೯೨ರ ಆಗಸ್ಟ್ ಹದಿನೈದರಂದು ಪ್ರಾರಂಭಿಸಲಾಗಿ, ಇದು ಅಕ್ಟೋಬರ್ ೧೯೯೫ರವರೆಗೆ ಚಾಲ್ತಿಯಲ್ಲಿತ್ತು. ನಂತರ ೧೯೯೫ರ ನವೆಂಬರ್ ಒಂದರಿಂದ ಪಡಿತರ ಚೀಟಿಗಳನ್ನು ಬದಲಾಯಿಸಿ, ಮಹಾತ್ಮ ಗಾಂಧೀಜಿಯ ಭಾವಚಿತ್ರವಿರುವ ಹಸಿರು ಪಡಿತರ ಚೀಟಿಗಳನ್ನು ವಿತರಿಸಲಾಗುತ್ತಿದೆ. ಅಲ್ಲಿಂದೀಚೆಗೆ ಈ ಹಸಿರು

ಕಾರ್ಡುಗಳೇ ಜಾರಿಯಲ್ಲಿವೆ. ೧೯೯೫ರ ಡಿಸೆಂಬರ್ ೨೭ರಿಂದ ಈ ಸೌಲಭ್ಯವನ್ನು ಭೂರಹಿತ ಕೃಷಿ ಕಾರ್ಮಿಕರಿಗೂ ವಿಸ್ತರಿಸಲಾಗಿದೆ. ಈ ಕಾರ್ಡ್‌ಗಳನ್ನು ಹೊಂದಿರುವವರಿಗೆ ಕೆಲವು ಆಹಾರ ಧಾನ್ಯಗಳನ್ನು ರಿಯಾಯಿತಿ ದರದಲ್ಲಿ ಒದಗಿಸಲಾಗುತ್ತದೆ. ಹಿಂದಿನ ಮೂರು ವರ್ಷಗಳಲ್ಲಿ ಈ ಪಡಿತರ ಚೀಟಿ ಸೌಲಭ್ಯವನ್ನು ಪಡೆದ ಫಲಾನುಭವಿಗಳ ತಾಲೂಕುವಾರು ವಿವರವನ್ನು ಈ ಮುಂದೆ ನೀಡಲಾಗಿದೆ.

**ಕೋಷ್ಟಕ ೧೬.೩೭ ೧೯೯೭–೧೯೯೮ ರಿಂದ ೧೯೯೯–೨೦೦೨ ಹಾಗೂ ೨೦೦೧–೦೨ರ ಸಾಲಿನಲ್ಲಿ ಈ ಯೋಜನೆಯಡಿ ಪ್ರಯೋಜನ ಪಡೆದ (ಗ್ರಾಮಾಂತರ ಹಾಗೂ ಪಟ್ಟಣವಾಸಿ) ಫಲಾನುಭವಿಗಳ ತಾಲ್ಲೂಕುವಾರು ವಿವರ**

| ಗ್ರಾಮಾಂತರ | ೧೯೯೭–೯೮ | ೧೯೯೮–೯೯ | ೧೯೯೯–೦೦ | ೨೦೦೧–೦೨ | |
|---|---|---|---|---|---|
| | | | | ಅಂತ್ಯೋದಯ | ಹಸಿರು ಪಡಿತರ ಚೀಟಿ |
| ಮಂಡ್ಯ ಗ್ರಾಮಾಂತರ | ೩೬,೨೩೮ | ೪೦,೭೨೨ | ೪೨,೪೭೨ | ೨೪೬೪ | ೩೮,೬೮೮ |
| ಮದ್ದೂರು ಗ್ರಾಮಾಂತರ | ೩೭,೨೫೭ | ೪೨,೮೩೨ | ೪೩,೭೫೭ | ೨೨೪೯ | ೩೬,೯೯೬ |
| ಮಳವಳ್ಳಿ ಗ್ರಾಮಾಂತರ | ೨೮,೭೩೬ | ೬೫,೬೦೯ | ೪೬,೨೫೦ | ೨೫೮೫ | ೪೩,೦೪೯ |
| ಶ್ರೀರಂಗಪಟ್ಟಣ ಗ್ರಾಮಾಂತರ | ೨೩,೯೬೨ | ೨೭,೬೪೩ | ೨೭,೬೪೩ | ೧೨೧೬ | ೩೨,೫೮೧ |
| ಪಾಂಡವಪುರ ಗ್ರಾಮಾಂತರ | ೩೨,೮೪೭ | ೩೪,೬೪೭ | ೩೪,೮೦೭ | ೧೪೯೫ | ೩೨,೫೮೧ |
| ಕೃಷ್ಣರಾಜ ಪೇಟೆ ಗ್ರಾಮಾಂತರ | ೩೭,೮೦೩ | ೪೨,೫೦೩ | ೪೨,೫೦೩ | ೧೬೦೪ | ೩೫,೩೯೨ |
| ನಾಗಮಂಗಲ ಗ್ರಾಮಾಂತರ | ೩೭,೬೬೭ | ೪೦,೪೮೪ | ೪೦,೬೨೨ | ೧೨೫೫ | ೩೪,೮೭೮ |
| ಒಟ್ಟು (ಅ) | ೨,೩೪,೫೪೦ | ೨,೭೪,೪೪೦ | ೨,೭೮,೦೫೪ | ೧೨೮೬೮ | ೨,೪೬,೪೮೦ |
| ಪಟ್ಟಣಗಳು | | | | | |
| ಮಂಡ್ಯ ನಗರ | ೬,೭೫೪ | ೬,೭೫೪ | ೬,೭೫೪ | ೧೦೧೫ | ೫,೭೫೦ |
| ಮದ್ದೂರು ಪಟ್ಟಣ | ೩,೦೩೧ | ೩,೦೩೧ | ೩,೦೩೧ | ೪೫೫ | ೨,೫೭೧ |
| ಮಳವಳ್ಳಿ ಪಟ್ಟಣ | ೧,೫೮೨ | ೧,೫೮೨ | ೧,೧೮೦ | ೧೭೭ | ೧,೦೦೩ |
| ಶ್ರೀರಂಗಪಟ್ಟಣ ಪಟ್ಟಣ | ೧,೯೦೬ | ೧,೯೦೬ | ೧,೯೦೬ | ೨೮೫ | ೧,೬೪೧ |
| ಪಾಂಡವಪುರ ಪಟ್ಟಣ | ೨,೭೮೦ | ೨,೭೩೦ | ೨,೭೩೦ | ೩೯೯ | ೨,೨೬೧ |
| ಒಟ್ಟು (ಆ) | ೧೬,೦೫೩ | ೧೬,೦೦೩ | ೧೫,೬೦೧ | ೨೩೩೧ | ೧೩,೨೨೬ |
| ಒಟ್ಟು (ಅ+ಆ) | ೨,೫೦,೫೯೩ | ೨೯೦,೪೪೩ | ೨,೯೩,೬೫೫ | ೧೫೧೯೯ | ೨,೫೯,೭೦೬ |

ಹಸಿರು ಪಡಿತರ ಚೀಟಿಯ ನಂತರ ೨೦೦೧ನೇ ಸಾಲಿನಿಂದ ಕಡುಬಡವರಿಗಾಗಿ ಕೇಂದ್ರ ಸರ್ಕಾರದ 'ಅಂತ್ಯೋದಯ ಅನ್ನ' ಯೋಜನೆಯನ್ನು ಪ್ರಾರಂಭಿಸಿ, ೧೫,೧೯೯ ಕುಟುಂಬಗಳಿಗೆ ಈ ಸವಲತ್ತನ್ನು ಒದಗಿಸಲಾಯಿತು. ಇದೇ ಮಾದರಿಯಲ್ಲಿ ಕಡುಬಡವರನ್ನು ಗುರುತಿಸಿ ಹಳದಿ ಕಾರ್ಡು ನೀಡುವ ಯೋಜನೆಯನ್ನು ರಾಜ್ಯ ಸರ್ಕಾರವು ಜಾರಿಗೊಳಿಸುತ್ತಿದೆ. ಆ ಪ್ರಕಾರ ಜಿಲ್ಲೆಯಲ್ಲಿ ಸಮೀಕ್ಷೆ ಮುಗಿದಿದ್ದು, ಸುಮಾರು ೨ ಲಕ್ಷ ಕುಟುಂಬಗಳು ಹಳದಿ ಕಾರ್ಡು ಯೋಜನೆಯ ಫಲ ಪಡೆಯುವ ನಿರೀಕ್ಷೆ ಇದೆ.

**ವೃದ್ಧಾಪ್ಯ ವೇತನ :** ವೃದ್ಧಾಪ್ಯ ವೇತನ ಯೋಜನೆಯನ್ನು ಕರ್ನಾಟಕ ಸರ್ಕಾರವು ೧೯೬೫ನೇ ಜನವರಿಯಿಂದ ಆರಂಭಿಸಿತು. ಸದರಿ ವರ್ಷದಲ್ಲಿ ೨೭೫ ಮಂದಿ ಇದರ ಸೌಲಭ್ಯ ಪಡೆದಿದ್ದು, ಇದಕ್ಕಾಗಿ ರೂ.೪೧೨೫ ಗಳನ್ನು ಖರ್ಚು ಮಾಡಲಾಗಿದೆ. ಯಾವುದೇ ವಿಧದ ಆದಾಯವೂ ಇಲ್ಲದ ಕನಿಷ್ಟ ೭೦ ವರ್ಷ ವಯಸ್ಸಾದ, ಇಪ್ಪತ್ತು ವರ್ಷ ಅಥವಾ ಅದಕ್ಕಿಂತ ಹೆಚ್ಚು ವಯಸ್ಸಿನ ಮಕ್ಕಳು ಅಥವಾ ಮೊಮ್ಮಕ್ಕಳು ಇಲ್ಲದಿರುವಂತಹ ವ್ಯಕ್ತಿಯು ಈ ವೇತನ ಪಡೆಯಲು ಅರ್ಹನಾಗಿರುತ್ತಾನೆ. ಅಂಗವಿಕಲರಾದರೆ ಕನಿಷ್ಟ ೬೫ ವರ್ಷ ಆಗಿದ್ದರೂ ವೃದ್ಧಾಪ್ಯ ವೇತನ ಪಡೆಯಬಹುದಾಗಿದೆ. ಕ್ರಮೇಣ ಈ ವಯೋಮಿತಿಯನ್ನು ಅಂಗವಿಕಲರಿಗೆ ೧೯೭೪ರಲ್ಲಿ ೪೫ ವರ್ಷಕ್ಕೂ, ೧೯೭೭ರಲ್ಲಿ ೧೬ವರ್ಷಕ್ಕೂ ಇಳಿಸಿ, ೧೯೭೯ರಲ್ಲಿ ಅಂಗವಿಕಲರ ಕುರಿತಾಗಿ ವಯಸ್ಸಿನ ನಿರ್ಬಂಧವನ್ನು ಸಂಪೂರ್ಣವಾಗಿ ರದ್ದುಮಾಡಿ ಈ ಸೌಲಭ್ಯವನ್ನು ಮನೋವಿಕಲಗೊಂಡಿರುವ ವ್ಯಕ್ತಿಗಳಿಗೂ ವಿಸ್ತರಿಸಲಾಗಿದೆ. ವೃದ್ಧಾಪ್ಯ ವೇತನದ ದರವನ್ನು ೧೯೯೧ರ ಏಪ್ರಿಲ್‌ನಿಂದ ರೂ.೭೫ಗಳಿಗೂ ೧೯೯೬ರಿಂದ ರೂ. ೧೦೦ ಗಳಿಗೂ ಹೆಚ್ಚಿಸಲಾಗಿದೆ. ಈ ಯೋಜನೆ ಪ್ರಾರಂಭವಾದಾಗಿನಿಂದ ಮಾರ್ಚ್ ೨೦೦೧ರವರೆಗೆ ೧೦,೬೪೭ ಪರಿಶಿಷ್ಟ ಜಾತಿಯವರೂ, ೨,೯೮೬ ಪರಿಶಿಷ್ಟ ಪಂಗಡದವರೂ ಹಾಗೂ ೪೩,೮೨೦ ಇತರೇ ಗುಂಪಿನವರೂ ಹೀಗೆ ಒಟ್ಟು ೫೭,೪೮೧ ಫಲಾನುಭವಿಗಳು ಈ ಸೌಲಭ್ಯವನ್ನು ಪಡೆದಿರುತ್ತಾರೆ.

ಜಿಲ್ಲೆಯಲ್ಲಿ ೧೯೯೦-೯೧, ೧೯೯೫-೯೬, ೧೯೯೯-೨೦೦೦ ಹಾಗೂ ೨೦೦೦-೦೧ರಲ್ಲಿ ವೃದ್ಧಾಪ್ಯ ವೇತನ ಮೊದಲಾದ ವೇತನ ಸೌಲಭ್ಯ ಪಡೆಯುತ್ತಿದ್ದ ಫಲಾನುಭವಿಗಳ ಒಟ್ಟು ಸಂಖ್ಯೆಗಳನ್ನು ಕೋಷ್ಟಕ ೧೬.೩೮ರಲ್ಲಿ ನೀಡಲಾಗಿದೆ.

**ಕೋಷ್ಟಕ ೧೬.೩೮ ವೃದ್ಧಾಪ್ಯ ವೇತನ ಹಾಗೂ ಇತರ ಸೌಲಭ್ಯ ಪಡೆಯುತ್ತಿದ್ದ ಫಲಾನುಭವಿಗಳ ವಿವರ**

| ಕ್ರ.ಸಂ. | ಸೌಲಭ್ಯ ಪಡೆದವರು | ೧೯೯೦-೯೧ | ೧೯೯೫-೯೬ | ೧೯೯೯-೨೦೦೦ | ೨೦೦೦-೦೧ |
|---|---|---|---|---|---|
| ೧ | ವೃದ್ಧಾಪ್ಯ ವೇತನ | ೪೫,೬೧೩ | ೩೦,೦೧೩ | ೨೯,೨೯೮ | ೨೭,೫೦೨ |
| ೨ | ಮಾಸಾಶನ ಪಡೆಯುತ್ತಿದ್ದ ಅಂಕವಿಕಲರು | ೧೫,೨೬೦ | ೧೫,೫೪೮ | ೧೭,೪೩೮ | ೧೬,೫೮೩ |
| ೩ | ವಿಧವಾ ಪಿಂಚಣಿಗಳು | ೩೫,೯೭೨ | ೩೮,೧೪೮ | ೪೩,೦೮೭ | ೪೩,೫೪೩ |
| ೪ | ಹೆರಿಗೆ ಭತ್ಯೆ | ೬,೬೧೮ | ೫,೮೨೭ | – | ೩,೨೩೭ |

**ಸ್ವಾತಂತ್ರ್ಯ ಯೋಧರ ವೇತನ:** ಜಿಲ್ಲೆಯಲ್ಲಿ ದಿನಾಂಕ ೧.೫.೧೯೬೯ರಿಂದ ಈ ಯೋಜನೆಯು ಪ್ರಾರಂಭವಾಯಿತು. ಆಗ ಇದ್ದ ಆರು ಫಲಾನುಭವಿಗಳಿಗೆ ರೂ. ೩,೬೦೦ ಅನ್ನು ವೆಚ್ಚ ಮಾಡಲಾಗಿತ್ತು. ಮುಂದಿನ ಕೋಷ್ಟಕದಲ್ಲಿ ಕಳೆದ ಮೂರು ವರ್ಷಗಳಲ್ಲಿ ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ನೀಡುವ ಸ್ವಾತಂತ್ರ್ಯ ಯೋಧರ ವೇತನದ ಫಲಾನುಭವಿಗಳ ವಿವರವನ್ನು ನೀಡಲಾಗಿದೆ.

**ಕೋಷ್ಟಕ ೧೬.೩೯ ಸ್ವಾತಂತ್ರ್ಯ ಯೋಧರ ವೇತನದ ಫಲಾನುಭವಿಗಳ ವಿವರ**

| ಕೇಂದ್ರ ಸರ್ಕಾರದಿಂದ ಸೌಲಭ್ಯ ಪಡೆದವರು | | | |
|---|---|---|---|
| ೧೯೯೭-೯೮ | ೧೯೯೮-೯೯ | ೧೯೯೯-೨೦೦೦ | ಆದ ವೆಚ್ಚ |
| ೯ | ೯ | ೮ | ೭,೧೮,೨೬೦-೦೦ |
| ರಾಜ್ಯ ಸರ್ಕಾರದಿಂದ ಸೌಲಭ್ಯ ಪಡೆದವರು | | | |
| ೧೯೯೭-೯೮ | ೧೯೯೮-೯೯ | ೧೯೯೯-೨೦೦೦ | ಆದ ವೆಚ್ಚ |
| ೧೯೩ | ೧೯೦ | ೧೯೬ | ೩೩,೧೯,೩೬೯-೦೦ |

### ಪಾನನಿರೋಧ

ಮಂಡ್ಯ ಜಿಲ್ಲೆಯಲ್ಲಿ ಪಾನನಿರೋಧವು ೧೯೬೭ಕ್ಕಿಂತ ಹಿಂದೆಯೇ ಜಾರಿಯಲ್ಲಿತ್ತು. ಆ ಸಮಯದಲ್ಲಿ ಅಬಕಾರಿ ಇಲಾಖೆಯ ಕಾರ್ಯಭಾರವು ಕಂದಾಯ ಇಲಾಖೆಯ ಆಡಳಿತಕ್ಕೆ ಒಳಪಟ್ಟಿತ್ತು. ಆದರೆ ೧೯೬೭ರಿಂದ ಪಾನನಿರೋಧ ಕಾಯ್ದೆಯನ್ನು ರಾಜ್ಯ ಸರ್ಕಾರವು ಸಡಿಲಗೊಳಿಸಿತು. ೧೯೭೯–೮೦ ರಿಂದ ೧೯೮೧–೮೨ ರವರೆಗೆ, ಹೆಂಡದ ಮಾರಾಟವನ್ನು ನಿಷೇಧಿಸಲಾಗಿದ್ದು, ೧೯೮೨–೮೩ ಮತ್ತು ೧೯೮೩–೮೪ರಲ್ಲಿ ಇದನ್ನು ಸಡಿಲಗೊಳಿಸಲಾಯಿತಾದರೂ ಪುನಃ ಹೆಂಡದ ಮಾರಾಟವನ್ನು ನಿಷೇಧಿಸಿತು. ಪಾನ ಪ್ರತಿಬಂಧ ಅಧಿನಿಯಮದ ಪ್ರಕಾರ ಮಾದಕ ದ್ರವ್ಯ ಮತ್ತು ಅಮಲು ಬರುವ ಔಷಧಗಳ ತಯಾರಿಕೆ, ಆಮದು ಮತ್ತು ರಫ್ತು ಮಾರಾಟ, ಖರೀದಿ ಹಾಗೂ ಸೇವನೆಗಳಿಗೆ, ವೈದ್ಯಕೀಯ ವೈಜ್ಞಾನಿಕ ಹಾಗೂ ಕೈಗಾರಿಕೆ ಮುಂತಾದ ಉದ್ದೇಶಗಳನ್ನು ಹೊರತುಪಡಿಸಿ ನಿಷೇಧವಿದೆ. ನಿಷೇಧಾಜ್ಞೆಯನ್ನು ಮೀರಿ ೧೯೯೮–೯೯ ಮತ್ತು ೧೯೯೯–೨೦೦೦ನೇ ಸಾಲುಗಳಲ್ಲಿ ಮಾಡಲಾದ ವಿವಿಧ ಮಾದಕ ದ್ರವ್ಯಗಳ ಕಳ್ಳ ಉತ್ಪಾದನೆ, ಮಾರಾಟ ಮತ್ತು ಸಾಗಾಣಿಕೆಗಳಲ್ಲಿ ವಶಪಡಿಸಿಕೊಂಡ ವಿವಿಧ ಮಾದಕ ದ್ರವ್ಯಗಳ ವಿವರಗಳನ್ನು ಇಲ್ಲಿ ನೀಡಲಾಗಿದೆ.

**ಕೋಷ್ಟಕ ೧೬.೪೦ ವಿವಿಧ ಮಾದಕ ದ್ರವ್ಯಗಳನ್ನು ವಶಪಡಿಸಿಕೊಂಡ ವಿವರ**

| ವರ್ಷ | ವಾಹನ | ಭಾ.ತ.ಮ. (ಲೀಟರ್) | ಬಿಯರು (ಲೀಟರ್) | ರೆಕ್ಟಿಫೈಡ್ ಸ್ಪಿರಿಟ್ (ಲೀಟರ್) | ಸಾರಾಯಿ (ಲೀಟರ್) | ಕಳ್ಳಭಟ್ಟಿ ನಾಶಪಡಿ ಸಿದ್ದು (ಲೀಟರ್) | ವಾಷ್ ನಾಶಪಡಿ ಸಿದ್ದು (ಲೀಟರ್) |
|---|---|---|---|---|---|---|---|
| ೧೯೯೮–೯೯ | ೬೫ | ೪೨,೨೮೫ | ೧,೦೪೫ | ೧೯೦ | ೭೧೭ | ೮೯೦ | ೪೦೯ |
| ೧೯೯೯–೨೦೦೦ | ೬೨ | ೮೯,೯೯೬ | ೪೭೭ | ೬,೦೦೦ | ೧೧,೧೦೭ | ೬೨೦ | – |

೧೯೯೮–೯೯ ಹಾಗೂ ೧೯೯೯–೨೦೦೦ ನೇ ಸಾಲುಗಳಲ್ಲಿ ಕ್ರಮವಾಗಿ ೫೬೩ ಮತ್ತು ೬೬೨ ಮೊಕದ್ದಮೆಗಳನ್ನು ಹೂಡಲಾಗಿದ್ದು ಅವುಗಳಲ್ಲಿ ೨೬೬ ಮತ್ತು ೩೨೪ ಮೊಕದ್ದಮೆಗಳನ್ನು ಇತ್ಯರ್ಥಗೊಳಿಸಲಾಗಿದೆ.

### ಧಾರ್ಮಿಕ ದತ್ತಿ ಸಂಸ್ಥೆಗಳು

ಪರ್ಷಿಯನ್ ಮೂಲದ 'ಮುಜ್ರಾ' ಪದದ ತದ್ಭವ ರೂಪವಾದ 'ಮುಜರಾಯಿ' ಪದವನ್ನು ಆಧರಿಸಿ ಈ ಇಲಾಖೆಯನ್ನು ಬಹಳ ಕಾಲದವರೆಗೆ ಮುಜುರಾಯಿ ಇಲಾಖೆ ಎಂದೇ ಕರೆಯಲಾಗುತ್ತಿತ್ತು. ಆನಂತರ ೧೯೫೬ರ ನವೆಂಬರ್ ಒಂದರಿಂದ ಧಾರ್ಮಿಕ ದತ್ತಿ ಇಲಾಖೆ ಎಂದು ಅದರ ಹೆಸರನ್ನು ಪುನರ್ನಾಮಕರಣ ಮಾಡಲಾಗಿದೆ. ಹಯವದನರಾಯರ ಮೈಸೂರು ಗ್ಯಾಸೆಟಿಯರ್‌ನಲ್ಲಿ (೧೯೨೯) ನಮೂದಿಸಿರುವ ಪ್ರಕಾರ ೧೯೨೩–೨೪ರಲ್ಲಿ ಮೇಲುಕೋಟೆಯ 'ಉಭಯ ವೇದಾಂತ ಪ್ರವರ್ತನ ಸಭಾ' ಮತ್ತು ಅಲ್ಲಿಯ ಸಂಸ್ಕೃತ ಕಾಲೇಜುಗಳೆರಡು ರಾಜ್ಯ ಸರ್ಕಾರದಿಂದ ಸಹಾಯಧನ ಪಡೆಯುತ್ತಿದ್ದ ಧಾರ್ಮಿಕ ಸಂಸ್ಥೆಗಳಾಗಿದ್ದು, ಅವುಗಳಿಗೆ ಕ್ರಮವಾಗಿ ರೂ.೧೨೦ ಹಾಗೂ ರೂ.೩,೨೪೦ ಸಹಾಯ ಧನ ನೀಡಲಾಗುತ್ತಿತ್ತು. ಜಿಲ್ಲೆಯಲ್ಲಿ ೨೦೦೦–೨೦೦೧ ನೇ ಸಾಲಿನಲ್ಲಿ ಈ ಇಲಾಖೆಯ ಅಧೀನಕ್ಕೆ ಒಳಪಟ್ಟಿರುವ ಒಟ್ಟು ೧,೯೫೫ ಧಾರ್ಮಿಕ ಸಂಸ್ಥೆಗಳಿದ್ದು ಅವುಗಳಲ್ಲಿ ಶ್ರೀರಂಗಪಟ್ಟಣದ ರಂಗನಾಥಸ್ವಾಮಿ ದೇವಸ್ಥಾನದಿಂದ ರೂ.೨೭,೫೦,೦೦೦ ಮತ್ತು ಮೇಲುಕೋಟೆಯ ದೇವಸ್ಥಾನದಿಂದ ರೂ. ೩೪,೯೭,೧೫೩ಗಳಷ್ಟು ವಾರ್ಷಿಕ ಆದಾಯ ಈ ಇಲಾಖೆಗೆ ಬಂದಿದೆ ಎಂದು ಹೇಳಲಾಗಿದೆ. ಇವುಗಳಲ್ಲಿ ವಾರ್ಷಿಕ ಆದಾಯ ರೂ.೧,೦೦೦ ಗಳಿಗಿಂತ ಹೆಚ್ಚಿರುವ ಸಂಸ್ಥೆಗಳನ್ನು ಹಿರಿಯ ಸಂಸ್ಥೆಗಳೆಂದೂ, ಒಂದು ಸಾವಿರಕ್ಕಿಂತ

ಕಡಿಮೆ ಹಾಗೂ ಒಂದು ನೂರು ರೂಪಾಯಿಗಳಿಗಿಂತ ಹೆಚ್ಚು ಆದಾಯವಿರುವ ಸಂಸ್ಥೆಗಳನ್ನು ಕಿರಿಯ ಸಂಸ್ಥೆಗಳೆಂದೂ, ಹಾಗೂ ಒಂದು ನೂರಕ್ಕಿಂತ ಆದಾಯ ಕಡಿಮೆ ಇರುವ ಸಂಸ್ಥೆಗಳನ್ನು ಗ್ರಾಮೀಣ ಸಂಸ್ಥೆಗಳೆಂದೂ ಮತ್ತು ಹತ್ತು ಲಕ್ಷಕ್ಕಿಂತ ಹೆಚ್ಚು ಆದಾಯವಿರುವ ಸಂಸ್ಥೆಗಳನ್ನು ನಿಗದಿತ ಸಂಸ್ಥೆಗಳೆಂದೂ ವಿಂಗಡಿಸಲಾಗಿದೆ. ಅದರಂತೆ ಈ ಇಲಾಖೆಯ ಅಧೀನದಲ್ಲಿರುವ ೧,೯೫೫ ಸಂಸ್ಥೆಗಳ ವಿವರಗಳು ಕೆಳಕಂಡಂತಿದೆ.

**ಕೋಷ್ಟಕ ೧೬.೪೧ ಇಲಾಖೆಯ ಅಧೀನದಲ್ಲಿರುವ ವಿವಿಧ ಧಾರ್ಮಿಕ ಸಂಸ್ಥೆಗಳ ವಿವರ**

| ತಾಲೂಕಿನ ಹೆಸರು | ಹಿರಿಯ ಧಾರ್ಮಿಕ ಸಂಸ್ಥೆಗಳು | ಕಿರಿಯ ಧಾರ್ಮಿಕ ಸಂಸ್ಥೆಗಳು | ಗ್ರಾಮೀಣ ಧಾರ್ಮಿಕ ಸಂಸ್ಥೆಗಳು | ನಿಗದಿತ ಸಂಸ್ಥೆ (ದೇವಸ್ಥಾನ)ಗಳು | ಒಟ್ಟು ಸಂಖ್ಯೆ |
|---|---|---|---|---|---|
| ಮಂಡ್ಯ | ೧೫೪ | ೧೨೨ | ೦೨ | – | ೨೭೮ |
| ಮದ್ದೂರು | ೧೩೫ | ೧೦೪ | ೩೩ | ಇಲ್ಲ | ೨೭೨ |
| ಮಳವಳ್ಳಿ | ೭೪ | ೧೮೦ | ೦೪ | ಇಲ್ಲ | ೨೫೦ |
| ಶ್ರೀರಂಗಪಟ್ಟಣ | ೭೮ | ೧೦೫ | ೦೨ | ೧ | ೧೮೬ |
| ಕೃಷ್ಣರಾಜ ಪೇಟೆ | ೧೧೪ | ೧೩೧ | ಇಲ್ಲ | ಇಲ್ಲ | ೨೪೫ |
| ಪಾಂಡವಪುರ | ೩೬ | ೧೬೩ | ೨೫ | ೧ | ೨೨೫ |
| ನಾಗಮಂಗಲ | ೧೮೭ | ೩೦೩ | ೦೧ | ಇಲ್ಲ | ೪೯೧ |
| ಒಟ್ಟು | ೭೭೮ | ೧೧೦೮ | ೬೭ | ೨ | ೧,೯೫೫ |

**ವಕ್ಫ್ ಸಂಸ್ಥೆಗಳು:** ವಕ್ಫ್ ಕಾಯ್ದೆಯು ೧೯೫೪ರಲ್ಲಿ ರೂಪುಗೊಂಡು, ಜಿಲ್ಲೆಯಲ್ಲಿ ೧೯೬೪ರಿಂದ ಜಾರಿಗೆ ಬಂದಿದೆ. ನಂತರ ೧೯೯೫ರಲ್ಲಿ ತಿದ್ದುಪಡಿಗೊಂಡ ಈ ಕಾಯ್ದೆ ಪ್ರಸ್ತುತ ಜಾರಿಯಲ್ಲಿದೆ. ಜಿಲ್ಲೆಯ ವಕ್ಫ್ ಆಸ್ತಿಪಾಸ್ತಿಗಳ ಆಡಳಿತವನ್ನು ನಿರ್ವಹಿಸಲು ಕರ್ನಾಟಕ ರಾಜ್ಯ ವಕ್ಫ್ ಮಂಡಳಿಯು ಜಿಲ್ಲಾ ವಕ್ಫ್ ಸಲಹಾ ಸಮಿತಿಯನ್ನು ದಿ.೧೩.೧೧.೨೦೦೦ದ ಆದೇಶದ ಮೂಲಕ ರಚಿಸಿರುತ್ತದೆ. ನಗರ ಮತ್ತು ಗ್ರಾಮೀಣ ಪ್ರದೇಶಗಳೂ ಸೇರಿದಂತೆ ಜಿಲ್ಲೆಯಲ್ಲಿ ಮಸೀದಿ, ದರ್ಗಾ, ಅಷುರ್‌ಖಾನ್, ಈದ್ಗಾ, ಅಂಜುಮನ್ ಮತ್ತು ಖಬ್ರಾಸ್ಥಾನ್‌ಗಳೇ ಮುಂತಾದ ಒಟ್ಟು ೩೨೪ ವಕ್ಫ್ ಸಂಸ್ಥೆಗಳು ಇವೆ. ೧೯೯೦ರ ದಶಕದಲ್ಲಿ ಇನ್ನಷ್ಟು ಸಂಸ್ಥೆಗಳು ವಕ್ಫ್ ಮಂಡಳಿಯಡಿ ನೋಂದಣಿಗೊಂಡಿವೆ. ಈ ವಕ್ಫ್ ಸಂಸ್ಥೆಗಳಿಗೆ ೧೯೯೭–೯೮ ರಿಂದ ೧೯೯೯–೨೦೦೦ರವರೆಗೆ ಮಂಜೂರು ಮಾಡಲಾದ ಅನುದಾನದ ವಿವರಗಳನ್ನು ಇಲ್ಲಿ ನೀಡಲಾಗಿದೆ.

**ಕೋಷ್ಟಕ ೧೬.೪೨ ವಕ್ಫ್ ಸಂಸ್ಥೆಗಳಿಗೆ ನೀಡಿದ ಅನುದಾನಗಳ ವಿವರ**

| ವರ್ಷ | ಸಂಸ್ಥೆಗಳ ಸಂಖ್ಯೆ | ಮಂಜೂರಾದ ಸಹಾಯ ಧನದ ಒಟ್ಟು ಮೊತ್ತ (ಲಕ್ಷ ರೂ.ಗಳಲ್ಲಿ) |
|---|---|---|
| ೧೯೯೭–೯೮ | ೨೪ | ೫.೩೫ |
| ೧೯೯೮–೯೯ | ೩೫ | ೮.೨೫ |
| ೧೯೯೯–೨೦೦೦ | ೨೩ | ೬.೬೫ |

**ಕೋಷ್ಟಕ ೧೬.೪೩ ಜಿಲ್ಲೆಯಲ್ಲಿರುವ ವಕ್ಫಿನ ಆಸ್ತಿಗಳ ಅಂದಾಜು ಬೆಲೆಯನ್ನು ಸೂಚಿಸುವ ಪಟ್ಟಿ**

| ವಕ್ಫ್ ಸಂಸ್ಥೆಗಳ ಸಂಖ್ಯೆ | ಸಂಸ್ಥೆಗಳ ಆಸ್ತಿಯ ಮೌಲ್ಯ | ಆಸ್ತಿಯ ಒಟ್ಟು ಆದಾಯ | ಈ ಆಸ್ತಿಗೆ ಕೊಡಲ್ಪಡುವ ಕಂದಾಯ, ತೆರಿಗೆ ಇತ್ಯಾದಿ | ಮುತಾವಲ್ಲಿಗಳ ಸಂಭಾವನೆ, ವಸೂಲಿ ಮತ್ತಿತರ ಖರ್ಚು |
|---|---|---|---|---|
| ೨೧೯ | ೧೫,೭೬,೮೫೫ | ೪೬,೩೯೫ | ೨.೫೫೮ | ೪೭,೦೭೬ |

**ಸ್ವಯಂ ಸೇವಾ ಸಂಸ್ಥೆಗಳು:** ಪ್ರಚಾರ ಬಯಸದ, ಜನಹಿತವನ್ನು ಬಯಸುವ ಹಲವಾರು ನಿಸ್ವಾರ್ಥ ಮಹನೀಯರು ಹಾಗೂ ಸ್ವಯಂ ಸೇವಾ ಸಂಸ್ಥೆಗಳು ಜಿಲ್ಲೆಯ ಹಲವೆಡೆ ಕಾರ್ಯನಿರತವಾಗಿವೆ. ಬಡವರ ಹಾಗೂ ಅಶಕ್ತರ ರಕ್ಷಣೆ ಮತ್ತು ಪೋಷಣೆಗಾಗಿ ದುಡಿದ ಕೆಲವು ಮಹನೀಯರು ಹಾಗೂ ದುಡಿಯುತ್ತಿರುವ ಕೆಲವು ಪ್ರಮುಖ ಸಂಸ್ಥೆಗಳನ್ನು ಈ ಮುಂದೆ ಉಲ್ಲೇಖಿಸಲಾಗಿದೆ.

ಸೋಮನಹಳ್ಳಿಯ ಸಿ.ಮಲ್ಲಯ್ಯನವರು, ಗ್ರಾಮೀಣರ, ಹಿಂದುಳಿದವರ ಮತ್ತು ಬಡವರ ಏಳಿಗೆಗಾಗಿ ಶ್ರಮಿಸಿದ್ದಾರೆ. ರಸ್ತೆ, ಶಾಲೆ, ಕೆರೆನಾಲೆ, ಇತ್ಯಾದಿಗಳೊಂದಿಗೆ ವಿದ್ಯಾರ್ಥಿ ವೇತನವೂ ಅವರ ಚಿಂತನೆಯ ಒಂದು ವಿಷಯವಾಗಿತ್ತು. ಗಾಂಧಿ ತತ್ವಗಳಿಂದ ಆಕರ್ಷಿತರಾಗಿದ್ದ ಕೆ.ವಿ.ಶಂಕರೇಗೌಡರು, ಕೀಲಾರದಲ್ಲಿ ಚರಕ ಸಂಘವೊಂದನ್ನು ಸ್ಥಾಪಿಸಿದರು. ಇವರು ವಿದ್ಯಾ ಮಂತ್ರಿಯಾಗಿಯೂ ಸೇವೆ ಸಲ್ಲಿಸಿದ್ದು, ಇಡೀ ಜಿಲ್ಲೆಯ ಸಮಾಜದ ಪ್ರಗತಿಗೆ ಮೂಲ ಪುರುಷರೆಂಬ ಭಾವನೆ ಜಿಲ್ಲೆಯ ಜನರಲ್ಲಿದೆ. ೧೯೪೬ರಲ್ಲಿ ಹಳ್ಳಿಗರ ದಾರುಣ ಸ್ಥಿತಿಯನ್ನು ಕಂಡು, ಸಮಾನ ಮನಸ್ಕರೊಂದಿಗೆ ಸೇರಿ, ಸಹಕಾರಿ ಸಂಘವೊಂದನ್ನು ಸ್ಥಾಪಿಸಿ ಹಳ್ಳಿಗರಿಗೆ ಸಹಕಾರ ನೀಡಿದ್ದಲ್ಲದೆ, ೧೯೬೨ರಲ್ಲಿ ಮಂಡ್ಯದ ಜನತಾ ಶಿಕ್ಷಣ ಸಂಸ್ಥೆ, ಪಾಂಡವಪುರ ಸಹಕಾರಿ ಸಕ್ಕರೆ ಕಾರ್ಖಾನೆ, ರೈತ ಸಹಕಾರ ಸಂಘದ ವತಿಯಿಂದ ಜಿಲ್ಲೆಯ ಹಲವು ಕಡೆ ಶಾಖೆಗಳು, ಇವರ ಶ್ರಮದಿಂದಾಗಿ ಆರಂಭಗೊಂಡವು (ವಿದ್ಯಾ ಕ್ಷೇತ್ರದ ಬಗ್ಗೆ ಶಿಕ್ಷಣ ಮತ್ತು ಕ್ರೀಡಾ ಅಧ್ಯಾಯ ನೋಡಿ) ಮದ್ದೂರಿನ ಎಚ್.ಕೆ.ವೀರಣ್ಣಗೌಡರು, ಗಾಂಧೀಜಿಯವರಿಂದ ಪ್ರಭಾವಿತರಾಗಿದ್ದ ಇನ್ನೊಬ್ಬ ಸಮಾಜವಾದಿ. ಕೋಮುವಾರು ದ್ವೇಷವನ್ನು ಅಳಿಸುವ ಉದ್ದೇಶವನ್ನು ಹೊಂದಿದ್ದವರು. ವಿಧವೆಯನ್ನು ಮದುವೆಯಾಗಿ, ವಿಧವಾ ವಿವಾಹಕ್ಕೆ ನಿದರ್ಶನರಾಗಿದ್ದರು. ಮೈಸೂರು ಸಂಸ್ಥಾನದಲ್ಲಿ ಬ್ರಾಹ್ಮಣ-ಬ್ರಾಹ್ಮಣೇತರ ಚಳವಳಿಗಳು ಆರಂಭಗೊಂಡ ಕಾಲದಲ್ಲಿ 'ಕೋಮುವಾರು ಭಾವನೆಯನ್ನು ತೊಲಗಿಸಿ' ಎಂದು ಜನರಿಗೆ ತಿಳುವಳಿಕೆ ಕೊಟ್ಟು ರಾಷ್ಟ್ರೀಯ ಭಾವನೆ ಬೆಳೆಸಲು ಪ್ರಯತ್ನಿಸಿದವರು ವೀರಣ್ಣಗೌಡರು. ೧೯೩೨ರಲ್ಲಿ ಕಾವೇರಿ ನದಿಗೆ ಕನ್ನಂಬಾಡಿ ಅಣೆಕಟ್ಟನ್ನು ಕಟ್ಟಿದಾಗ, ಸರ್ಕಾರ ಇಲ್ಲಿನ ವ್ಯವಸಾಯಕ್ಕೆ ಸಂಬಂಧಿಸಿದಂತೆ ಹಲವಾರು ನಿಯಮಗಳನ್ನು ರೂಪಿಸಿ, ತೆರಿಗೆಯನ್ನೂ ಇಮ್ಮಡಿ ಮಾಡಿತ್ತು. ಆಗ ವೀರಣ್ಣಗೌಡರು, ಇಂಡುವಾಳು ಹೊನ್ನಯ್ಯ ಮತ್ತು ಹೊನಗಾನಹಳ್ಳಿ ಪುಟ್ಟಣ್ಣನವರ ಕೋರಿಕೆಯಂತೆ, ೧೯೩೨ರಲ್ಲಿ ೪,೦೦೦ ರೈತರನ್ನು ಸಂಘಟಿಸಿ, ಗೆಜ್ಜಲಗೆರೆಯಿಂದ ಕಾಲ್ನಡಿಗೆಯಲ್ಲೇ ಬೆಂಗಳೂರಿನ ಅಠಾರಾ ಕಚೇರಿಯನ್ನು ತಲುಪಿ ದಿವಾನರನ್ನು ಭೇಟಿ ಮಾಡಿ, ಸ್ಥಳದಲ್ಲೇ ರೈತರ ಮೇಲಿನ ತೆರಿಗೆ ಭಾರವನ್ನು ಇಳಿಸುವ ಆದೇಶ ಹೊರಡಿಸುವಂತೆ ಮಾಡಿದ್ದರು. ಈ ಚಳವಳಿ 'ಇರ್ವಿನ್ ನಾಲಾ ಚಳವಳಿ' ಎಂದೇ ಪ್ರಸಿದ್ಧವಾಗಿದೆ. ಇಂಡುವಾಳು ಹೊನ್ನಯ್ಯನವರು ರೈತರ ಪರವಾದ ಈ ಹೋರಾಟಕ್ಕಾಗಿ ಮನೆ ಕಟ್ಟಲೆಂದು ಇಟ್ಟಿದ್ದ ತಮ್ಮ ಹಣವನ್ನೆಲ್ಲ ಖರ್ಚು ಮಾಡಿದ್ದಾಗಿ ತಿಳಿದು ಬರುತ್ತದೆ.

ಸ್ವಾತಂತ್ರ್ಯಾನಂತರ ಮಾನವೀಯ ಕಾಳಜಿಯಿಂದ ದೀನ ದಲಿತರಿಗೆ ನೆರವು ನೀಡುವ ಉದ್ದೇಶದಿಂದ ಮಂಡ್ಯ ಜಿಲ್ಲೆಯಲ್ಲಿ ಹಲವಾರು ಸ್ವಯಂ ಸೇವಾ ಸಂಸ್ಥೆಗಳು ವಿವಿಧ ರೀತಿಯ ನೆರವು ಸಹಕಾರಗಳನ್ನು ನೀಡಲು ಆರಂಭಗೊಂಡವು. ಕೆ.ವಿ.ಶಂಕರೇಗೌಡರು ೧೯೫೮ರಲ್ಲಿ ಹಲವಾರು ಉದ್ದೇಶಗಳಿಂದ ಆರಂಭಿಸಿದ ಮಂಡ್ಯ ನಗರದ ಪೀಪಲ್ಸ್ ಎಜುಕೇಷನ್ ಸೊಸೈಟಿ; ಮಂಡ್ಯದ ಮಹಿಳಾ ಸಮಾಜ, ರೋಟರಿ ಕ್ಲಬ್, ರೆಡ್ ಕ್ರಾಸ್ ಸೊಸೈಟಿ, ಭಾರತ್ ಸೇವಾದಳ, ಕರ್ನಾಟಕ ಸಂಘ, ಕಿರಣ ಸಾಹಿತ್ಯ ಸಂಘ, ಮೇಲುಕೋಟೆಯ ಜನಪದ ಸೇವಾ ಟ್ರಸ್ಟ್ ಮುಂತಾದವು ಇಂತಹ ಸೇವಾ ಸಂಸ್ಥೆಗಳಲ್ಲಿ ಕೆಲವು. ಈ ಸಂಸ್ಥೆಗಳ ಬಗ್ಗೆ ಇಲ್ಲಿ ಸಂಕ್ಷಿಪ್ತವಾಗಿ ವಿವರಿಸಲಾಗಿದೆ.

**ಮಹಿಳಾ ಸಮಾಜ, ಮಂಡ್ಯ** :ಮಹಿಳೆಯರು ಮತ್ತು ಮಕ್ಕಳ ಅಭಿವೃದ್ಧಿಯ ಉದ್ದೇಶದಿಂದ ಮಂಡ್ಯದ ಮಹಿಳಾ ಸಮಾಜವನ್ನು ೧೯೩೫ರಲ್ಲಿ ಸ್ಥಾಪಿಸಲಾಯಿತು. ಅಧ್ಯಕ್ಷರು, ಉಪಾಧ್ಯಕ್ಷರು, ಕಾರ್ಯದರ್ಶಿ ಮತ್ತು ಖಜಾಂಚಿಯೂ ಸೇರಿದಂತೆ ಇರುವ ಹನ್ನೆರಡು ಜನರ ಒಂದು ಸಮಿತಿಯಿಂದ ಈ ಸಮಾಜವನ್ನು ನಡೆಸಲಾಗುತ್ತಿತ್ತು. ೧೯೬೫–೬೬ನೇ ಸಾಲಿನಲ್ಲಿ ಈ ಸಮಾಜದಲ್ಲಿ ೧೦೦ ಸದಸ್ಯರಿದ್ದು, ಪ್ರತೀ ಸದಸ್ಯ ತಿಂಗಳಿಗೆ ನೀಡುತ್ತಿದ್ದ ದೇಣಿಗೆ ಒಂದು ರೂ.ಮಾತ್ರ ಆಗಿತ್ತು. ವಾಣಿಜ್ಯ ಮತ್ತು ಕೈಗಾರಿಕಾ ಇಲಾಖೆ ಮತ್ತು ಶಿಕ್ಷಣ ಇಲಾಖೆಗಳಿಂದ ಈ ಸಂಸ್ಥೆಯು ಅನುದಾನವನ್ನೂ ಪಡೆಯುತ್ತಿತ್ತು. ಸ್ವಯಂ ಉದ್ಯೋಗ ಕೈಗೊಳ್ಳಲು ಅನುಕೂಲವಾಗುವಂಥ, ಹೊಲಿಗೆ ತರಬೇತಿ, ಕಸೂತಿ, ಉಣ್ಣೆಯ ಕೆಲಸ, ಅಗರಬತ್ತಿ ತಯಾರಿಕೆ, ಮುಂತಾದವುಗಳ ಬಗ್ಗೆ ತರಬೇತಿಯನ್ನೂ ನೀಡಲಾಗುತ್ತಿತ್ತು. ಈ ಕುಶಲ ಕಲೆಗಳಲ್ಲಿ ಪ್ರತೀ ವರ್ಷ ಸುಮಾರು ನೂರು ಮಹಿಳೆಯರು ತರಬೇತಿಯನ್ನು ಪಡೆಯುತ್ತಿದ್ದರು. ಈ ವೃತ್ತಿ ತರಬೇತಿಯೊಂದಿಗೆ ಸಂಗೀತ ಮತ್ತು ನೃತ್ಯಗಳನ್ನು ಕಲಿಸುವ ವ್ಯವಸ್ಥೆಯೂ ಇತ್ತು. ೧೯೬೬–೬೭ನೇ ಸಾಲಿನಲ್ಲಿ ರಾಜ್ಯ ಸಮಾಜ ಕಲ್ಯಾಣ ಸಲಹಾ ಮಂಡಳಿಯು ಈ ಸಮಾಜಕ್ಕೆ ಬಾಲವಾಡಿಯನ್ನು ಹಾಗೂ ಕುಶಲ ಕಲೆ ತರಗತಿಗಳನ್ನು ನಡೆಸಲು ೨,೦೦೦ ರೂ.ಗಳನ್ನು ಅನುದಾನ ನೀಡಿತ್ತು.

**ಮಂಡ್ಯ ರೋಟರಿ ಕ್ಲಬ್:** ಮಂಡ್ಯದಲ್ಲಿ ೧೯೫೩ರಲ್ಲಿ ರೋಟರಿ ಕ್ಲಬ್‌ನ ಸ್ಥಾಪನೆಯಾಯಿತು. ಬೆಂಗಳೂರಿನ ರೋಟರಿ ಕ್ಲಬ್ ಇದನ್ನು ಪ್ರಾಯೋಜಿಸಿತ್ತು. ಈ ಸಂಸ್ಥೆಯು ಸದಸ್ಯರ ಸೇವೆ, ರಜಾ ಅವಧಿಯ ಸೇವೆ, ಜನ ಸಮುದಾಯದ ಸೇವೆ ಮತ್ತು ಅಂತರರಾಷ್ಟ್ರೀಯ ಸೇವೆ ಎಂಬ ನಾಲ್ಕು ವಿಧದ ಸೇವಾ ಮಾರ್ಗಗಳನ್ನು ಗುರಿಯಾಗಿ ಇಟ್ಟುಕೊಂಡು ಸಾಮಾಜಿಕ ಸೇವೆಯನ್ನು ಆರಂಭಿಸಿದಂಥ ಸಂಸ್ಥೆ. ೧೯೬೫–೬೬ರಲ್ಲಿ ವಿವಿಧ ಕಾರ್ಯಕ್ರಮಗಳನ್ನು ನಿರ್ವಹಿಸಲು ಏಳು ಸಮಿತಿಗಳನ್ನು ವ್ಯವಸ್ಥೆ ಮಾಡಲಾಗಿದ್ದು, ಅವುಗಳಲ್ಲಿ ವಿವಿಧ ವರ್ಗಗಳಿಗೆ ಸೇರಿದ ೩೦ ಸದಸ್ಯರಿದ್ದರು. ಕೇಂದ್ರ ಸಮಾಜ ಕಲ್ಯಾಣ ಮಂಡಳಿಯ ನಗರ ಯೋಜನೆಗಳನ್ನು ಜಾರಿಗೆ ತರುವ ಜವಾಬ್ದಾರಿ ಈ ಕ್ಲಬ್ಬಿನದ್ದಾಗಿತ್ತು. ಮೊದಲ ದರ್ಜೆಯ ಕಾಲೇಜಾಗಿ ಮೇಲ್ದರ್ಜೆಗೆ ಏರಿರುವ ಸರ್ಕಾರಿ ಇಂಟರ್‌ಮೀಡಿಯೇಟ್ ಕಾಲೇಜಿನ ಕಟ್ಟಡಕ್ಕೆ ೧೯೫೬ರಲ್ಲಿ ಈ ಕ್ಲಬ್‌ನಿಂದ ೨೫,೦೦೦ ರೂ.ಗಳನ್ನು ದಾನ ನೀಡಲಾಗಿತ್ತು. ಮಂಡ್ಯದಿಂದ ಐದು ಮೈಲಿ ದೂರದಲ್ಲಿರುವ ಸುಂಡಹಳ್ಳಿ ಶಾಲಾ ಕಟ್ಟಡವನ್ನು ಈ ಸಂಸ್ಥೆ ಕಟ್ಟಿಸಿಕೊಟ್ಟಿದೆ. ೧೯೫೪–೫೫ ರಿಂದ ೧೯೫೯–೬೦ ರವರೆಗೆ ಮಂಡ್ಯ ನಗರಸಭಾ ಮಂಡಳಿಯ ಸಹಕಾರದೊಂದಿಗೆ ಎರಡು ನೇತ್ರ ಚಿಕಿತ್ಸಾ ಶಿಬಿರಗಳನ್ನು ನಡೆಸಿ ಒಂದು ಸಾವಿರ ರೋಗಿಗಳಿಗೆ ಉಚಿತ ಚಿಕಿತ್ಸೆ ಕೊಡಿಸಲಾಗಿತ್ತು. ರೋಟರಿ ಕ್ಲಬ್‌ನಿಂದ ಈ ಶಿಬಿರಗಳಿಗಾಗಿ ಖರ್ಚು ಮಾಡಲಾದ ಹಣ ೩೦,೦೦೦ ರೂ.ಗಳು. ೧೯೫೩–೫೪ ರಲ್ಲಿ ಕ್ಲಬ್‌ನ ವತಿಯಿಂದ ಒಂದು ಗಂಜಿಕೇಂದ್ರವನ್ನು ಆರಂಭಿಸಿ, ನೂರಾರು ಬಡಜನರಿಗೆ ಊಟದ ವ್ಯವಸ್ಥೆ ಮಾಡಲಾಗಿತ್ತು. ಪ್ರಸ್ತುತ ಜಿಲ್ಲೆಯ ಭಾರತಿನಗರ, ಮದ್ದೂರು, ಮಳವಳ್ಳಿ, ಮಂಡ್ಯ, ನಾಗಮಂಗಲ ಮುಂತಾದ ಕಡೆ ರೋಟರಿ ಕ್ಲಬ್‌ನ ಅಂಗ ಸಂಸ್ಥೆಗಳಿವೆ. ಮಹಿಳೆಯರ ವಿಭಾಗಗಳಾಗಿ ಕಾರ್ಯ ನಿರ್ವಹಿಸುತ್ತಿರುವ ಇನ್ನರ್ ವೀಲ್‌ಕ್ಲಬ್‌ಗಳೂ ಇವೆ. ೨೦೦೦–೨೦೦೧ನೇ ಸಾಲಿನಲ್ಲಿ ಪ್ರಾಥಮಿಕ ಶಾಲೆಯ ೧೫೦ ವಿದ್ಯಾರ್ಥಿಗಳಿಗೆ ನೋಟ್‌ಪುಸ್ತಕ, ಪೆನ್ನು, ರಾಷ್ಟ್ರನಾಯಕರ ಭಾವಚಿತ್ರಗಳು, ೨೫ ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಬಹುಮಾನಗಳು, ಬಡವೃದ್ಧರಿಗೆ ಉಲ್ಲನ್ ರಗ್ಗುಗಳು, ಮಳವಳ್ಳಿ ಸರ್ಕಾರಿ ಆಸ್ಪತ್ರೆಯ ಒಳರೋಗಿಗಳಿಗೆ ಹಣ್ಣು, ಬ್ರೆಡ್, ಇತ್ಯಾದಿಗಳನ್ನು ಮಳವಳ್ಳಿ ಇನ್ನರ್ ವೀಲ್ ಕ್ಲಬ್‌ನಿಂದಲೂ; ಬೇಬಿಹಳ್ಳಿಯಲ್ಲಿ ಮರ ಬೆಳೆಸುವ ಸಲುವಾಗಿ ಸಸಿಗಳನ್ನು, ಕೆರಗೋಡು ಹಳ್ಳಿಯ ಕ್ಯಾಂಪ್‌ನಲ್ಲಿ ಉಚಿತ ಔಷಧಿ ಹಾಗೂ ಉಚಿತ ವೈದ್ಯಕೀಯ ಸೇವೆ, ೨೦ ಅಂಧ ಮಕ್ಕಳಿಗೆ ನೋಟ್ ಪುಸ್ತಕಗಳನ್ನು ಮಂಡ್ಯ ಇನ್ನರ್ ವೀಲ್ ಕ್ಲಬ್‌ನಿಂದಲೂ; ಕನ್ನಡ ರಸಪ್ರಶ್ನೆಗೆ ಬಹುಮಾನಗಳನ್ನೂ, ಅಂಧ ವಿದ್ಯಾರ್ಥಿಗಳಿಗೆ ಬ್ರೇಲ್‌ಪುಸ್ತಕಗಳು, ಹಣ್ಣು, ಬನ್ನು ಮತ್ತು ಬಹುಮಾನಗಳನ್ನು ನಾಗಮಂಗಲ ಇನ್ನರ್ ವೀಲ್ ಕ್ಲಬ್‌ನಿಂದಲೂ; ಸ್ಪರ್ಧೆಗಳನ್ನು ನಡೆಸಿ ಬಹುಮಾನಗಳನ್ನು ವಿತರಣೆ ಮಾಡುವುದರ ಜೊತೆಗೆ ಮದ್ದೂರಿನ ಸರ್ಕಾರಿ ಆಸ್ಪತ್ರೆಯ ಎಲ್ಲಾ

ರೋಗಿಗಳಿಗೂ ಹಾಲು ಬ್ರೆಡ್ಡು ಮತ್ತು ಹಣ್ಣುಗಳನ್ನು, ಮದ್ದೂರು ಇನ್ನರ್ ವೀಲ್ ಕ್ಲಬ್‌ನಿಂದಲೂ; ಮಣಿಗೆರೆ ಪಾಠಶಾಲೆಗೆ ಕುರ್ಚಿಗಳು, ಮಕ್ಕಳಿಗೆ ಸಿಹಿ ಮತ್ತು ವಿವಿಧ ಸ್ಪರ್ಧೆಗಳಿಗೆ ಬಹುಮಾನಗಳನ್ನು ಭಾರತಿ ನಗರದ ಇನ್ನರ್ ವೀಲ್ ಕ್ಲಬ್‌ನಿಂದಲೂ ನೀಡಲಾಗಿದೆ.

**ರೆಡ್‌ಕ್ರಾಸ್ ಸೊಸೈಟಿ, ಮಂಡ್ಯ:** ಕೇಂದ್ರಿಕೃತ (Central Statute) ನಿರ್ವಹಣೆಯ ಅಡಿ ಕೇಂದ್ರ ಸರ್ಕಾರದ ಸಹಯೋಗದೊಂದಿಗೆ ರಾಜ್ಯದಲ್ಲಿ ಹಲವಾರು ಶಾಖೆಗಳನ್ನು ಹೊಂದಿರುವ ಸ್ವಯಂ ಸೇವಾ ಸಂಸ್ಥೆಗಳಲ್ಲಿ ಇಂಡಿಯನ್ ರೆಡ್‌ಕ್ರಾಸ್ ಸೊಸೈಟಿಯೂ ಒಂದು. ಆರೋಗ್ಯ ಸುಧಾರಣೆ, ಕಾಯಿಲೆಗಳ ನಿವಾರಣೆ ಮತ್ತು ಮಾನವ ಸಂಕಷ್ಟಗಳ ನಿವಾರಣೆಗೆ ಸಂಬಂಧಿಸಿದಂತೆ, ಕಾರ್ಯ ಚಟುವಟಿಕೆಗಳನ್ನು ಈ ಸಂಸ್ಥೆ ಹೊಂದಿದೆ. ಮಂಡ್ಯದಲ್ಲಿ ಈ ಸಂಸ್ಥೆಯ ಒಂದು ಶಾಖೆಯನ್ನು ೧೯೩೨ರಲ್ಲಿ ಸ್ಥಾಪಿಸಿದಾಗ ಜಿಲ್ಲಾಧಿಕಾರಿಗಳು ಈ ಶಾಖೆಗೆ ಪದನಿಮಿತ್ತ ಅಧ್ಯಕ್ಷರಾಗಿದ್ದರು. ೧೯೩೬ರಲ್ಲಿ ರೆಡ್‌ಕ್ರಾಸ್‌ನ ಕಾರ್ಯಗಳಿಗೆ ಪ್ರಥಮ ಬಹುಮಾನ ಪಡೆದಿದ್ದು, ಇದು ಮಂಡ್ಯ ಶಾಖೆಯು ಮಾಡಿದ ಸಾಧನೆಗಳಲ್ಲಿ ಒಂದಾಗಿರುತ್ತದೆ. ಈ ಸಂಸ್ಥೆಯು ಕೆಲವಾರು ವರ್ಷ ನಿಷ್ಕ್ರಿಯವಾಗಿದ್ದು, ೨೦೦೧ರಲ್ಲಿ ಪುನಃ ಆರಂಭಗೊಂಡು ಸಮಾಜ ಸೇವಾ ಕಾರ್ಯವನ್ನು ಜಿಲ್ಲಾಧಿಕಾರಿಗಳ ಉಸ್ತುವಾರಿಯಲ್ಲಿ ಮುಂದುವರಿಸಿದೆ.

**ಭಾರತ್ ಸೇವಾದಳ, ಮಂಡ್ಯ :** ಎನ್. ಎಸ್. ಹರ್ಡೀಕರ್‌ರವರು ಸ್ವಾತಂತ್ರ್ಯ ಪೂರ್ವದಲ್ಲಿ ಸ್ಥಾಪಿಸಿದ ಹಿಂದೂಸ್ಥಾನಿ ಸೇವಾ ದಳದ ಒಂದು ಅಂಗವೇ ಭಾರತ್ ಸೇವಾ ದಳ. ರಾಜಕೀಯೇತರ ಹಾಗೂ ಪಕ್ಷೇತರ ಯುವ ಸಂಘಟನೆಯಾಗಿ ಇದು ೧೯೫೦ರ ಮಾರ್ಚ್‌ನಲ್ಲಿ ಕಾರ್ಯಾಚರಣೆಯನ್ನು ಆರಂಭಿಸಿತು. ಸೇವಾ ದಳದ ಒಂದು ಶಾಖೆಯಾಗಿ, ಮಂಡ್ಯದಲ್ಲಿ ೧೯೫೨ರಲ್ಲಿ, ಈ ಸಂಸ್ಥೆಯನ್ನು ಆರಂಭಿಸಲಾಯಿತು. ೧. ದೈಹಿಕ ಶಿಕ್ಷಣ ಮತ್ತು ತರಬೇತಿ ಮೂಲಕ ಯುವ ಜನಾಂಗದ ಆರೋಗ್ಯ ಮತ್ತು ದೈಹಿಕ ಬೆಳವಣಿಗೆಯ ಸುಧಾರಣೆ, ೨. ದೇಶದ ಯುವ ಜನಾಂಗದಲ್ಲಿ, ಸ್ವಾವಲಂಬನೆ, ಸಜ್ಜನಿಕೆ ಮತ್ತು ಸೇವಾ ಮನೋಭಾವಗಳನ್ನು ಬೆಳೆಸುವುದು ಹಾಗೂ ೩. ಯುವ ಜನಾಂಗಕ್ಕೆ ದೇಶಸೇವೆಗೆ ಸುವ್ಯವಸ್ಥಿತ ತರಬೇತಿ ನೀಡಿ ದೇಶದ ಪ್ರಗತಿಗೆ, ಹೊಸ ಸಮಾಜದ ರಚನೆಗೆ ಅವರನ್ನು ಸಜ್ಜುಗೊಳಿಸುವುದು ಈ ಸಂಸ್ಥೆಯ ಕೆಲವು ಉದ್ದೇಶಗಳಾಗಿದ್ದವು. ೧೯೬೫-೬೬ರ ವೇಳೆಗೆ ನೂರಕ್ಕೂ ಹೆಚ್ಚು ವಿದ್ಯಾರ್ಥಿಗಳು ದೇಶದ ಪ್ರಗತಿಗಾಗಿ ದುಡಿಯಲು ಈ ಸಂಸ್ಥೆಯಿಂದ ತರಬೇತಿ ಪಡೆದಿದ್ದರು.

**ಜನಪದ ಸೇವಾ ಟ್ರಸ್ಟ್, ಮೇಲುಕೋಟೆ:** ಸರ್ವೋದಯ ಸಮಾಜದ ರಚನೆಗಾಗಿ ಮಹಾತ್ಮ ಗಾಂಧೀಜಿಯವರ ವಿಚಾರಗಳ ಆಧಾರದ ಮೇಲೆ ಕಾರ್ಯಕ್ರಮ ನಡೆಸುವ ಉದ್ದೇಶದಿಂದ, ಸಾರ್ವಜನಿಕರಿಂದ ಧನ ಸಹಾಯ ಪಡೆದು, ೧೯೬೦ರಲ್ಲಿ ಈ ಸಂಸ್ಥೆ ಆರಂಭಗೊಂಡಿತು. ಸುರೇಂದ್ರ ಕೌಜಲಗಿ, ನಾರಾಯಣಸ್ವಾಮಿ, ಟಿ.ಎಲ್.ಭೈರಶೆಟ್ಟಿ, ಎಸ್. ಪಟ್ಟಾಭಿರಾಮನ್, ಬಿ.ಆರ್.ಪ್ರಾಣೇಶ್‌ರಾವ್. ಗಿರಿಜಾ, ಬಿ.ಕೆ.ಕೆಂಚೇಗೌಡ, ಮುಂತಾದವರು ಇದರ ಸ್ಥಾಪಕರು ಮತ್ತು ಅಜೀವ ಧರ್ಮದರ್ಶಿಗಳು. ನೂಲು, ನೇಯ್ಗೆ, ಮುದ್ರಣಾಲಯ, ಖಾದಿ ಮಾರಾಟ ಕೇಂದ್ರ ಹಾಗೂ ಮಾಸಿಕ ಪತ್ರಿಕೆಗಳನ್ನೂ ಈ ಟ್ರಸ್ಟ್‌ನಿಂದ ನಿರ್ವಹಿಸಲಾಗುತ್ತದೆ. ೧೯೮೭-೮೮ನೇ ಸಾಲಿನಲ್ಲಿ, ೮೫ ಜನ ಈ ಸಂಸ್ಥೆಯ ಪ್ರಯೋಜನ ಪಡೆದಿದ್ದರು. ೧೯೬೦ರಲ್ಲಿ ಪ್ರಾರಂಭವಾದ ಸಂತೇಬಾಚಹಳ್ಳಿಯ ಮಕ್ಕಳ ಮಂದಿರ, ಮೇಲುಕೋಟೆಯ ಕರುಣಾಗೃಹ, ೧೯೬೨ರಲ್ಲಿ ಸ್ಥಾಪನೆಯಾದ ಮೇಲುಕೋಟೆಯ ವಿಶ್ವೇಶ್ವರಯ್ಯ ಕೈಗಾರಿಕಾ ಕೇಂದ್ರ, ಅಂಗವಿಕಲರಿಗಾಗಿ ೧೯೬೩ರಲ್ಲಿ ಆರಂಭಗೊಂಡ ಇವು ಮೇಲುಕೋಟೆಯ ಜನಪದ ಸೇವಾ ಟ್ರಸ್ಟ್‌ನ ಅಂಗಸಂಸ್ಥೆಗಳಾಗಿದ್ದವು. ಈಗ ಈ ಸಂಸ್ಥೆ ದೊಡ್ಡ ವಿದ್ಯಾ ಸಂಸ್ಥೆಯಾಗಿ ಬೆಳೆದು ನಿಂತಿದೆ.

೧೯೬೦ರಲ್ಲಿ ಆರಂಭಗೊಂಡ ಮೇಲುಕೋಟೆಯ ವನಿತಾ ಸಮಾಜ, ನಾಗಮಂಗಲದಲ್ಲಿ ೧೯೬೨ರಲ್ಲಿ ಸ್ಥಾಪನೆಗೊಂಡ ಶ್ರೀ ಶಾರದಾ ಮಹಿಳಾ ಸಮಾಜ, ಬೆಕ್ಕಳಲೆ, ದುಂಡೇನಹಳ್ಳಿ, ಹೆಬ್ಬೆರಳು, ಕೆಸ್ತೂರು ಮುಂತಾದ

ಸ್ಥಳಗಳಲ್ಲಿರುವ ಮಹಿಳಾ ಮಂಡಲಗಳು, ಮಹಿಳೆಯರಿಗೆ ಕರಕುಶಲ ಕಲೆಗಳಲ್ಲಿ ತರಬೇತಿ, ಹೊಲಿಗೆ ವೃತ್ತಿ, ಸಾಮಾಜಿಕ ಪ್ರಗತಿಗೆ ಅರಿವು ಮೂಡಿಸುವ ತರಗತಿ ಮುಂತಾದವನ್ನು ನಡೆಸುತ್ತಿದ್ದವು. ಮೊದಲ ಮೂರು ಮಂಡಳಿಗಳು, ಮೈಸೂರು ರಾಜ್ಯದ ಸಮಾಜಕಲ್ಯಾಣ ಸಲಹಾ ಮಂಡಳಿಯಿಂದ ೧,೫೦೦ ರೂಪಾಯಿಗಳನ್ನೂ, ಕೆಸ್ತೂರು ಮಂಡಳಿಯು, ೧,೦೦೦ ರೂಪಾಯಿಗಳನ್ನೂ, ೧೯೬೫-೬೬ರಲ್ಲಿ ಅನುದಾನವಾಗಿ ಪಡೆದಿದ್ದವು. ಮಹಿಳೆಯರ ಮತ್ತು ಮಕ್ಕಳ ಪ್ರಗತಿಗಾಗಿ ನಡೆಸಲ್ಪಡುತ್ತಿದ್ದ ಈ ಮಹಿಳಾ ಮಂಡಳಿಗಳ ಪದಾಧಿಕಾರಿಗಳಿಗೆ, ರಾಜ್ಯ ಸಮಾಜ ಕಲ್ಯಾಣ ಮಂಡಳಿಯಿಂದ ತರಬೇತಿಯನ್ನೂ ನೀಡಲಾಗಿತ್ತು.

'ಸ್ವಾವಲಂಬಿಯಾಗು ಮತ್ತು ನಿನ್ನ ಸುತ್ತಲಿನ ಸಮುದಾಯ ಕೂಡ ಸ್ವಾವಲಂಬಿಯಾಗಲು ಸಹಕರಿಸು', ಎಂಬ ಬೀಜ ಮಂತ್ರದೊಡನೆ ೧೯೮೪ರಲ್ಲಿ ಮೇಲುಕೋಟೆಯನ್ನು ಕೇಂದ್ರಸ್ಥಾನವಾಗಿಸಿಕೊಂಡು, ಕೆಲವು ಯುವಜನರನ್ನು ಒಟ್ಟುಗೂಡಿಸಿ, ಪಿ.ಎಂ.ಕೆ.ನಂಬೂದರಿಯವರ ಮುಂದಾಳತ್ವದಲ್ಲಿ ಆರಂಭಗೊಂಡ 'ವಿಕಸನ ಗ್ರಾಮೀಣ ಅಭಿವೃದ್ಧಿ ಸಂಸ್ಥೆ'ಯು ಒಂದು ಸ್ವಯಂ ಸೇವಾ ಸಂಘಟನೆಯಾಗಿದ್ದು, ರಾಜ್ಯದ ೪೦೦ ಗ್ರಾಮಗಳಲ್ಲಿ ಕೆಲಸ ನಿರ್ವಹಿಸುತ್ತಿದೆ. ೧೯೮೬-೮೭ರಲ್ಲಿ ಕಪಾರ್ಟ್ ಧನ ಸಹಾಯದಿಂದ, ಇಂದಿರಾ ಆವಾಸ್ ಯೋಜನೆಯಡಿ ಪಾಂಡವಪುರ ತಾಲೂಕಿನಲ್ಲಿ ಪ್ರತಿ ಮನೆಗೆ ರೂ.೧೫,೪೦೦ರಂತೆ ರೂ. ೬,೬೨,೨೦೦ಗಳ ವೆಚ್ಚದಲ್ಲಿ ೪೩ ಮನೆಗಳನ್ನು ಈ ಸಂಸ್ಥೆಯ ಮೂಲಕ ಕಟ್ಟಿಸಿ ಕೊಡಲಾಗಿದೆ. ೧೯೯೮-೯೯ ಹಾಗೂ ೧೯೯೯-೨೦೦೦ದಲ್ಲಿ ವಿಶ್ವ ಬ್ಯಾಂಕ್ ಯೋಜನೆಯಡಿ, ಜಿಲ್ಲೆಯ ಕೆಲವು ಗ್ರಾಮಗಳಲ್ಲಿ, ನಿರ್ಮಲ ಗ್ರಾಮ ಸ್ಥಾಪನೆಗಾಗಿ ಸಲಹೆಗಳನ್ನೂ ನೀಡಿದೆ.

**ಸಮಷ್ಟಿ ಟ್ರಸ್ಟ್ ಕೃಷ್ಣರಾಜಪೇಟೆ :** ಅನೌಪಚಾರಿಕ ಶಿಕ್ಷಣ, ಆರೋಗ್ಯಾಭಿವೃದ್ಧಿ, ಪರಿಸರ ಜಾಗೃತಿ, ಮಹಿಳಾ ಸ್ವಸಹಾಯ ಸಂಘ, ಬಾಲ ಕಾರ್ಮಿಕರ ಪುನರ್ವಸತಿ ಕಾರ್ಯಕ್ರಮ, ತಿಳುವಳಿಕೆ ಶಿಬಿರ, ಇತ್ಯಾದಿ ಕಾರ್ಯಕ್ರಮಗಳನ್ನು ನಡೆಸುವ ಉದ್ದೇಶದಿಂದ ಈ ಸಂಸ್ಥೆಯು ೧೯೮೭ರಲ್ಲಿ ಆರಂಭಗೊಂಡಾಗ, ಎಂ.ವಿ.ಸೇತುಮಾಧವ ಮುಂದಾಳಾಗಿ ಕಾರ್ಯ ನಿರ್ವಹಿಸಿದರು. ಅಲ್ಲಿಂದ ಈವರೆಗೆ ಸಮಾಜದ ಹಿಂದುಳಿದ ಜನಾಂಗಕ್ಕೆ ಹಲವಾರು ರೀತಿಯಲ್ಲಿ ಇದು ನೆರವಾಗಿದೆ. ಊರುವಾರಿ ಜನಾಂಗದ ಜಮೀನನ್ನು, ಅವರಿಗೆ ಸಾಗುವಳಿ ಮಾಡಲು ಉಳಿಸಿಕೊಟ್ಟಿದೆ. ಉದ್ದಿನಬೋರೆಕಾವಲು ಗ್ರಾಮದ ಹಂದಿಜೋಗಿ ಜನಾಂಗದವರಿಗೆ, ವಾಸಿಸಲು ಸರ್ಕಾರದಿಂದ ಮನೆಗಳನ್ನು ಕಟ್ಟಿಸಿಕೊಟ್ಟು, ಒಂದು ಲಕ್ಷ ರೂಪಾಯಿಗಳ ಖರ್ಚಿನಲ್ಲಿ ಬೀದಿ ದೀಪಗಳ ವ್ಯವಸ್ಥೆ ಮಾಡಿದೆ. ತೇಗನಹಳ್ಳಿ ಗ್ರಾಮದಲ್ಲಿ ಮನೆ ಕುಸಿದುಬಿದ್ದ ಐದು ಕುಟುಂಬಗಳಿಗೆ ದ್ವಾಕ್ರಾದಿಂದ ಹಣವನ್ನೂ ಒದಗಿಸಿಕೊಟ್ಟಿದೆ. ಅಡೇನಹಳ್ಳಿಕೊಪ್ಪಲು, ಚಾಮಿಕೊಪ್ಪಲು, ಹರಿಹರಪುರ, ಆನೆಗೊಳ ಮುಂತಾದ ಗ್ರಾಮಸ್ಥರಿಗೆ ಮನೆಗಳನ್ನೂ, ಮೀನುಗಾರಿಕೆ ಇಲಾಖೆಯ ಮೂಲಕ ೧೫ ಜನರಿಗೆ ಸೈಕಲ್, ಬಲೆ, ದೋಣಿ, ಇತ್ಯಾದಿಗಳನ್ನೂ ಕೊಡಿಸಿದೆ. ಭಿಕ್ಷಾಟನೆಗಿಳಿದ ೧೪ ವರ್ಷ ವಯಸ್ಸಿನೊಳಗಿನ ಮಕ್ಕಳ ಮಾಹಿತಿ ಸಂಗ್ರಹಿಸಿ, ಅನೌಪಚಾರಿಕ ಶಿಕ್ಷಣ ನೀಡಿ ಶಾಲೆಗೆ ಸೇರಿಸುವ ವ್ಯವಸ್ಥೆ ಮಾಡಿದೆ. ಕಳೆದ ಮೂರು ವರ್ಷಗಳ ಅವಧಿಯಲ್ಲಿ ಈ ಸಂಸ್ಥೆಯಲ್ಲಿ ೪,೪೨೦ ಫಲಾನುಭವಿಗಳಿದ್ದು, ಇದಕ್ಕಾಗಿ ೬,೧೦,೦೦೦ ರೂಪಾಯಿಗಳನ್ನು ಖರ್ಚು ಮಾಡಿದೆ.

**ಈಸ್ ಟ್ರೇನಿಂಗ್ ಇನ್ಸ್ಟಿಟ್ಯೂಷನ್ :** (ಇಟಿಐ), (ಸಾಧನಾ ವಿದ್ಯಾ ಮತ್ತು ಸಣ್ಣ ಉದ್ದಿಮೆದಾರರ ತರಬೇತಿ ಸಂಸ್ಥೆ) ಯೂ ಹಲವಾರು ಕೋರ್ಸ್‌ಗಳನ್ನು ನಡೆಸುತ್ತಿದ್ದು ನಿರುದ್ಯೋಗ ನಿರ್ಮೂಲನ, ಸ್ವಯಂ ಉದ್ಯೋಗ ಹಾಗೂ ಕೈಗಾರಿಕೆಗಳನ್ನು ಅಭಿವೃದ್ಧಿಪಡಿಸುವ ಧ್ಯೇಯದಿಂದ, ೧೯೯೨ರಲ್ಲಿ ಬಿ.ವಿ.ದೇವರಾಜು, ಶ್ರೀಮತಿ ಎಂ.ಸಿ.ಕಸ್ತೂರಿ ಮತ್ತು ಎಂ.ಸಿ.ಚಿಕ್ಕಣ್ಣನವರ ಮುಂದಾಳತ್ವದಲ್ಲಿ ಕಾರ್ಯಾರಂಭ ಮಾಡಿತು. ಈ ಸಂಸ್ಥೆ ಉದ್ಯೋಗಾರ್ಥಿಗಳಿಗೆ ವಿವಿಧ ರೀತಿಯಲ್ಲಿ ನೆರವು ನೀಡುತ್ತದೆ. ಸಂಸ್ಥೆಯು ೧೯೯೨ರಲ್ಲಿ ಕಾರ್ಯಾರಂಭ ಮಾಡಿದಾಗ, ೪೦೦ ಫಲಾನುಭವಿಗಳಿದ್ದು,

೧೯೯೭-೯೮ರಲ್ಲಿ ೧,೨೩೫ ಫಲಾನುಭವಿಗಳು ಇದರ ಸೌಲಭ್ಯವನ್ನು ಪಡೆದಿರುತ್ತಾರೆ. ಕ್ರಮವಾಗಿ ರೂ.೦.೮೦ ಹಾಗೂ ೧.೧೭ಲಕ್ಷ ರೂಪಾಯಿಗಳನ್ನು ಸದರಿ ವರ್ಷಗಳಲ್ಲಿ ಖರ್ಚು ಮಾಡಲಾಗಿದೆ.

**ಧ್ವನಿ (ಗ್ರಾಮೀಣಾಭಿವೃದ್ಧಿ ಸಂಸ್ಥೆ), ನಾಗಮಂಗಲ :** ಅನಕ್ಷರತೆ, ಮೂಢ ನಂಬಿಕೆ, ಕೊಳಚೆ ಪರಿಸರ, ಸಾಮಾಜಿಕ ಶೋಷಣೆ, ಮುಂತಾದವು ಜಿಲ್ಲೆಯ ಅತಿ ಹಿಂದುಳಿದ ಪ್ರದೇಶವಾದ ನಾಗಮಂಗಲ ತಾಲೂಕಿನಲ್ಲಿ ಕಂಡು ಬಂದಿರುವುದನ್ನು ಮನಗಂಡು, ಸುಧಾರಣೆ ತರಲು 'ಧ್ವನಿ' ಎಂಬ ಸ್ವಯಂ ಸೇವಾ ಸಂಸ್ಥೆ ಆರಂಭಗೊಂಡಿತು. ರಾಜ್ಯ ಹಾಗೂ ರಾಷ್ಟ್ರ ಯುವ ಪ್ರಶಸ್ತಿ ವಿಜೇತ ಕೆ.ನಾಗಣ್ಣಗೌಡರ ಕಾರ್ಯದರ್ಶಿತ್ವದಲ್ಲಿ, ೧೯೯೩ರಲ್ಲಿ ಆರಂಭಗೊಂಡ ಸಂಸ್ಥೆ ಇದು. ಸ್ವಸಹಾಯ ತಂಡಗಳ ರಚನೆ, ಕಡ್ಡಾಯ ಶಿಕ್ಷಣ ಆಂದೋಲನ, ಪರಿಸರ ಜಾಗೃತಿ, ಮತ್ತಿತರ ಹಲವಾರು ಅಭಿವೃದ್ಧಿ ಕಾರ್ಯಕ್ರಮಗಳನ್ನು ಇದು ಹಮ್ಮಿಕೊಂಡಿದೆ.

**ಭಾರತ್ ವಿಕಾಸ್ ಪರಿಷತ್ :** ಇದು ಮಂಡ್ಯ ಜಿಲ್ಲೆಯ ಒಂದು ಸಾಮಾಜಿಕ ಸೇವಾ ಸಂಸ್ಥೆಯಾಗಿದ್ದು, ಮದ್ದೂರು ತಾಲೂಕು ಘಟಕವನ್ನು ೧೯೯೩ರಲ್ಲಿ ಆರಂಭಿಸಿದೆ. ವಿದ್ಯಾರ್ಥಿಗಳಿಗೆ ಉಚಿತ ಸಮವಸ್ತ್ರ ವಿತರಣೆ, ಧನಸಹಾಯ, ಬಹುಮಾನದ ಮೂಲಕ ಪ್ರೋತ್ಸಾಹ, ಕಣ್ಣಿನ ಪೊರೆ ತೆಗೆಸುವುದು, ಆರೋಗ್ಯ ಶಿಬಿರ, ದಂತ ರೋಗಕ್ಕೆ ಚಿಕಿತ್ಸೆ, ಹೃದಯ ರೋಗ ಚಿಕಿತ್ಸೆ, ಪೋಲಿಯೋ, ಸಕ್ಕರೆ ಕಾಯಿಲೆ, ಕಾಮಾಲೆ, ಕ್ಯಾನ್ಸರ್ ಮತ್ತು ಸ್ತ್ರೀರೋಗಗಳಿಗೆ ಉಚಿತ ಚಿಕಿತ್ಸೆ ಮುಂತಾದವನ್ನು ಈ ಸಂಸ್ಥೆಯ ಮೂಲಕ ಮಾಡಲಾಗಿದೆ.

ಸ್ವರ್ಣಸಂದ್ರದ ಬಡಾವಣೆಯಲ್ಲಿ ೧೯೯೫ರಿಂದ ಸರ್ಕಾರದ ನೆರವಿಲ್ಲದೆ ನಡೆಸಲಾಗುತ್ತಿರುವ ಮಂಡ್ಯ ಅಂಧ ಮತ್ತು ಅಂಗವಿಕಲರ ಉಚಿತ ವಿದ್ಯಾರ್ಥಿ ನಿಲಯದಲ್ಲಿ ಆರು ವರ್ಷದಿಂದ ೧೪ ವರ್ಷ ವಯಸ್ಸಿನ ಮಕ್ಕಳಿಗೆ ನಿತ್ಯದ ಶಿಕ್ಷಣ, ಬ್ರೇಲ್ ಲಿಪಿಯಲ್ಲಿ ತರಬೇತಿ, ಆಟ-ಊಟ-ವಸತಿ, ಮುಂತಾದ ಸೌಲಭ್ಯಗಳನ್ನು ನೀಡಲಾಗುತ್ತದೆ. ಗೆಜ್ಜಲಗೆರೆಯ ಸುನಂದಾ ಜಯರಾಂ, ನಿರ್ಮಲಾಚಿಕ್ಕೇಗೌಡ, ತಾವರಗೆರೆಯ ನಾಗರೇವಕ್ಕ, ಇಂಡುವಾಳು ಶಿವಮ್ಮ, ಗುತ್ತಲಿನ ಪದ್ಮ ಹಾಗೂ ಗೊರವನಹಳ್ಳಿಯ ಶ್ರೀಲತಾ ಅವರು ೧೯೯೯ರಲ್ಲಿ 'ಸ್ಪಂದನ' ಎಂಬ ಮಹಿಳಾ ಸಂಘಟನೆಯೊಂದನ್ನು ನೊಂದ ಮಹಿಳೆಯರಿಗೆ ಮಾರ್ಗದರ್ಶನ ಮತ್ತು ಬೆಂಬಲ ನೀಡುವ ಸಲುವಾಗಿ ಹುಟ್ಟು ಹಾಕಿದ್ದಾರೆ. ಮಹಿಳೆಯರ ಕೌಟುಂಬಿಕ ಕಲಹ, ವಿಚ್ಛೇದನೆ, ವಿರಸ, ಆಸ್ತಿ, ವರದಕ್ಷಿಣೆ ಮುಂತಾದ ಸಮಸ್ಯೆಗಳನ್ನು ಪರಿಶೀಲಿಸಿ ನ್ಯಾಯಯುತ ಕ್ರಮ ತೆಗೆದುಕೊಂಡು ಪರಿಹಾರ ಸೂಚಿಸುವುದೂ ಈ ಸಂಸ್ಥೆಯ ಉದ್ದೇಶವಾಗಿದೆ.

ಬುಡಕಟ್ಟು ಜನಾಂಗದ ಮಹಿಳೆಯರ ಸಂಘ ರಚನೆ, ಮಕ್ಕಳ ಅಭಿವೃದ್ಧಿ, ಆರೋಗ್ಯ, ಶಿಕ್ಷಣ, ಪ್ರಗತಿ, ಸಾಲ ಯೋಜನೆ, ಉಳಿತಾಯ ಯೋಜನೆ ಇತ್ಯಾದಿ ಸಂಪೂರ್ಣ ಗ್ರಾಮೀಣ ಅಭಿವೃದ್ಧಿಯ ಉದ್ದೇಶದಿಂದ ಮಳವಳ್ಳಿ ತಾಲೂಕಿನಲ್ಲಿ ೧೯೯೮ರಲ್ಲಿ ಪ್ರಾರಂಭಗೊಂಡಿರುವ ಆನೇಕಲ್ ಪುನರ್ವಸತಿ, ವಿದ್ಯಾ ಮತ್ತು ಅಭಿವೃದ್ಧಿ ಕೇಂದ್ರ (ರೀಡ್ ಸೆಂಟರ್), ಮಂಡ್ಯದ ಸೇಂಟ್ ಜಾನ್ಸ್ ಆ್ಯಂಬುಲೆನ್ಸ್ ಸಂಸ್ಥೆ, ಭಾರತ ಸ್ಕೌಟ್ಸ್ ಮತ್ತು ಗೈಡ್ಸ್, ಬ್ರಹ್ಮಾಕುಮಾರಿ ಈಶ್ವರೀಯ ವಿಶ್ವವಿದ್ಯಾಲಯ ಆಶ್ರಮ, ರೋಹಿಣಿ ಮಹಿಳಾ ಮಂಡಳಿ, ಮುಂತಾದವು ಜಿಲ್ಲೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಇನ್ನಿತರ ಸೇವಾ ಸಂಸ್ಥೆಗಳಾಗಿವೆ.